ಾ ಮತ್ತು ಬಾಪು 150ನೇ ಜನ್ಮ ವರ್ಷಾಚರಣೆ ಪುಸ್ತಕ ಮಾಲಿಕೆ

ನಾನಾನೆಂಬುದು ನಾನಲ್ಲ

ಪ್ರೊ. ಬಿ.ಆರ್. ಪೋಲೀಸ್‌ಪಾಟೀಲ





ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಬೆಂಗಳೂರು

ಬಾ–ಬಾಪು



ವರ್ಷಾಚರಣೆ

ನಾನಾನೆಂಬುದು ನಾನಲ್ಲ


(ಮೈಸೂರು ಅಸೋಸಿಯೇಶನ್, ಮುಂಬೈ 2019ರಲ್ಲಿ
ಏರ್ಪಡಿಸಿದ್ದ ನೇಸರು ಜಾಗತಿಕ ಏಕಾಂಕ ನಾಟಕ
ರಚನಾ ಸ್ಪರ್ಧೆಯಲ್ಲಿ ಬಹುಮಾನಿತ ನಾಟಕ)

ಪ್ರೊ. ಬಿ.ಆರ್. ಪೊಲೀಸ್‌ಪಾಟೀಲ

ಪ್ರಕಾಶಕರು
ಕರ್ನಾಟಕ ಗಾಂಧೀ ಸ್ಮಾರಕ ನಿಧಿ
ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು – 560001, ದೂರವಾಣಿ : 080–22261967
ಇಮೇಲ್ : gandhibhavanabengaluru@gmail.com

ನಾನಾನೆಂಬುದು ನಾನಲ್ಲ (ನಾಟಕ)
ಲೇಖಕರು : ಪ್ರೊ. ಬಿ.ಆರ್. ಪೋಲೀಸ್‌ಪಾಟೀಲ, ಬನಹಟ್ಟಿ
ಪ್ರಕಾಶಕರು : ಕರ್ನಾಟಕ ಗಾಂಧೀ ಸ್ಮಾರಕ ನಿಧಿ
ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು – 560001, ದೂರವಾಣಿ : 080–22261967

ಪುಟಗಳು	:	XXIV + 62
ಬೆಲೆ	:	ರೂ. 72/–
ಪ್ರತಿಗಳು	:	700
ಮೊದಲ ಮುದ್ರಣ	:	2021
©	:	ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಒಳ ಪುಟ ಕಾಗದ	:	58 ಜಿ.ಎಸ್.ಎಂ. ಮ್ಯಾಪ್‌ಲಿತೋ
ಮುಖ ಪುಟ	:	300 ಜಿ.ಎಸ್.ಎಂ. ಆರ್ಟ್ ಕಾರ್ಡ್
ಸಹಕಾರ	:	ರಾಷ್ಟ್ರೀಯ ಸೇವಾ ಯೋಜನೆ
ವಿನ್ಯಾಸ & ಮುದ್ರಣ	:	ಕ್ರಿಯೇಟಿವ್‌ಗೀಕ್ಸ್ ಯಾದವ ಕಾಲೇಜು ರಸ್ತೆ ಮಾಧವನಗರ, ಬೆಂಗಳೂರು–560001 ದೂರವಾಣಿ : 080 40927049




ಅರ್ಪಣೆ

ಸ್ವಾತಂತ್ರ್ಯ ಮತ್ತು ಸಾಮಾಜಿಕ ಹೋರಾಟಗಾರ
ಹಿರಿಯ ಗಾಂಧಿವಾದಿ

ಶ್ರೀ ಎಚ್.ಎಸ್. ದೊರೆಸ್ವಾಮಿ

ಅವರಿಗೆ ಗೌರವಪೂರ್ವಕವಾಗಿ



ಮಾನವ ವ್ಯಕ್ತಿತ್ವವನ್ನು ಪರಿಗಣಿಸದಿದ್ದಲ್ಲಿ ಸಮಾಜ ಎಲ್ಲಿದ್ದೀತು? ಸಾಮಾಜಿಕ ಕಾರ್ಯಕ್ಕೆ ತನ್ನನ್ನು ಸಂಪೂರ್ಣವಾಗಿ ಸಮರ್ಪಿಸಿಕೊಳ್ಳುವ ಇಚ್ಛೆ ವ್ಯಕ್ತಿಸ್ವಾತಂತ್ರ್ಯದ ಮೂಲಕವೇ ಮೂಡಿ ಬಂದೀತು. ಅವನ ಸಹಕಾರವನ್ನು ಬಲಾತ್ಕಾರದಿಂದ ಪಡೆದುದಾದರೆ ಅವನು ಜಡ ಯಂತ್ರವಾಗಿಬಿಡುತ್ತಾನೆ. ಸಮಾಜವೂ ಹಾಳಾಗುತ್ತದೆ. ವ್ಯಕ್ತಿ ಸ್ವಾತಂತ್ರ್ಯವನ್ನು ನಿರಾಕರಿಸಿ ಯಾವ ಸಮಾಜವನ್ನೂ ಸದೃಢವಾಗಿ ಕಟ್ಟಲಾಗುವುದೇ ಇಲ್ಲ.

– ಮಹಾತ್ಮ ಗಾಂಧಿ

ನಿಮ್ಮೊಡನೆ

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯು ಬಾ ಮತ್ತು ಬಾಪು ಅವರ ಜನ್ಮದಿನಾಚರಣೆ ಮತ್ತು ಸ್ವಾತಂತ್ರ್ಯೋತ್ಸವ-75 ಅಮೃತ ಮಹೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲು ಹಾಕಿಕೊಂಡಿರುವ ಹಲವಾರು ಕಾರ್ಯ ಯೋಜನೆಗಳಲ್ಲಿ, ಗಾಂಧೀಜಿ ಅವರ ಚಿಂತನೆಗಳು ಮತ್ತು ತತ್ವ ಸಿದ್ಧಾಂತಗಳುಳ್ಳ ಸಾಹಿತ್ಯವನ್ನು ಪ್ರಕಟಿಸುವುದು, ಪ್ರದರ್ಶಿಸುವುದು ಮತ್ತು ವಿತರಿಸುವುದೂ ಪ್ರಮುಖವಾದುದಾಗಿದೆ. ಅದರಂತೆ ಮಹಾತ್ಮ ಗಾಂಧಿ ಅವರ ದಕ್ಷಿಣ ಆಫ್ರಿಕಾದಲ್ಲಿನ ಘಟನೆಯನ್ನಾಧರಿಸಿ ಬಿ.ಆರ್. ಪೊಲೀಸ್‌ಪಾಟೀಲ ಅವರು ರಚಿಸಿದ "ನಾನಾನೆಂಬುದು ನಾನಲ್ಲ" ಎಂಬ ನಾಟಕವನ್ನು ಪ್ರಕಟಿಸಲು ಅತ್ಯಂತ ಹರ್ಷವಾಗುತ್ತದೆ.

ವಿಶ್ವದಾದ್ಯಂತ, ಮಹಾತ್ಮಾಜೀ ಅವರನ್ನು ಕುರಿತಾಗಿ ಹತ್ತಾರು ಸಾಕ್ಷ್ಯ ಚಿತ್ರಗಳು, ನಾಟಕಗಳು, ಸಿನಿಮಾಗಳು ನಿರ್ಮಾಣವಾಗಿದೆ. ಅದರ ಭಾಗವಾಗಿ ಈ ನಾಟಕವೂ ಅಷ್ಟೇ ಪ್ರಸಿದ್ಧಿಯನ್ನು ಪಡೆಯಲಿ ಎಂದು ಆಶಿಸುತ್ತೇನೆ. ನಾಟಕ ಅಭಿನಯಕ್ಕೆ ಒಳಪಟ್ಟಾಗಲೇ, ಅದರ ಸೊಗಡು, ಗುಣ, ಜನಮನದಾಳವನ್ನು ತಲುಪುತ್ತದೆ. ಆ ಪ್ರಯತ್ನವೂ ಆಗಲಿ ಎಂದು ಹಾರೈಸುತ್ತೇನೆ. ಮೂಲತಃ ಪ್ರಾಧ್ಯಾಪಕರಾಗಿರುವ ಪ್ರೊ. ಬಿ.ಆರ್. ಪೊಲೀಸ್‌ಪಾಟೀಲ ಅವರು ಇದುವರೆಗಿನ ಅವರ ಜೀವನ ಕಾಲವನ್ನು ಕನ್ನಡ ಜಾಜಪದ ಮತ್ತು ರಂಗಭೂಮಿಯನ್ನು ವಿವಿಧ ಆಯಾಮಗಳಲ್ಲಿ ಪಸರಿಸುತ್ತಾ, ಕರ್ನಾಟಕದ ಗ್ರಾಮೀಣ ಜನಜೀವನವನ್ನು ಕಟ್ಟಿಕೊಡುವ ಅನನ್ಯವಾದ ಕೆಲಸ ಮಾಡುತ್ತಿದ್ದಾರೆ. ದೇಹದ ನರನಾಡಿಯಲ್ಲಿ ಕನ್ನಡದ ಸಾಂಸ್ಕೃತಿಕತೆ ಮತ್ತು ಸಾಹಿತ್ಯವನ್ನೇ ತುಂಬಿಕೊಂಡಿರುವ ಪ್ರೊ. ಬಿ.ಆರ್. ಪೊಲೀಸ್‌ಪಾಟೀಲ ಅವರ ನಾಟಕ ನೂರಾರು ಪ್ರಯೋಗಗಳನ್ನು ಕಾಣಲಿ. ಗಾಂಧಿ ಮತ್ತು ಕಸ್ತೂರ್‌ಬಾ ಅವರ ದಕ್ಷಿಣ ಆಫ್ರಿಕಾದ ಜೀವನ ಸ್ವಾರಸ್ಯ - ಸೌಂದರ್ಯಗಳು ಜನರಿಗೆ ಮುಖ್ಯವಾಗಿ, ಯುವಜನರಿಗೆ ತಿಳಿಯುವಂತಾಗಲಿ ಎಂದು ಹಾರೈಸುತ್ತೇನೆ.

ಗಾಂಧಿ ಭವನದಿಂದ ಗಾಂಧೀಜಿ ಅವರನ್ನು ನಾಟಕಗಳ ಮೂಲಕ ತಿಳಿದುಕೊಳ್ಳಲು ಪ್ರಯತ್ನಗಳಾದುದು ತೀರಾ ಅಪರೂಪ. ಗಾಂಧೀಜಿ ಅವರ ಸಾಕ್ಷ್ಯಚಿತ್ರಗಳು, ಕಿರು ಚಿತ್ರಗಳು, ಏಕಪಾತ್ರಾಭಿನಯಗಳನ್ನು ಹಲವಾರು ಬಾರಿ ಪ್ರದರ್ಶಿಸಿದ್ದುಂಟು. ಗಾಂಧೀಜಿ ಅವರನ್ನು ಕುರಿತು ನಾಟಕ ಕೃತಿಗಳ ಪ್ರಕಟಣೆ ಮಾಡಿದ್ದು ತೀರಾ ವಿರಳ. ಈ ತಹಲ್‌ವರೆಗೆ ಇದನ್ನೂ ಸೇರಿದಂತೆ ಮೂರನೇ ನಾಟಕ ಕೃತಿ ಪ್ರಕಟಣೆ ಇರಬಹುದೆಂದೆನಿಸುತ್ತದೆ. ಗಾಂಧೀಜಿ ಅವರನ್ನು ಕುರಿತಾಗಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ

ಹಲವಾರು ನಾಟಕಗಳು ಪ್ರಸಿದ್ಧವಾಗಿವೆ. ಅವುಗಳಲ್ಲಿ 'ಸತ್ಯ ಹರಿಶ್ಚಂದ್ರ', 'ಶ್ರವಣನ ಪಿತೃಭಕ್ತಿ', 'ನಾನು ಗಾಂಧಿ' ನಾಟಕಗಳು ಅತಿ ಹೆಚ್ಚಿನ ಪ್ರದರ್ಶನ ಕಂಡದ್ದೂ ಉಂಟು. ಹಾಗೂ ಬಹು ಚರ್ಚಿತವಾದ ಮತ್ತು ವಿಮರ್ಶೆಗೊಳಪಟ್ಟವೂ ಆಗಿದ್ದವು. ಇವೆಲ್ಲವೂಗಳು ಗಾಂಧಿ ಅವರ ಕೌಟುಂಬಿಕ ಜೀವನದಲ್ಲಿ ಅವರು ತೆಗೆದುಕೊಂಡ ನೀತಿ–ನಿರ್ಧಾರಗಳಿಗೆ ಮತ್ತು ಸ್ವಾತಂತ್ರ್ಯ ಹೋರಾಟದಲ್ಲಿ ಅವರ ಪಾಲ್ಗೊಳ್ಳುವಿಕೆಗೆ ಪ್ರೇರಣೆ ನೀಡಿದವುಗಳಾಗಿದ್ದವು. ಗಮನಿಸಬೇಕಾದ ಪ್ರಮುಖ ವಿಷಯವೆಂದರೆ ಈ ನಾಟಕ ಕೃತಿ ಗಾಂಧೀಜಿ ಅವರ ದಕ್ಷಿಣ ಆಫ್ರಿಕಾದಲ್ಲಿನ ಜೀವನವನ್ನಾಧರಿಸಿದ್ದಾಗಿದೆ. ಇವರು ದಕ್ಷಿಣ ಆಫ್ರಿಕಾದಲ್ಲಿ ಸಾರ್ವಜನಿಕ ವ್ಯಕ್ತಿಯಾಗಿ ರೂಪುಗೊಂಡ ಪ್ರಮುಖ ಘಟ್ಟಗಳೂ ಮತ್ತು ಅದರಿಂದ ಕುಟುಂಬದಲ್ಲುಂಟಾದ ಘಟನೆಗಳು ಮತ್ತು ಪರಿಣಾಮಗಳ ಚಿತ್ರಣವನ್ನು 'ನಾನಾನೆಂಬುದು ನಾನಲ್ಲ' ನಾಟಕ ಅನಾವರಣಗೊಳಿಸುತ್ತದೆ.

ಮಹಾತ್ಮಾಜೀ ಅವರು ಬೆಳೆಯಿಸಿಕೊಂಡ ಸಾರ್ವಜನಿಕ ನೀತಿ ನಡಾವಳಿಗಳೇ, ಕುಟುಂಬ ಜೀವನ ಮತ್ತು ಆಶ್ರಮದ ಜೀವನದಲ್ಲಿಯೂ ಅಳವಡಿಸಿಕೊಂಡ, ಪಾರದರ್ಶಕ ಜೀವನಚಿತ್ರಣ ವಿಶ್ವವಂದ್ಯವಾಗಿದೆ. ದಕ್ಷಿಣ ಆಫ್ರಿಕಾದಲ್ಲಿ ಯೌವ್ವನಾವಸ್ಥೆಯಿಂದ, ಮಧ್ಯವಯಸ್ಕನಾಗುತ್ತಿದ್ದ ಗಾಂಧಿಯ ದೈಹಿಕ ಮತ್ತು ಮಾನಸಿಕ ಪರಿವರ್ತನೆಯ ಹಂತವನ್ನು ಈ ನಾಟಕದಲ್ಲಿ ಕಾಣಬಹುದು. ಗಾಂಧಿ ಅವರನ್ನು ಆದರ್ಶವಾಗಿಟ್ಟುಕೊಂಡಿರುವ ಪ್ರೊ. ಪೋಲೀಸ್‌ಪಾಟೀಲ ಅವರು, ನಾಟಕದಲ್ಲಿ ಗಾಂಧೀಜಿ ಅವರ ಪರಿವರ್ತನಾ ಪಥವನ್ನು ಸೊಗಸಾಗಿ ಹೆಣದಿದ್ದಾರೆ. ಈ ಅತ್ಯುತ್ತಮ ನಾಟಕವನ್ನು ಬರೆದು ಗಾಂಧಿ ಭವನದಿಂದ ಪ್ರಕಟಣೆಗಾಗಿ ಕೊಟ್ಟಿರುವುದಕ್ಕಾಗಿ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ನಾಟಕ ಕೃತಿಯೊಂದು ಗಾಂಧಿ ಭವನದಿಂದ ಪ್ರಕಟಣೆಗೊಳ್ಳಲು ಕಾರಣಕರ್ತರಾಗಿರುವ ಮತ್ತು ಆಶಯ ನುಡಿಗಳನ್ನು ಬರೆದಿರುವ ಗಾಂಧಿ ಭವನದ ಉಪಾಧ್ಯಕ್ಷರಾದ ವಿ.ಎನ್. ತಿಪ್ಪನಗೌಡ ಅವರಿಗೆ ಅಭಿನಂದನೆಗಳು ಸಲ್ಲುತ್ತವೆ. ಮುನ್ನುಡಿಯನ್ನು ಬರೆದ ಶ್ರೀ ರಾಗಂ (ರಾಜಶೇಖರ್ ಗಂಗಯ್ಯ ಮಠಪತಿ) ಅವರ ಮಾತುಗಳು ಕೃತಿಯ ಮೌಲ್ಯವನ್ನು ಹೆಚ್ಚಿಸಿದೆ. ಅವರಿಗೆ ನನ್ನ ನಮಸ್ಕಾರಗಳು. ಕೃತಿಗೆ ಪೋಷಕ ನುಡಿ ಬರೆದು, ಕೃತಿ ಮತ್ತು ಕೃತಿಕಾರರ ಬಗ್ಗೆ ಮೆಚ್ಚುಗೆ ನುಡಿಗಳನ್ನು ಅಭಿವ್ಯಕ್ತಿಗೊಳಿಸಿದ ಶ್ರೀ ಹುಲುಗಪ್ಪ ಕಟ್ಟೀಮನಿ ಅವರಿಗೆ ನನ್ನ ನಮನಗಳು.

ಈ ಕೃತಿಯನ್ನು ಪ್ರಕಟಿಸಲು ಸಜ್ಜುಗೊಳಿಸಿದ ಗಾಂಧಿ ಭವನದ ಗೌ. ಕಾರ್ಯದರ್ಶಿ, ಶ್ರೀಮತಿ ಇಂದಿರಾ ಕೃಷ್ಣಪ್ಪ ಅವರಿಗೆ ನನ್ನ ಅಭಿನಂದನೆಗಳು ಸಲ್ಲುತ್ತವೆ. ಈ ಕೃತಿಯನ್ನು ಪ್ರಕಟಿಸಲು ಸಹಕರಿಸಿದ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಎಲ್ಲಾ ಸದಸ್ಯರುಗಳಿಗೂ ಕೃತಜ್ಞತೆಗಳನ್ನು ತಿಳಿಸುತ್ತೇನೆ. ಇದನ್ನು ಅಂದವಾಗಿ ಮುದ್ರಿಸಿದ ಕ್ರಿಯೇಟಿವ್‌ಗೀಕ್ಸ್‌ನ ಮಹೇಶ್ ಮತ್ತು ತಂಡದವರಿಗೆ ಧನ್ಯವಾದಗಳು.

ನಾಡೋಜ ಡಾ. ವೂಡೇ ಪಿ. ಕೃಷ್ಣ
ಅಧ್ಯಕ್ಷರು, ಕ.ಗಾಂ.ಸ್ಮಾ.ನಿಧಿ

ನಮ್ಮ ನಮ್ಮಲ್ಲಿ

ಬಾ ಮತ್ತು ಬಾಪು ಅವರ ಜನ್ಮದಿನಾಚರಣೆ ಮತ್ತು ಸ್ವಾತಂತ್ರ್ಯೋತ್ಸವ-75ರ ಸುಸಂದರ್ಭದಲ್ಲಿ, ಗಾಂಧಿ ಅವರನ್ನು ಅನೇಕ ಆಯಾಮಗಳಿಂದ ತಿಳಿದುಕೊಳ್ಳುವ ಭಾಗವಾಗಿ ಈ ನಾಟಕ ಕೃತಿಯನ್ನು ಲೋಕಾರ್ಪಣೆ ಮಾಡಲು ಹರ್ಷವೆನಿಸುತ್ತದೆ. ಭಾರತ ಸ್ವಾತಂತ್ರ್ಯ ಸಂಗ್ರಾಮದ ಜೊತೆಗೆ ಗಾಂಧೀಜಿ ಅವರ ಸಾಮಾಜಿಕ ಪರಿವರ್ತನಾ ಕೆಲಸಗಳು ಯುವಜನರಿಗೆ ತಲುಪಿಸಲು ನಾಟಕ ರೂಪದ 'ನಾನಾನೆಂಬುದು ನಾನಲ್ಲ' ನಾಟಕವನ್ನು ಶ್ರೀ ಬಿ.ಆರ್. ಪೊಲೀಸ್‌ಪಾಟೀಲ ಅವರು ರಚಿಸಿದ್ದಾರೆ. ಮಹಾತ್ಮಾಜೀ ಮತ್ತು ಕಸ್ತೂರ್‌ಬಾ ಅವರ ದಾಂಪತ್ಯ ಜೀವನದ ಮಧ್ಯಂತರದಲ್ಲಿ ಘಟಿಸಿದ ಸಾಮಾನ್ಯ ಘಟನೆಗಳು, ಅವರನ್ನು ಎರಡೇ ದೋತರದ ಸರಳ ವ್ಯಕ್ತಿಯಾಗಿ ರೂಪಿಸಿದ ಹಾದಿಯನ್ನು ಈ ನಾಟಕ ನಮಗೆ ತಿಳಿಸುತ್ತಾ ಸಾಗಿದೆ. ಸರಳತೆ, ಶಿಸ್ತು, ಸಾರ್ವಜನಿಕ ಜೀವನದಲ್ಲಿ ಅನುಸರಿಸಬೇಕಾದ ನೀತಿ ಇವುಗಳು ದಕ್ಷಿಣ ಆಫ್ರಿಕಾದಲ್ಲಿ ಗಾಂಧಿ ಅವರು ಆಶ್ರಮ ಜೀವನದಿಂದ ಕಲಿತ ಪಾಠವಾಗಿತ್ತು. ತಾನು ಹೇಳುವ ನೀತಿಗೆ ತನ್ನನ್ನೇ ಮೊದಲು ಒಡ್ಡಿಕೊಂಡು, ಆ ನೀತಿ ಪಾಲನೆಯ ಸರಿಯಾದ ಮಾರ್ಗಗಳನ್ನು ಗುರುತಿಸಿಕೊಂಡು. ಕುಟುಂಬದವರು ಅದನ್ನು ಪಾಲನೆ ಮಾಡಲು ಗಾಂಧೀಜಿ ಅವರು ಹೇಳುತ್ತಿದ್ದರು. ಇದು ಅತ್ಯಂತ ಅಪೂರ್ವವಾದ ಗುಣವಾಗಿದ್ದು, ಸರ್ವೇಸಾಧಾರಣವಾಗಿ ಈ ನೀತಿಯ ಪಾಲನೆ ಇರುವುದೇ ಇಲ್ಲ. 'ತಾನೂ ಹೇಳುವವನ್ನೂ ಬಾಕಿಯವರು ಕೇಳುವವರು' ಎಂಬ ತರತಮದ ಭಾವನೆಯೇ ತುಂಬಿಕೊಂಡಿರುತ್ತದೆ. ಅದಕ್ಕೆ ಅಪವಾದವೆಂಬಂತೆ ಬದುಕಿದ, ಮಹಾತ್ಮಾಜೀ - ಕಸ್ತೂರ್‌ಬಾ ದಂಪತಿಗಳು, ಆದರ್ಶ ತಂದೆ - ತಾಯಿಯ ಪಾತ್ರವನ್ನು ನಿರ್ವಹಿಸಿದ ಚಿತ್ರಣ ಈ ನಾಟಕದಲ್ಲಿ ಬರುತ್ತದೆ. ತಂದೆ ತಾಯಿಗಳ ನೀತಿಯುತ ಜೀವನ ಮಕ್ಕಳ ಹಾದಿಯನ್ನು ನಿರ್ಮಿಸುತ್ತವೆ. ಎಂಬುದಕ್ಕೆ ನಿದರ್ಶನವಾದ ಬಾಪು ಕುಟುಂಬ ಜೀವನ ಮತ್ತು ಕಸ್ತೂರ್‌ಬಾ ಹಾಗೂ ಮಕ್ಕಳು ಪರಿವರ್ತಿತರಾದ ಪರಿಯನ್ನು, ಪ್ರೊ. ಬಿ.ಆರ್. ಪೊಲೀಸ್‌ಪಾಟೀಲ್ ಅವರು ಈ ಕೃತಿಯಲ್ಲಿ ಅರ್ಥಪೂರ್ಣವಾಗಿ, ಸೊಗಸಾಗಿ ಒಡಮೂಡಿಸಿದ್ದಾರೆ.

ಮಹಾತ್ಮಾಜೀ ಅವರ ಬಗ್ಗೆ ಅನೇಕ ನಾಟಕಗಳು ಸಾಕ್ಷ್ಯಚಿತ್ರಗಳು, ಚಲನಚಿತ್ರಗಳು ಸ್ವಾತಂತ್ರ್ಯಾ ನಂತರದ ಈ 75 ವರ್ಷಗಳಲ್ಲಿ ನಿರ್ಮಾಣವಾಗಿವೆ. ಅವುಗಳಲ್ಲಿ, ಗಾಂಧೀಜಿ v/s ಗಾಂಧಿ, ಹರಿಲಾಲ್ v/s ಗಾಂಧಿ, ಕಸ್ತೂರ್‌ಬಾ v/s ಗಾಂಧಿ, ಪಾಪು ಗಾಂಧಿ, ಬಾಪು ಆದ ಕಥೆ, 1869 ರಿಂದ 1948ರ ವರೆಗೆ ಮಹಾತ್ಮರ ಜೀವನ ಕುರಿತಾದ ಬಹುಭಾಷಾ ಸಾಕ್ಷ್ಯಚಿತ್ರ, 'ಭಾರತ ಭಾಗ್ಯವಿಧಾತ', ಆಟೆನ್‌ಬರೋ ಅವರ "ಮಹಾತ್ಮ ಗಾಂಧಿ" ಚಲನಚಿತ್ರ ಅಂತರರಾಷ್ಟ್ರೀಯ ಗೌರವ ಪುರಸ್ಕಾರಕ್ಕೆ

ಭಾಜನವಾಯಿತು. ಇಂಥಹ ಹತ್ತಾರು ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಆಯಾಮದ ಮೂಲಕ ಗಾಂಧಿ ಅವರನ್ನು ಕಂಡುಕೊಳ್ಳುವ ಮತ್ತು ಜನರಲ್ಲಿ ಒಡಮೂಡಿಸುವ ಕಾರ್ಯದಲ್ಲಿ ಗಾಂಧಿ ಭವನವು ಸದಾ ಸನ್ನದ್ಧವಾಗಿರುತ್ತದೆ. ಅಂಥಹ ಆಶಯಕ್ಕೆ ಪೂರಕವಾಗಿ ಉತ್ತರ ಕರ್ನಾಟಕದ ಅಪ್ಪಟ ಜಾನಪದ ಸಾಹಿತಿ, ಪ್ರಾಧ್ಯಾಪಕರು, ರಂಗಕರ್ಮಿ ಪೊಲೀಸ್‌ಪಾಟೀಲ್ ಅವರು ಈ ನಾಟಕ ರಚಿಸಿ ಪ್ರಕಟಣೆಗಾಗಿ ಗಾಂಧಿ ಭವನಕ್ಕೆ ಅರ್ಪಿಸಿರುವುದು, ಗಾಂಧೀಜಿ ಅವರ ಮೇಲಿನ ಶ್ರದ್ಧಾಭಕ್ತಿಗೆ ಸಾಕ್ಷಿಯಾಗಿದೆ. ನಾಟಕವನ್ನು ಓದಿ ಸವಿಯುವುದಕ್ಕಿಂತಲೂ, ರಂಗಸ್ಥಳದಲ್ಲಿ ಅಭಿನಯಿಸಿದಾಗಲೇ ಅದರ ಸೊಗಸು, ಪ್ರಭಾವ ಮನದಾಳದಲ್ಲಿ ಮೂಡುತ್ತದೆ. ಮುಂದಿನ ದಿನಗಳಲ್ಲಿ ಅದಕ್ಕೆ ಪ್ರಯತ್ನ ಮಾಡಬಹುದೆಂಬ ಆಶಯವಿದೆ. ಪ್ರೊ. ಬಿ.ಆರ್. ಪೊಲೀಸ್‌ಪಾಟೀಲರನ್ನು ಗಾಂಧಿ ಭವನಕ್ಕೆ ಪರಿಚಯಿಸಿದ ಮತ್ತು ಅವರಿಗೆ ಈ ನಾಟಕ ಬರೆಯಲು ಪ್ರೇರಣೆ ನೀಡಿದ ಗಾಂಧಿ ಭವನದ ಉಪಾಧ್ಯಕ್ಷರಾದ ವಿ.ಎನ್. ತಿಪ್ಪನಗೌಡ ಅವರಿಗೆ ಕೃತಜ್ಞತೆಗಳನ್ನು ತಿಳಿಸುತ್ತೇನೆ.

ಈ ಕೃತಿಗೆ ಆಶಯ ನುಡಿ, ಪೋಷಕ ನುಡಿ, ಮುನ್ನುಡಿ ಮತ್ತು ಬೆನ್ನುಡಿಯನ್ನು ಬರೆದ ಕ್ರಮವಾಗಿ ಗಾಂಧಿ ಭವನದ ಉಪಾಧ್ಯಕ್ಷರಾದ ವಿ.ಎನ್. ತಿಪ್ಪನಗೌಡ ಅವರಿಗೆ, ಹುಲಿಗಪ್ಪ ಕಟ್ಟೀಮನಿ ಅವರಿಗೆ, ರಾಗಂ (ರಾಜಶೇಖರ್ ಗಂಗಯ್ಯ ಮಠಪತಿ) ಅವರಿಗೆ ಹಾಗೂ ಡಾ. ಬೇಲೂರು ರಘುನಂದನ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ತಿಳಿಸುತ್ತೇನೆ.

ಈ ಕೃತಿಯನ್ನು ಪ್ರಕಟಿಸಲು ಸಹಕರಿಸಿದ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಎಲ್ಲಾ ಸದಸ್ಯರುಗಳಿಗೂ ಕೃತಜ್ಞತೆಗಳು ಸಲ್ಲುತ್ತವೆ. ಇಂಥಹ ಅಪೂರ್ವ ಕೃತಿಗಳನ್ನು ಈ ವರ್ಷಾಚರಣೆಯಲ್ಲಿ ಪ್ರಕಟಿಸಲು ಸದಾ ಉತ್ಸುಕರಾಗಿರುವ ಗಾಂಧೀ ಭವನದ ಅಧ್ಯಕ್ಷರಾಗಿರುವ ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರಿಗೆ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ. ಈ ಕೃತಿಯ ಪರಿಷ್ಕರಣೆ ಮತ್ತು ಕರಡು ತಿದ್ದುಪಡಿಗೆ ಸಹಕರಿಸಿದ ಕಲಾವಿದರು, ಕೃತಿಗಾರರು ಆಗಿರುವ ಬಿ.ಆರ್. ಪೊಲೀಸ್‌ಪಾಟೀಲ ಅವರಿಗೆ ಹಾಗೂ ಇದನ್ನು ಅಂದವಾಗಿ ಮುದ್ರಿಸಿದ ಕ್ರಿಯೇಟಿವ್‌ಗೀಕ್ಸ್‌ನ ಮಹೇಶ್ ಮತ್ತು ತಂಡದವರಿಗೆ ಆತ್ಮೀಯ ನಮನಗಳು.

ಇಂದಿರಾ ಕೃಷ್ಣಪ್ಪ
ಗೌ॥ ಕಾರ್ಯದರ್ಶಿ, ಕ.ಗಾಂ.ಸ್ಮಾ.ನಿಧಿ

ಆಶಯ ನುಡಿ

ಕರ್ನಾಟಕ ನಾಟಕ ಅಕಾಡೆಮಿಯವರು ಗಾಂಧಿ ಭವನದಲ್ಲಿ ನಾಟಕ ರಚನೆಯ ಕುರಿತು ಆಯೋಜಿಸಿದ ಕಮ್ಮಟದ ನೇತೃತ್ವ ವಹಿಸಿಕೊಂಡ ಪ್ರೊ. ಬಿ.ಆರ್. ಪೊಲೀಸ್‌ಪಾಟೀಲರು ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದು, ಅದರಲ್ಲಿ ವಿಶೇಷವಾಗಿ ನಾಟಕ ರಚನೆಯಲ್ಲಿ ಅವರ ಅಪಾರ ಅನುಭವ ಮತ್ತು ಪರಿಣಿತಿ ತಿಳಿದು ಸಂತೋಷವಾಯಿತು. ಕರ್ನಾಟಕದ ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರ ಹುತಾತ್ಮ ಮೈಲಾರ ಮಹದೇವ ಇವರ ಕುರಿತು ನಾಟಕ ರಚಿಸಲು ಕೋರಿದಾಗ ಬರೆಯಲು ಸಂತೋಷದಿಂದ ಒಪ್ಪಿದ್ದರು. "ನಾನಾನೆಂಬುದು ನಾನಲ್ಲ" ಗಾಂಧೀಜಿ ಕಸ್ತೂರ್‌ಬಾರ ಕುರಿತು ರಚಿಸಿದ ನಾಟಕದ ಕರಡು ಪ್ರತಿಯನ್ನು ನನಗೆ ಓದಲು ಕೊಟ್ಟರು. 2019ರಲ್ಲಿ ಮೈಸೂರು ಅಸೋಸಿಯೇಶನ್, ಮುಂಬೈ ಅವರು ನಡೆಸಿದ ಏಕಾಂಕ ನಾಟಕ ರಚನಾ ಸ್ಪರ್ಧೆಯಲ್ಲಿ ಬಹುಮಾನಿತ ನಾಟಕ ಎಂದು ತಿಳಿದು ಇನ್ನಷ್ಟು ಕುತೂಹಲದಿಂದ ಓದಲು ಆಸಕ್ತಿ ಮೂಡಿಸಿತು.

ಗಾಂಧಿ ಅವರು ತಮ್ಮ ಬದುಕನ್ನು ಕಟ್ಟಿಕೊಳ್ಳಲು ದಕ್ಷಿಣ ಆಫ್ರಿಕಾಕ್ಕೆ ಬಂದು ಅಲ್ಲಿಯ ಭಾರತೀಯರ ಶೋಚನೀಯ ಸ್ಥಿತಿಯನ್ನು ಸುಧಾರಿಸಲು ಅವರೆಲ್ಲರ ಮನಗೆದ್ದು, ಸಂಘಟಿಸಿ ಸತ್ಯ, ಅಹಿಂಸೆಯ ಮಾರ್ಗ ಅನುಸರಿಸಿ ಕೆಲವೊಂದು ಸುಧಾರಣೆ ತಂದದ್ದು ಅವಿಸ್ಮರಣೀಯ. ನಾಟಕದ ದೃಶ್ಯ ಐದರಲ್ಲಿ ಗಾಂಧೀಜಿ ಅವರು ರುಸ್ತುಮ್‌ಜಿ ಅವರಿಗೆ "ಸಾರ್ವಜನಿಕರಿಂದ ಕೂಡಿಸಿದ ಒಂದೊಂದು ಪೈಸೆಯು ಕೂಡ ವ್ಯರ್ಥ ಖರ್ಚಾಗಬಾರದು", ಮುಂದುವರೆದು "ನೀವು ಕೊಟ್ಟ ಕಾಣಿಕೆಗಳನ್ನೆಲ್ಲ ನಿಮಗೆ ಒಪ್ಪಿಸಿ ಹೋಗೋಣ ಎಂದು ನಿರ್ಧಾರ ಮಾಡಿದ್ದೇನೆ. ನೆನಪು ವಸ್ತುವಿನ ರೂಪದಲ್ಲಿ ಇರುವುದಿಲ್ಲ. ಅದು ಹೃದಯದಲ್ಲಿ ನೆಲೆಗೊಳ್ಳಬೇಕು. ನೀವೆಲ್ಲ ನಮ್ಮ ಹೃದಯದಲ್ಲಿ ಇದ್ದ ಬಳಿಕ ಲೋಹ ಯಾಕೆ? ಸಮಾಜ ಸೇವೆ ಮಾಡಿದ್ದಕ್ಕೆ ಉಡುಗೊರೆ ಸ್ವೀಕರಿಸುವ ಹಕ್ಕು ನನಗಿಲ್ಲ". ನಾಟಕದ ದೃಶ್ಯ ಆರರಲ್ಲಿ ಕಸ್ತೂರ್‌ಬಾ ಹಾಗೂ ಗಾಂಧಿ ಅವರ ಚರ್ಚೆ ಅತೀ ಮುಖ್ಯ.

ಗಾಂಧೀಜಿ ಹಾಗೂ ಕಸ್ತೂರ್‌ಬಾರ ಸೇವಾತತ್ಪರತೆ, ಪ್ರಾಮಾಣಿಕತೆಗೆ ಹೃದಯ ತುಂಬಿ ಭಾರತೀಯರಿಂದ ಹಾಗೂ ಸ್ನೇಹಿತರಿಂದ ಗಾಂಧಿ ಪರಿವಾರದವರಿಗೆ ಆಫ್ರಿಕಾದಿಂದ ಬೀಳ್ಕೊಡುಗೆ ಸಂದರ್ಭದಲ್ಲಿ ಚಿನ್ನ, ವಜ್ರ, ಪಚ್ಚೆಯ ಹಾರಗಳನ್ನು, ಆಭರಣಗಳನ್ನು ಉಡುಗೊರೆಯಾಗಿ ಕೊಟ್ಟರು. ಗಾಂಧೀಜಿ ಅವರಿಗೆ ಈ ಉಡುಗೊರೆಗಳನ್ನು ಸ್ವೀಕರಿಸಲು

ಎಳ್ಳಷ್ಟೂ ಮನಸ್ಸಿರಲಿಲ್ಲ. ರಾತ್ರಿಯೆಲ್ಲಾ ನಿದ್ದೆ ಮಾಡಲಿಲ್ಲ. ಸಮಾಜಸೇವೆಯಲ್ಲಿ ನಿರತರಾದವರು ಉಡುಗೊರೆ ಪಡೆಯಬಾರದು ಎಂಬುದು ಅವರ ದೃಢವಾದ ನಂಬಿಕೆಯಾಗಿತ್ತು. ಅವುಗಳನ್ನು ಸಮಾಜಕ್ಕೆ ಒಪ್ಪಿಸುವುದು ಸರಿಯಾದ ಮಾರ್ಗ ಎಂದು ಯೋಚಿಸಿ, ಕಸ್ತೂರ್‌ಬಾರನ್ನು ಒಪ್ಪಿಸಲು ಮಗ ಹರಿಲಾಲ್ ಹಾಗು ಮಣಿಲಾಲ ಮೂಲಕ ಪ್ರಯತ್ನಿಸುತ್ತಾರೆ. ಕಸ್ತೂರ್‌ಬಾ ಸಹ ಜನರ ಸೇವೆಯನ್ನು ಕಷ್ಟವಹಿಸಿ ಮಾಡಿದ್ದರು. ಪತಿಯ ಸರಳತೆಯನ್ನು ಅಪ್ಪಿಕೊಂಡ ಕಸ್ತೂರ್‌ಬಾ ಅವರಿಗೆ ಈ ಆಭರಣಗಳ ಮೇಲೆ ಮೋಹವಿರಲಿಲ್ಲ. ಮುಂದೆ ಬರುವ ಸೊಸೆಯರಿಗೆ ಉಡುಗೊರೆ ಕೊಡಲು ಇಟ್ಟುಕೊಳ್ಳಬೇಕೆಂದು ಬಯಸಿದ್ದರು. ಕೊನೆಗೆ ಪತಿಯ ನಿರ್ಣಯಕ್ಕೆ ತಲೆಬಾಗಿ ಆಭರಣಗಳೆಲ್ಲವನ್ನೂ ಗಾಂಧೀಜಿ ಅವರಿಗೆ ಪಬ್ಲಿಕ್ ಟ್ರಸ್ಟ್ ರಚಿಸಲು ಹಿಂತಿರುಗಿಸಿದರು. ಈ ದೃಶ್ಯವನ್ನು ಈ ನಾಟಕದ ಕರ್ತೃರು ನೋಡುವವರ ಮನಸ್ಸಿನಲ್ಲಿ ಅಚ್ಚೊತ್ತುವಂತೆ ರಚಿಸಿದ್ದಾರೆ. ಅಲ್ಲದೆ ಸಾರ್ವಜನಿಕ ಕ್ಷೇತ್ರದಲ್ಲಿ ನಿರತರಾದವರಿಗೆ ಈ ನಾಟಕದ ಕಥಾವಸ್ತು ಮಾರ್ಗದರ್ಶಕವಾಗಿದೆ. ಸಾರ್ವಜನಿಕ ಜೀವನದಲ್ಲಿರುವವರು ನಂಬಿಕೆಗೆ ಪಾತ್ರರೂ, ಶೀಲವಂತರೂ, ಆದರ್ಶ ಪ್ರಾಯರೂ ಆಗಿರುವವರು. ಹಾಗೂ ಸ್ವಾತಂತ್ರ್ಯವನ್ನು ತನ್ನ ಕರ್ತವ್ಯ ಎಂದು ನಿರ್ವಹಿಸುವಂಥವರು ಇಂದಿನ ದಿನಮಾನಗಳಲ್ಲಿ ಅತ್ಯವಶ್ಯಕವಾಗಿದೆ.

ವಿ.ಎನ್. ತಿಪ್ಪನಗೌಡ
ಉಪಾಧ್ಯಕ್ಷರು
ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಮುನ್ನುಡಿ

ಹೋದಂತೆನಿಸಿದರೂ ಹೋಗಿಬಿಡುವವನಲ್ಲ ಗಾಂಧಿ

ಪ್ರಸ್ತುತ ನಾಟಕದ ಕೊನೆಯ ಸಂಭಾಷಣೆಯ ಕೊನೆಯ ಸಾಲು 'ಹೋದಂತೆನಿಸಿದರೂ ಹೋಗಿಬಿಡುವವನಲ್ಲ ಗಾಂಧಿ'. ಮನುಕುಲದ ಇನ್ನೊಂದು ಮುಖವಾಗಿ ಉಳಿದ ಗಾಂಧಿ, ಖಂಡಿತವಾಗಿಯೂ ಮುಳುಗಿ ಹೋಗುವ ಹೆಸರಲ್ಲ. ಬಹುತೇಕ ಯಾರನ್ನೋ ಸೋಲಿಸುವ ಹುನ್ನಾರಕ್ಕೆ ಬೀಳದ ಕಾರಣವೇ ಎಲ್ಲವನ್ನೂ ಗೆದ್ದ ಈ ಗಾಂಧಿ. ಹೀಗೆ ಏನನ್ನೂ, ಯಾರನ್ನೂ ಸೋಲಿಸದೆ ಗೆಲ್ಲುವ ಸಂಗತಿಗಳನ್ನು ಕುರಿತು ಪ್ರೊ. ಪೊಲೀಸ್‌ಪಾಟೀಲರ ಈ ನಾಟಕ ಚರ್ಚಿಸುತ್ತದೆ. ಭಾರತಕ್ಕೊಬ್ಬನೇ ಬಾಪು, ಕನ್ನಡದ ರಂಗಭೂಮಿಗೆ ಬಿ.ಆರ್. ಮತ್ತೊಬ್ಬ ಬಾಪು. ನಾನು ಈ ರಂಗಭೂಮಿಯ ಬಾಪು ಅವರ ನಾಟಕಗಳಲ್ಲಿ ಅಭಿನಯಿಸುತ್ತ, ಅವರ ಸಾಹಿತ್ಯ, ಚಳುವಳಿಗಳನ್ನು ಗಮನಿಸುತ್ತ ಸೃಜನಶೀಲತೆಯೆಡೆಗೆ ಆಕರ್ಷಿತನಾದವನು. ಲೋಕಜ್ಞಾನದಲ್ಲಿ ಅವರು 'ಮಹಾಮರ', ನಾನು ಅದರ ಹೂವೋ, ಹೀಚೊ ಆಗಿರಬಹುದೇನೊ.

ರಂಗಭೂಮಿಯಷ್ಟೇ ಮಹತ್ವದ ಕೊಡುಗೆ ರಂಗ ಸಂಗೀತಕ್ಕೆ ಬಿ.ಆರ್. ಅವರದು ಇದೆ ಎನ್ನುವುದು ನನ್ನ ಗ್ರಹಿಕೆ. ಅವರ ಲಾವಣಿಗಳಲ್ಲಿ ಬಂದ ಬಾಪು ಅವರ ರಂಗಸೃಷ್ಟಿಯ ಕೇಂದ್ರವೂ ಆಗಿದ್ದಾನೆ. ಒಟ್ಟಾರೆ ಗಾಂಧಿ ನಮ್ಮಿಬ್ಬರ ಸೃಜನಶೀಲತೆಯ ಸಾಮಾನ್ಯ ವೇದಿಕೆಯಾಗಿದ್ದಾನೆ. ಬಿ.ಆರ್ ರಂತೆಯೇ ನನ್ನ ವಾದವೂ ಕೂಡ, ನಟಾಲ್‌ನಿಂದ ನೌಖಾಲಿಯವರೆಗೆ ಸಾಗಿದ ಗಾಂಧಿಯನ್ನೊಬ್ಬ ಮಹಾತ್ಮನನ್ನಾಗಿಯೋ, ರಾಜಕಾರಣಿಯನ್ನಾಗಿಯೋ ಓದಿದ ನಾವು, ಈ ದೇಶದ ಸಾಮಾನ್ಯರು ಅರ್ಥೈಸಿಕೊಂಡ ಗಾಂಧಿಯನ್ನು ಅರಿಯಲಿಲ್ಲವೇನೊ. ಒಂದು ಸಂಗತಿ ಕೇಳಿ– ಭಾರತದ ಶ್ರೇಷ್ಠ ಸಾಹಿತಿ, ಪತ್ರಕರ್ತ, ಸಿನಿಮಾ ನಿರ್ದೇಶಕ ಕೆ.ಎ. ಅಬ್ಬಾಸರ ಅಜ್ಜಿಯ ಹೆಸರು "ಹಕ್ಕೊ". ಬರೀ ಗಾಂಧಿ ಎಂಬ ಪದ ಮಾತ್ರದಿಂದ ಈಕೆ ವೈರಾಗ್ಯ ಮೂರ್ತಿಯಾದವಳು. ತನ್ನ ಅಮೂಲ್ಯ ಆಭರಣಗಳನ್ನೆಲ್ಲಾ ದೇಶೋದ್ಧಾರಕ್ಕಾಗಿ ಈ ಗಾಂಧಿಯ ಜೋಳಿಗೆಗೆ ಸುರಿದು ಚರಕದ ದೀಕ್ಷೆ ಪಡೆದವಳು. ನಡು ಯೌವ್ವನದಲ್ಲಿ ನೂಲುತ್ತಾ ಮೀರಾಳಂತೆ ಗಾಂಧಿ ಒಬ್ಬ 'ಫರಿಸ್ತಾ' ಎಂದು ಪೂಜಿಸುತ್ತಾ, ಖಾದಿಯ ಖಫನ್‌ದಲ್ಲಿಯೇ ಇಹವನ್ನು ತ್ಯಜಿಸಿದವಳು. ಇದೆಲ್ಲಾ ಓದಿದಾಗ ತಟ್ಟನೆ ನನಗೆ ನೆನಪಾದದ್ದು ಟಾಲ್‌ಸ್ಟಾಯ್ ಅವರ ಮಾತು "ಶ್ರದ್ಧೆಯಿಂದಲೇ ಜೀವನ, ಶ್ರದ್ಧೆಯೇ ಜೀವನ."

ಬಿ.ಆರ್ ಅವರ 'ನಾನಾನೆಂಬುದು ನಾನಲ್ಲ' ನಾಟಕ ಓದುವ ಮುನ್ನ ನನಗೆ ನಾನೇ ಹಾಕಿಕೊಂಡ ಪ್ರಶ್ನೆ, ಈ ಗಾಂಧಿ ನಮಗೆ ಏನು ಹೇಳುತ್ತಾನೆ? ಎಂಬ ಒಂದು ಸಣ್ಣ ಕುತೂಹಲ, ನನ್ನನ್ನು ಹದಿನಾಲ್ಕು ವರುಷ ಆತನ ಬೆನ್ನು ಬೀಳುವಂತೆ ಮಾಡಿತು.

ಇದೊಂದು ರೀತಿ ಗಾಂಧಿಯೊಂದಿಗಿನ ನನ್ನ ವನವಾಸ ಅಥವಾ ಗಾಂಧಿವಾಸ. ಅಂತಿಮವಾಗಿ ತಿಳಿದಿದ್ದಿಷ್ಟೇ, ಜನಮುಖಿಯಾಗಬೇಕಾದ ಬಾಳಿಗೆ ಪಾಂಡಿತ್ಯದ ಅವಶ್ಯಕತೆಯಿಲ್ಲ. ಮನುಷ್ಯನ ಕ್ರಿಯಾಸರಳತೆ ಮಾತನಾಡಿದಷ್ಟು ಸ್ಫುಟವಾಗಿ ಪಾಂಡಿತ್ಯ ಮಾತನಾಡುವುದಿಲ್ಲ.

ಸಂಸಾರದೊಳಗೊಂದು ಸನ್ಯಾಸ, ಸನ್ಯಾಸಿಯಾಗಿ ರಾಷ್ಟ್ರ ರಾಜಕಾರಣದ ಒಂದು ಅಮಿತ ಸಂಸಾರ, ಇವುಗಳನ್ನು ನಿಭಾಯಿಸಲು ಪ್ರಾರ್ಥನೆ, ಯೋಗ, ಯಾತ್ರೆ, ಗಾಂಧಿಯದೆಲ್ಲವೂ ಸದ್ದಿಲ್ಲದ ದಾರಿ, ಸಾವಿಲ್ಲದ ಯೋಜನೆ, ಯೋಚನೆ. ಈತ ಸರಳ ಮನಸ್ಸಿನ ಸಾಮಾನ್ಯರಿಗೆ ಸುಲಿದ ಬಾಳೆಹಣ್ಣಿನಷ್ಟೇ ಸರಳ, ಕೂದಲು ಸೀಳುವವರಿಗೆ ಇವನೊಂದು ಬಿಡಿಸಲಾಗದ ಕಗ್ಗ. ಒಂದು ಹಂತಕ್ಕೆ ನನಗನ್ನಿಸಿದೆ, ಮನಸ್ಸು ಮಾಗದವನಿಗೆ ಒಗ್ಗುವ ಮಾತಲ್ಲ ಗಾಂಧಿ. ಹ್ಞಾಂ, ಅಂದ ಹಾಗೆ ಗಾಂಧಿ ಮಾತೂ ಅಲ್ಲ ಬಿಡಿ. ಪ್ರಪಂಚದಲ್ಲಿ ಯಾವುದೇ ರೆಫರೆನ್ಸ್‌ಗಳನ್ನಿಟ್ಟುಕೊಳ್ಳದೇ ಓದಬಹುದಾದ ಒಬ್ಬ ಸರಳ ಮನುಷ್ಯ ಗಾಂಧಿ. ಆದರೆ ಗಾಂಧಿವಾದವನ್ನೋದುವವರಿಗೆ ಗಾಂಧಿ ಅರ್ಥವಾಗುವುದಿಲ್ಲ. ಪ್ರಸ್ತುತ ನಾಟಕವು ಮೇಲಿನ ಈ ನನ್ನ ವಾದವನ್ನೇ ಪುಷ್ಟೀಕರಿಸುತ್ತದೆ. ಯಾಕೆಂದರೆ ಈ ನಾಟಕದ ಸಂಗತಿಗಳೆ ಗಾಂಧಿಯ ಬದುಕಿನ ಸರಳ ಸಂಗತಿಗಳು. ಗಾಂಧಿ ಕುರಿತಾದ ನನ್ನ ಓದಿನ ಮಿತಿಯೊಳಗೇ ಹೇಳಬೇಕೆಂದರೆ ಆತ ಓದಿದ್ದು ಕಡಿಮೆ. ಆದರೆ ಅರ್ಥೈಸಿಕೊಂಡದ್ದು ಹೆಚ್ಚು. ಮತ್ತೊಂದಷ್ಟು ಓದಿದ್ದರೂ ಅದು ಆತನ ಆಗಾಗಿನ ಅವಶ್ಯಕತೆಗಳ ಹಿನ್ನೆಲೆಯಲ್ಲಿ. ಹಾಗೆಯೇ ಓದಿದೆಲ್ಲವನ್ನು ಆತ ಹಂಚಿಯೂ ಬಿಟ್ಟ. ಬರಹದ ವಿಚಾರದಲ್ಲಿಯೂ ಅಷ್ಟೇ, ಕಾಲಾತೀತವಾಗಿ ಹಲವು ತಲೆಮಾರುಗಳಿಂದ ಬರಹದ ಒರೆಗೆ ತುತ್ತಾದ ಗಾಂಧಿ ಸಾಹಿತ್ಯ ಬರೆಯಲಿಲ್ಲ. ಆದರೆ ಆತ ಬರೆದದ್ದೆಲ್ಲವೂ ಶತಮಾನಗಳು ಮೆಲಕು ಹಾಕಬೇಕಾದ ಸಾಹಿತ್ಯವಾಯಿತು. ಹಾಗೆಯೇ ಗಾಂಧಿಯಂಥ ಮನುಷ್ಯನೂ ವಿರಳ. ಆತ ಹೇಳಿದ್ದೆಲ್ಲವೂ ಅತ್ಯಂತ ಸರಳ ಸರಳ. ನಾಟಕಕಾರ ಬಿ.ಆರ್. ಪಾಟೀಲ್ ಸಶಕ್ತವಾಗಿ ಗಾಂಧಿಯ ಸರಳತೆಯನ್ನು ಹೀಗೆ ಕಟ್ಟಿಕೊಡುತ್ತಾರೆ.

- ಯುದ್ಧ ಎಂಬೋದು ನಂಜಿನ ಹೈನ, ಗೆದ್ದು ಕಟ್ಟುವರು ಸಾವಿನ ಸದನ.
- ಸೂತಕದ ಮನಿಯೊಳಗ ಸಮಾಧಾನದಿಂದ ಇರೋದು ಹ್ಯಾಂಗ ಸಾಧ್ಯ ಆದೀತು?
- ನಾವು ತಾಳಿಕೊಳ್ಳೋ ಒಂದು ಪೆಟ್ಟು ಅವರಿಗೆ ಎರಡಾಗ್ತದ ಬದುಕು ಬರಡನಸ್ತದ, ಅವರ ಕ್ರೌರ್ಯ ಅವರಿಗೇ ಕೀಸರಾಗ್ತದ.
- ಖರೇ ಪ್ರೀತಿ ಪ್ರಕಟ ಆಗೋದು ಅಗಲೋ ಪ್ರಸಂಗ ಬಂದಾಗ ಅಲ್ಲೇನು? ಮೀರಾಳ ಹಾಡು ಗೊತ್ತಲ್ಲ ನಿಮಗ?
- ಬಂದು ಹೋಗುವವರು ಎಂದೂ ಬಂಧುಗಳಾಗೂದಿಲ್ಲ ಲಾಲ್‌ಜಿ.
- ನೆನಪು ವಸ್ತುವಿನ ರೂಪದೊಳಗ ಇರೂದಿಲ್ಲ, ಇರಬಾರದು ಕೂಡ.
- ಅದು ಹೃದಯದೊಳಗ ನೆಲೆಗೊಳ್ಳಬೇಕು. ನೀವೆಲ್ಲ ನಮ್ಮಗಳ ಹೃದಯದೊಳಗ

ಇದ್ದ ಬಳಕ ಈ ಲೋಹ ಯಾಕ? ಲೋಹದ ಮೋಹ ದೇಹವನ್ನ ಬಾಧಿಸ್ತದ, ಮನಸ್ಸನ್ನ ಕೆಡಸ್ತದ. ಅದಕ್ಕ ಅವುಗಳನ್ನೆಲ್ಲ ಇಲ್ಲಿರೊ ಸಮಸ್ತ ಭಾರತೀಯರ ಸೇವೆಗೇ.

- ಬಂದ ಉಡುಗೊರೆಗಳೆಲ್ಲ ನಾವೆಲ್ಲರೂ ಮಾಡಿದ ಸಮಾಜ ಸೇವೆಗೆ ಸಂದವುಗಳು. ಆದ್ದರಿಂದ ಉಡುಗೊರೆಗಳನ್ನು ಸ್ವೀಕರಿಸೊ ಹಕ್ಕು ನನಗಿಲ್ಲ.
- ಜನರ ನೆನಪು ತುಂಬ ಕ್ಷಣಿಕವಾದದ್ದು. ಅವರು ಮುಂದೊಂದು ದಿನ ನಮ್ಮ ನಿಸ್ವಾರ್ಥ ಸೇವಾ ಮರೆತು ನಮ್ಮ ಕಡೆ, ನಮ್ಮ ಒಡವೆ, ನಮ್ಮ ಆಸ್ತಿ ಇವೆಲ್ಲದರ ಕಡೆ ಬೊಟ್ಟು ಮಾಡಿ ತೋರಿಸಬಾರದಲ್ಲ?
- ಸಮಾಜದ ಕೆಲಸಕ್ಕ, ತ್ಯಾಗಜೀವನಕ್ಕ ಬಯಕೆ ಕುಠಾರಪ್ರಾಯವಾದದ್ದು. ಅದಕ್ಕಂತ ಸ್ವಾಮಿ ನಿಷ್ಕುಲಾನಂದರು: "ತ್ಯಾಗ ನ ಟಿಕೇರೆ ವೈರಾಗ ಬಿನಾ" ಅಂತ ಹೇಳಿದ್ದು.

ನಾನು ಹುಟ್ಟಿದಾಗ ಗಾಂಧೀಜಿ ಗತಿಸಿ 24 ವರ್ಷಗಳು ಗತಿಸಿರಬಹುದೇನೊ. ನನಗೆ ಅರಿವಿಲ್ಲದ ಆ ಬಾಲ್ಯದ ಕಿವಿಗಳ ಮೇಲೆ ಈ ಮಹಾರಾಯನ ಹೆಸರು ಅದೆಷ್ಟು ಬಾರಿ ಬಿದ್ದಿತ್ತೋ ಏನೋ. ಅವಿನ್ನೂ 'ಗಾಂಧಿ ಚರಕ' ನಮ್ಮ ಬಾವುಟದಲ್ಲಿ ಅಲ್ಲಲ್ಲಿ ರಾರಾಜಿಸುತ್ತಿದ್ದ ಘಳಿಗೆಗಳು. ನಾವು ಪ್ರಾಥಮಿಕ ಶಾಲೆಗಳ ಸ್ವತಂತ್ರ ದಿನೋತ್ಸವಗಳಲ್ಲಿ ಭಾಗವಹಿಸುವುದರೊಳಗಾಗಿ ಗಾಂಧಿಯ ಫೋಟೋ ಈ ದೇಶದ ಕೋಟಿ-ಕೋಟಿ ದೇವರುಗಳ ಸಾಲಿನಲ್ಲಿ ಸೇರಿದ ಅಪಾಯ. ಪ್ರತಿ ಭಾರತೀಯ ರಾಷ್ಟ್ರೀಯ ಹಬ್ಬವೂ ಗಾಂಧಿ ಎಂಬ ಅಕ್ಟೋಪಸ್‌ನ ಆಳ್ವಿಕೆ. ಗಾಂಧೀಜಿಯ ಈ ರೀತಿಯ ಆರಾಧನೆಗೆ ಹೊರಟಿದ್ದ ಯಾವ ಭಾರತೀಯನಿಗೂ ಉಳಿದ ಸ್ವತಂತ್ರ ಹೋರಾಟಗಾರರು ಲೆಕ್ಕಕ್ಕುಂಟು ಲೆಕ್ಕಕ್ಕಿಲ್ಲ. ಹೀಗೆ ಬೆಳೆಯುತ್ತಾ ಹೊರಟ ಈ ಗಾಂಧಿ ಎಲ್ಲಿಯೋ ದೇವರಾಗಿಬಿಡುತ್ತಾನೆ ಎಂದು ಭಯಪಡುವುದರೊಳಗಾಗಿ ಗಾಂಧಿ ಮಹಾತ್ಮನಾದ. ಇದು ಸಂಪೂರ್ಣ ಸಂತೃಪ್ತಿಯ ಬೆಳವಣಿಗೆಯಲ್ಲದಿದ್ದರೂ ಒಂದಷ್ಟು ಸಮಾಧಾನದ ವಿಷಯವಂತೂ ಸತ್ಯ. ಪ್ರಸ್ತುತ ನಾಟಕ 'ನಾನಾನೆಂಬುದು ನಾನಲ್ಲ" ದಲ್ಲಿ ಪ್ರೊ. ಬಿ.ಆರ್. ಪಾಟೀಲ್ ಅವರು ಕಟ್ಟಿಕೊಟ್ಟದ್ದು ನಮ್ಮ ಎದೆಯ ಧ್ವನಿಯಂತಿರುವ ಗಾಂಧಿಯನ್ನು. ಈ ಗಾಂಧಿ, ನಮ್ಮ-ನಿಮ್ಮೆಲ್ಲರ ಗಾಂಧಿ, ನೀವೂ ಪ್ರೀತಿಸಿಯೂ ಬದುಕಲಾರದ, ಒಪ್ಪಿಯೂ ಅನುಸರಿಸಲಾಗದ, ಆರಾಧಿಸಿಯೂ ಅಪ್ಪಲಾಗದ, ಕಲಿತೂ ಕಲಿಸಲಾಗದ, ಈ ಗಾಂಧಿಯೇ ಒಂದು ವಿಚಿತ್ರ. ಆತ ದೇವರಾಗದೆ, ಮಹಾತ್ಮನಾಗಿರುವುದು ನನಗೆ ಒಂದಿಷ್ಟು ಸಮಾಧಾನ ತಂದಿದೆ. ಪ್ರವಾದಿಯೊ, ಸಂತನೊ, ಮಹಾಂತನೊ ಅಥವಾ ಮಹಾತ್ಮನೋ ಇವರೆಲ್ಲಾ ಯಾವುದೇ ಪ್ರಮಾಣದ ಆರಾಧನೆಗೊಳಗಾಗಿಯೂ ಮನುಷ್ಯರ ಲೋಕಕ್ಕೆ ಸಮೀಪವಾಗಿಯೇ ಉಳಿಯುತ್ತಾರೆ. ಶುದ್ಧೀಕರಣದ ಇವರ ಪ್ರಯಾಣ ಅಶುದ್ಧಿಯ ಯಾವುದೋ ಒಂದು ತುದಿಯಿಂದಲೇ ಪ್ರಾರಂಭವಾಗುತ್ತದೆ. ಕವಿ ಲಾರ್ಡ್ ಬೈರನ್‌ನ ಈ ಸಾಲುಗಳನ್ನು ಗಮನಿಸಬೇಕು- **In men whom condemn as ill, I found so much good and still, in men whom men pronounce devine, I found so much sin and blot, I don't dare to draw a line, between the two whom**

god has not" ಕವಿಯ ವಾದವಿಷ್ಟೆ, ಎಲ್ಲ ಕೆಟ್ಟವರಲ್ಲಿ ಒಳ್ಳೆಯವರನ್ನು ಕಂಡಿದ್ದೇನೆ, ಎಲ್ಲ ದೇವ ಸಂಭೂತರಲ್ಲಿಯೂ ಪಾಪಾತ್ಮರನ್ನು ಕಂಡಿದ್ದೇನೆ. ಹೀಗಾಗಿ ಒಳಿತು ಕೆಡಕಿನ ಮಾನದಂಡವನ್ನು ಕೈಯಲ್ಲಿಟ್ಟುಕೊಂಡು ಮನುಷ್ಯರನ್ನು ವಿಭಜಿಸುವುದೇ ಸಂಕಷ್ಟದ ಮಾತು. ಈತ ನಮ್ಮನ್ನು ಪೆಡಂಭೂತದಂತೆ ಬೆನ್ನಟ್ಟಿದ್ದಾನೆ. ಹಾಗೆಯೇ ನಿರ್ವೀಣ್ಯನಾಗಿ ಕುಸಿದು, ಕೊನೆಯುಸಿರಿನತ್ತ ಮನಸ್ಸು ಹೊರಳುವಾಗ ಜೋಹಾನ್ಸ್‌ಬರ್ಗ್‌ದ ಆ ರೈಲ್ವೆಸ್ಟೇಷನ್‌ನಿಂದ ನೇರವಾಗಿ ಎದುರು ಬಂದು ನಿಂತು 'ಛಟಾರ್' ಎಂದು ನಮ್ಮ ಮುಖಕ್ಕೆ ಹೊಡೆದಿದ್ದಾನೆ. ನನ್ನ ಪಾಲಿನ ಆಲದ ಮರ, ನನ್ನ ಊಟದ ಕರಿಬೇವು ಎರಡೂ ಆಗಿರುವ ಮುಗ್ಧನಗೆಯ, ಸೋರೆಕಾಯಿಯಂಥ ತಲೆಯ, ಈ ಚಾಣಾಕ್ಷ ಮುದುಕ ನನಗೆ ಅತಿ ಪ್ರೀತಿಯವನಾಗಿದ್ದಾನೆ.

ಜೀಸಸ್‌ನನ್ನು ಕೊಂದವರು, ಶರಣರನ್ನು ಎಳಹೂಟೆ ಮಾಡಿದವರು, ಸಾಕ್ರೆಟಸ್‌ನಿಗೆ 'ಹೆಮ್‌ಲಾಕ್' ಕೊಟ್ಟವರು, ಚೆನ್ನಬಸವಣ್ಣ ....ಹುಟ್ಟಿದವ ಎಂದು ಬರೆದವರು. ಸೆಂಟ್ ಜೋನ್‌ಳನ್ನ ಬೆಂಕಿಗಿಟ್ಟವರು, ಗಾಂಧಿಯನ್ನ ಹತ್ಯೆಗೈದವರು ಯಾರೂ, ಯಾರೂ ನಮ್ಮ ಮನಸ್ಸನ್ನು ಬಿಡಿ, ಕನಿಷ್ಟ ನಮ್ಮ ಸಾರ್ವಜನಿಕ ಗೋಡೆಗಳ ಮೇಲೂ ಕೂಡ ಸ್ಥಾನ ಪಡೆಯಲಿಲ್ಲ. ಆದರೇನಾಯಿತು ಇತಿಹಾಸ ಸೇರಿದರಲ್ಲ? ಎಂದು ನಮ್ಮ ಮನಸ್ಸು ಹೇಳೀತು. ಅಂಥದಕ್ಕೊಂದು ಉತ್ತರ ಏನೆಂದರೆ ವರ್ತಮಾನದಲ್ಲಿ ಅರ್ಥ ಪಡೆಯದ ಬದುಕಿಗೆ ಇತಿಹಾಸದಲ್ಲಿ ಎಂಥ ಸ್ಥಾನ ದೊರೆತರೇನು? ಅಲ್ಲದೆ ಬಾಳೇ ಇಲ್ಲದ ಇಂಥ ಬದುಕುಗಳನ್ನು ಎಷ್ಟು ಕಾಲ ಜಪಿಸಿದರೇನು? ಆದಾಗ್ಯೂ ಚೈತನ್ಯಗಳನ್ನು ಪರೀಕ್ಷೆಗೆ ಒಳಪಡಿಸಿದ ಜೀವನಗಳನ್ನು, ಚೈತನ್ಯಕ್ಕೆ ಕೊಟ್ಟಷ್ಟೇ ಪ್ರಾಮುಖ್ಯತೆ ಕೊಟ್ಟು ಕೆಲವು ಬಾರಿ ನೋಡಬೇಕಾಗುತ್ತದೆ. ಅಲ್ಲವೇ? ಹೂವಿನ ಅವಸಾನದ ನಂತರವೂ ವಾಸನೆ ಉಳಿಯುತ್ತದೆ. ಚಿಂತನೆ ಯಾವಾಗಲೂ ವಾಸನೆಯಂತೆ ಅದು ನಿರಂತರ. ಕನ್ನಡದಲ್ಲಿ ಗಾಂಧೀಜಿಯ ಆಫ್ರಿಕನ್ ಜೀವನ ಆಧರಿಸಿದ ನಾಟಕವೊಂದಿರಲಿಕ್ಕಿಲ್ಲ. ಹಿಂದಿ ಮತ್ತು ಇಂಗ್ಲೀಷನಲ್ಲಿ ಬಹಳ ಹಿಂದೆ ಖ್ವಾಜಾ ಅಹಮದ್ ಅಬ್ಬಾಸ್ ಮತ್ತು ವಿ.ಪಿ. ಸಾಠೆ ಸೇರಿಕೊಂಡು ಇಪ್ಟಾ ತಂಡಕ್ಕಾಗಿ 'ಬ್ಯಾರಿಷ್ಟರ್ ಆ್ಯಟ್ ಲಾ' ಎನ್ನುವ ನಾಟಕವೊಂದನ್ನು ಬರೆದು ಮುಂಬೈನಲ್ಲಿ ಅದರ ಪ್ರಯೋಗಗಳಾದುದು ನನಗೆ ಸ್ಪಷ್ಟವಿದೆ. ಅದೊಂದು ಮಹತ್ವದ ಸಂಗತಿಯೇ. ಈಗ ಕನ್ನಡದಲ್ಲಿ ಹಿರಿಯ ರಂಗಕರ್ಮಿಗಳು, ನನ್ನ ಪ್ರೀತಿಯ ಲೇಖಕರೂ ಆಗಿರುವ ಬಿ.ಆರ್. ಅವರಿಂದ ಇಂಥ ಒಂದು ಪ್ರಯತ್ನ ನಡೆದಿರುವುದು ಸ್ತುತ್ಯಾರ್ಹವಾಗಿದೆ. ನಿಸ್ಸಂಶಯವಾಗಿಯೂ ಗಾಂಧಿ ಭಾರತದಲ್ಲಿ ಸಕ್ರಿಯ ರಾಜಕಾರಣಕ್ಕೆ ಇಳಿಯುವ ಮುನ್ನ, ಆಫ್ರಿಕಾದ ನೆಲದಲ್ಲಿ ಸೈದ್ಧಾಂತಿಕವಾಗಿ ಅವರು ಗಟ್ಟಿಗೊಂಡ ಸಂಗತಿಗಳ ಮೇಲೆ ಈ ನಾಟಕ ಚೆಲ್ಲುವ ಬೆಳಕು, ಅದು ಲೋಕಕ್ಕೆ ಬೆಳಕು. ಲೋಕಾರೋಗ್ಯಕ್ಕೆ ಬೇಕು, ಈ ಗಾಂಧಿ ಎಂಬ ಮಹಾ ಬೆಳಕು.

ಬಿ.ಆರ್. ಅವರಿಗೆ ಅಭಿನಂದನೆಗಳು.

ರಾಗಂ (ರಾಜಶೇಖರ್ ಗಂಗಯ್ಯ ಮಠಪತಿ)

27.08.2021, ಬೆಂಗಳೂರು

ಪೋಷಕ ನುಡಿ

ಎಷ್ಟು ಸವಿದರೂ ಸವೆಯದ ಬಾಪೂಜಿಯ ಪೆಪ್ಪರಮೆಂಟ್ ...

ಅಂದು... ಇಂದಿಗೆ ನೂರೈವತ್ತು ವರ್ಷಗಳ ಹಿಂದೆ ಬಾಲಕ ಮೋಹನದಾಸ ರಮಚಂದ ಗಾಂಧಿ ಆಟ ಆಡಿಕೊಂಡಿದ್ದ ವಯಸ್ಸಿನಲ್ಲಿ, ಅವರ ಊರಿಗೆ ಬಂದ ನಾಟಕ ತಂಡವೊಂದು "ಸತ್ಯ ಹರಿಶ್ಚಂದ್ರ" ನಾಟಕ ಆಡದೇ ಇದ್ದಿದ್ದರೆ, ಅಂದು ಸತ್ಯಹರಿಶ್ಚಂದ್ರ ಪಾತ್ರಧಾರಿ ಪರಿಣಾಮಕಾರಿಯಾಗಿ ಅಭಿನಯಿಸದೇ ಇದ್ದಿದ್ದರೆ? ಅಥವ ಬಾಲಕ ಮೋಹನದಾಸ ನಾಟಕವನ್ನೇ ನೋಡದೆ ಹೋಗಿದ್ದರೆ? ಈ ಕಾಲಘಟ್ಟದ ಹಿಂದೂಸ್ತಾನ ಏನಾಗಬಹುದಿತ್ತು? ಏನಾಗಿರಬಹುದಿತ್ತು? ಊಹೆಗೂ ಮೀರಿದ್ದು.

ಅಂದಿನ ಸತ್ಯಹರಿಶ್ಚಂದ್ರ ನಾಟಕ ನೋಡಲು ಬಾಲಕ ಗಾಂಧಿ ಒಬ್ಬನೇ ಹೋಗಿರಲಿಲ್ಲ. ನೂರಾರು, ಸಾವಿರಾರು ಮಂದಿ ಇದ್ದಿರಬಹುದು. ಅವರೊಟ್ಟಿಗೇ ಈ ಬಾಲಕ ಗಾಂಧಿ ವಾರಿಗೆಯ ಹುಡುಗರೂ ನೋಡಿರಬಹುದು. ಆದರೆ ಅಂದಿನ ಪ್ರದರ್ಶನದಲ್ಲಿ ಹರಿಶ್ಚಂದ್ರ ಪಾತ್ರದಾರಿ ಕೇವಲ ಈ ಬಾಲಕನ ಕಿವಿಯಲ್ಲಿ ಮಾತ್ರ 'ಸತ್ಯ'ದ ಮಂತ್ರಗಳನ್ನು ಉಸುರಿದನೆ? ಅಥವ ಸತ್ಯಮಾರ್ಗ ರಚನೆಯ ಗುಟ್ಟನ್ನು ಈ ಬಾಲಕನಿಗಾಗಿ ತೆರೆದಿಟ್ಟನೆ?. ಅದುವರೆಗೂ ಈ ನಾಡಿನ ಹಲವಾರು ಸಂತರು, ದಾಸರು ಸತ್ಯದ ದಾರಿಯಲ್ಲಿ ನಡೆದಾಡಿದ ಮಾಸಿದ ಗುರುತುಗಳಿದ್ದವು. ಆದರೆ ಮೋಹನ್‌ದಾಸ ಕರಮ್‌ಚಂದ್ ಗಾಂಧಿ "ನಾನು, ಸರಳತನದ ಬದುಕಿನ ದಾರಿ ಹುಡುಕುವುದರಲ್ಲಿದ್ದೇನೆ, ಅದರಲ್ಲೇ ನಡೆಯುವವನಿದ್ದೇನೆ. ಯಾರು ನನ್ನ ಜೊತೆ ಬರುವರೋ ಬರಲಿಚ್ಛಿಸುವರೋ ಅಂಥವರು ಬರಲಿ. ದಣಿದವರೂ ಬೇಸತ್ತವರೂ ನಿಂತು ಬಿಡಲಿ. ಯಾರ ಮೇಲೂ ದೋಷ ಇಡುವುದಿಲ್ಲ. ಆದರೆ ಯಾರಿಗಾಗಿ ಕಾಯುವುದೂ ಇಲ್ಲ" ಎಂದು ಆ ದಾರಿಯಲ್ಲಿ ನಡದೇ ಬಿಡುತ್ತಾನೆ. ಅಂತೆಯೇ ಕಸ್ತೂರ್‌ಬಾ ಅವರ ಹಿಂದೆ ನಡೆದಳು. ಮಕ್ಕಳಿಗಾಗಿ ತಾಯಿ ಹಿಂದಿರುಗಿ ನಿಂತಳು. ಅತ್ತ ಪತ್ನಿ, ಮಕ್ಕಳ ಮೋಹ ಕಡಿದುಕೊಂಡ ಮೋಹನ್‌ದಾಸ ಗಾಂಧಿ ಮಹಾತ್ಮನಾಗಿ ದಾಪುಗಾಲಿಡುತ್ತಿದ್ದರೆ, ಇತ್ತ ಪತ್ನಿ, ನಡೆಯಲಾರದ ಮಕ್ಕಳನ್ನು ನಡೆಸಿಕೊಂಡು, ಕಲ್ಲುಮುಳ್ಳುಗಳನ್ನು ತುಳಿಯುತ್ತ ರಕ್ತ ಸೋರುವ ಪಾದಗಳೊಂದಿಗೆ ಅಕ್ಷರಶಹಃ ಸತ್ಯವಾನ್ ಸಾವಿತ್ರಿಯಂತೆ ಪತಿಯ ಬೆನ್ನು ಹತ್ತಿದಳು. ಅಷ್ಟೇ ಅಲ್ಲ, ಅವರ ಸಮಸಮವಾಗಿ ತಾನೂ ನಡೆದು ಮಕ್ಕಳನ್ನೂ ನಡೆಸಿದಳು.

ಹಿರಿಯ ಮಗ ಹರಿಲಾಲ ಮಾತ್ರ ಅವರ ವಿರುದ್ಧದ ದಾರಿಯನ್ನು ತುಳಿದು ಜೀವನದಲ್ಲಿ ಸೋತು ಕಪ್ಪುಚುಕ್ಕೆಯಾಗಿ ನಿಂತ. ಗಾಂಧಿ ಮೊದಲಿಗೆ ತಮ್ಮನ್ನು ತಾವೇ ಸತ್ಯಶೋಧದ ಪ್ರಯೋಗಕ್ಕೆ ಒಡ್ಡಿಕೊಂಡು, ಆ ದಾರಿಯಲ್ಲಿ ಕೊಸರಿಲ್ಲವೆಂದು ಅರಿತು ಆಮೇಲೆ ಇತರರನ್ನು ಪ್ರೇರೇಪಿಸುತ್ತಿದ್ದರು. ಪತ್ನಿ ಮಕ್ಕಳಿಗೆ ಒತ್ತಾಯಿಸುತ್ತಿದ್ದರು. ಇದೆಲ್ಲವನ್ನೂ ಇವತ್ತಿನ ಕಾಲಘಟ್ಟದಲ್ಲಿ ನಿಂತು ನೋಡಿದರೆ ..... ದೇಶ ವಿಮೋಚನೆಗಾಗಿ ಅವರ ಹೋರಾಟ, ಉಪವಾಸ ಸತ್ಯಾಗ್ರಹ, ಅಹಿಂಸೆಯ ಜಪ, ವಿದೇಶಿ ವಸ್ತ್ರ ಬಹಿಷ್ಕಾರ, ಖಾದಿ ಪ್ರಚಾರ, ದಲಿತೋದ್ಧಾರಕ್ಕಾಗಿ ಹಳ್ಳಿಗಳಿಗೆ ನಡೆದಾಡಿದ್ದಾಗಲೀ, ಅವರ ಸ್ವರಾಜ್ಯದ ಕನಸಾಗಲೀ, ನಿಧಿ ಸಂಗ್ರಹಿಸಿದ ಪರಿಯಾಗಲೀ ಎಲ್ಲವೂ ಊಹೆಗೂ ಮೀರಿದ ಸಂಗತಿಗಳಾಗಿವೆ. ಹಠಮಾರಿ ಮುದುಕ ಮೋಹನ್‌ದಾಸ್ ಕರಮ್‌ಚಂದ್ ಗಾಂಧಿ ಯಾರಿಗೂ ನಿಲುಕದವರಾಗಿ, ಗೋಚರಿಸದವರಾಗಿ, ಅಕ್ಷರಗಳಲ್ಲಿ, ಪದಗಳಲ್ಲಿ ಹಿಡಿದಿಡಲಾರದ ಸಂತನಾಗಿ, ಫಕೀರನಾಗಿ, ತಲೆತಿರುಕ ಮುದುಕನಾಗಿ ಬದುಕಿದರು.


ಅಂದು ದೇಶವೇ ಅವರ ಸನ್ನಿಪಾತಕ್ಕೆ ಒಳಗಾಗಿತ್ತು. ಕರ್ನಾಟಕದ ಉದ್ದಕ್ಕೂ ಸ್ವತಂತ್ರ ಚಳುವಳಿಗಾಗಿ "ಮಾಡು ಇಲ್ಲವೇ ಮಡಿ" ಎನ್ನುವ ಘೋಷವಾಕ್ಯಕ್ಕೆ ಮನೆ, ಮಕ್ಕಳು, ಸಂಸಾರ, ಗೂಟಕ್ಕೆ ಕಟ್ಟಿದ ದನ ಕರುಗಳನ್ನು ಬಿಟ್ಟು ಯುವಕರು, ಮುದುಕರೆನ್ನದೆ "ವಂದೇ ಮಾತರಂ" ಪಠಿಸುತ್ತ ಗಾಂಧಿಯ ಕರೆ ಬಂದ ದಿಕ್ಕಿನತ್ತ ಓಡಿದ್ದರು. ಮುಂದೆ, ದೇಶ ವಿಮೋಚನೆಗೆ ಅಹಿಂಸೆಯ ಅಸ್ತ್ರ, ಅರೆಹೊಟ್ಟೆ ಅರೆ ಬಟ್ಟೆಯ ಫಕೀರನನ್ನೂ ಹಾಗು ಕಸ್ತೂರಬಾಳ ಕುರಿತು, ಹಲವು ದೇಶಗಳ, ಹಲವಾರು ಭಾಷೆಗಳಲ್ಲಿ ಅನೇಕ ನಾಟಕಗಳನ್ನೂ, ಸಿನೆಮಾಗಳನ್ನೂ ನಾವು ನೋಡಿದ್ದೇವೆ. ಉತ್ತರ ಕರ್ನಾಟಕದಲ್ಲಿ ಜನ ಜಾಗೃತಿಗಾಗಿ ಕನ್ನಡದ ಲಾವಣಿಗಳಲ್ಲೂ ಈ ಗಾಂಧಿ ಎಂಬ ಫಕೀರ ಬಂದಿದ್ದಾನೆ, ಕಿಳ್ಳೇಕ್ಯಾತರ ಪರದೆಯಲ್ಲೂ ಗೊಂಬೆಯಾಗಿ ಈ ಮಹಾತ್ಮ ಬಂದಿದ್ದಾನೆ. ಈಗ ಬಿ.ಆರ್ ಪೊಲೀಸ್‌ಪಾಟೀಲ ಅವರ "ನಾನಾನೆಂಬುದು ನಾನಲ್ಲ" ನಾಟಕದೊಳಗೆ ಸೂಟುಬೂಟು ಧರಿಸಿದ ವಕೀಲ, ದಕ್ಷಿಣ ಆಫ್ರಿಕೆಯಲ್ಲಿನ ಭಾರತೀಯರ ಸಮಾನತೆ ಹಕ್ಕುಗಳಿಗಾಗಿ ಹೋರಾಟಕ್ಕಿಳಿದ ಬ್ಯಾರಿಸ್ಟರ್ ಗಾಂಧಿಯಾಗಿ ರೂಪ ಪಡೆದಿದ್ದಾರೆ. ಗುಜರಾತಿನ ಪೋರ್‌ಬಂದರಿನಲ್ಲಿ ಹುಟ್ಟಿದರೂ "ಬನಹಟ್ಟಿ"ಯಲ್ಲಿ ಉಂಡು ಬೆಳೆದವರಂತೆ, ಅಲ್ಲಿಯ ಮಣ್ಣಿಂದ ಎದ್ದು ಬಂದವರಂತೆ ಗಾಂಧಿ ಈ ನಾಟಕದಲ್ಲಿ ರೂಪ ಪಡೆದಿದ್ದಾರೆ.

ಕಸ್ತೂರಬಾ ಕೂಡ, ಪತಿ ಮತ್ತು ಮಕ್ಕಳ ಭವಿಷ್ಯಕ್ಕಾಗಿ ಜಗಳ ಮಾಡಿ, ಕೊನೆಗೆ ಪತಿಯ ಯಶಸ್ಸಿಗಾಗಿ ಸೋತು ಗೆಲ್ಲುವ ನಮ್ಮ ಮನೆ ಮಗಳಂತೆ ಕಾಣುತ್ತಾಳೆ.

ಅಷ್ಟೇ ಅಲ್ಲ ಕಷ್ಟ ಕಾರ್ಪಣ್ಯಗಳ ಜೊತೆ, ಕೈಗೊಂದು, ಬಗಲಿಗೊಂದು ಮಕ್ಕಳನ್ನು ಸಿಕ್ಕಿಸಿಕೊಂಡು, ಅವಸರಿಸಿ ಹೋಗುವ ಪತಿಯನ್ನು ಎಳೆದು ನಿಲ್ಲಿಸಿಕೊಂಡು ಜಾತ್ರೆಯಲ್ಲಿ ಫೋಟೋ ಹೊಡೆಸಿಕೊಂಡ ಸಾಧ್ವಿಯಂತೆ ಕಾಣುತ್ತಾಳೆ, ನಮ್ಮ ಕಸ್ತೂರಬಾ. ಹಾಗೆ ಪೊಲೀಸ್‌ಪಾಟೀಲರು ತಮ್ಮ ಭಾಷೆಯಲ್ಲಿ ಅವರನ್ನು ಕಡೆದು ತಂದಿದ್ದಾರೆ. ಅದಕ್ಕಾಗಿಯೇ ಭಾರತೀಯರ ಪಾಲಿಗೆ ಗಾಂಧಿ ಕುಟುಂಬವು ಬದುಕಿದ ಪರಿ ಸೀಮಾತೀತವಾದದ್ದು, ಭಾಷಾತೀತವಾದದ್ದು. ಅದೊಂದು ರೂಪಕವಾಗುತ್ತದೆ. ಅಜ್ಜಿ ಮೊಮ್ಮಕ್ಕಳಿಗೆ ಹೇಳುವ ಕಥೆಯಾಗುತ್ತದೆ.

ಇನ್ನು ಪೊಲೀಸ್‌ಪಾಟೀಲರು ಬನಹಟ್ಟಿಯ ಇಳಿಹೊತ್ತಿನ ಗಾಳಿಯಲ್ಲಿ, ಹರಿಯುವ ಕೃಷ್ಣೆಯಲ್ಲಿ, ಅಲ್ಲಿಯ ಬಿರುಬಿಸಿಲಿನಲ್ಲಿ, ಅಲ್ಲಿಯ ಧೂಳಿನಲ್ಲಿ ಹುರಿಗೊಂಡು ಗಾಂಧಿಯನ್ನು ಲಾವಣಿಯಲ್ಲಿ ಕುಣಿಸಿದವರು. ನಾಡಿನ ದಾಸರ, ಶರಣರ ನುಡಿಗಳನ್ನು ತತ್ವಪದಗಳಲ್ಲಿ ತಂದವರು, ಕವಿಗಳಾಗಿ, ನಾಟಕಕಾರರಾಗಿ ನಾಡಿಗೆ ಪರಿಚಯವಾದವರು. ಇವರ ಈ "ನಾನಾನೆಂಬುದು ನಾನಲ್ಲ" ನಾಟಕವು ಮುಂಬೈನ "ಮೈಸೂರು ಅಸೋಸಿಯೆಷನ್" ಸಂಸ್ಥೆಯು ಏರ್ಪಡಿಸಿದ ನಾಟಕ ರಚನಾ ಸ್ಪರ್ದೆಯಲ್ಲಿ ಬಹುಮಾನಿತ ಕೃತಿಯಾಗಿ ಹೊರ ಹೊಮ್ಮಿದೆ. ಈ ಕೃತಿಯನ್ನು ಗಾಂಧಿ ಸ್ಮಾರಕ ನಿಧಿಯ ವತಿಯಿಂದ ಸ್ವಾತಂತ್ರ್ಯೋತ್ಸವ-75 ಅಮೃತ ಮಹೋತ್ಸವದಲ್ಲಿ ಪ್ರಕಟಿಸುತ್ತಿರುವುದು ತುಂಬ ಔಚಿತ್ಯಪೂರ್ಣವಾಗಿದೆ. ಸ್ವಾತಂತ್ರ್ಯೋತ್ಸವ - 75ರಲ್ಲಿ ಈ ನಾಟಕ ನಾಡಿನ ನಾಟಕಾಸಕ್ತರ ಗಮನ ಸೆಳೆದು ರಂಗಸ್ಥಳಕ್ಕೆ ಬರಲೆಂದು ಆಶಿಸುತ್ತೇನೆ.

ಹುಲುಗಪ್ಪ ಕಟ್ಟೀಮನಿ.
ರಂಗಾಯಣ, ಮೈಸೂರು.



ಹೆಣ್ಣು ಗಂಡಿಗಿಂತಲೂ ಉದಾರರಾದವಳು. ಏಕೆಂದರೆ ಇಂದಿಗೂ
ಹೆಣ್ಣು ತ್ಯಾಗದ, ಮೂಕ ವೇದನೆಯ, ನಮ್ರತೆಯ, ನಂಬಿಕೆಯ
ಹಾಗು ಜ್ಞಾನದ ಒಂದು ಪ್ರತೀಕವಾಗಿದ್ದಾಳೆ. ಹೆಣ್ಣುಮಕ್ಕಳ
ಒಳ ಅರಿವು ಅನೇಕ ಬಾರಿ ಗಂಡುಮಕ್ಕಳ ಗರ್ವಪೂರಿತ
ಜ್ಞಾನಕ್ಕಿಂತಲೂ ಮಿಗಿಲಾಗಿದುದೆಂದು ಸಿದ್ಧವಾಗಿದೆ.

– ಮಹಾತ್ಮ ಗಾಂಧಿ

ಲೇಖಕರ ನುಡಿಗಳು

ನಾನಾನೆಂಬುದು ನಾನಲ್ಲ

ಗಾಂಧೀಜಿ ಎಂದರೆ ಬಹುಜನರಿಗೆ ಅಭಯ, ಈ ಜಗದ ವಿಸ್ಮಯ! ಅದಕ್ಕೆ ಸಾರ್ವಕಾಲಿಕ ಶ್ರೇಷ್ಠವಿಜ್ಞಾನಿ ಅಲ್ಬರ್ಟ್ ಐನ್‌ಸ್ಟೀನ್, "ಇಂಥ ಒಂದು ಜೀವಿ ಮನುಷ್ಯ ರೂಪದಲ್ಲಿ ಈ ಭೂಮಿಯ ಮೇಲೆ ನಡೆದಾಡುತ್ತಿದ್ದಾನೆ ಎಂದು ನಂಬುವುದು ಕಷ್ಟ" ಎಂದಿರುವುದು. ಗಾಂಧೀಜಿಯ ಅಗ್ಗಳಿಕೆಯಿರುವುದು ಅವರ ವಿರಾಡ್ರೂಪದಲ್ಲಿ. ಯಾರು ಹೇಗೆ ನೋಡುವರೋ ಹಾಗೆ ಗೋಚರಿಸಿದ ವಿಭಿನ್ನ ರೂಪ, ಹುಟ್ಟಿದಾಗ ತೀರಾ ಸಾಮಾನ್ಯ, ಸಂಕೋಚ ಪ್ರವೃತ್ತಿಯ ಹಸಿಹಸಿಮನುಷ್ಯ. ಬಾಲ್ಯದಲ್ಲಿ, ಕಿಶೋರಾವಸ್ಥೆಯಲ್ಲಿ ತೀರ ಪ್ರಾಮಾಣಿಕನೂ ಅಲ್ಲದ, ತೀರಜಾಣನೂ, ದಡ್ಡನೂ ಅಲ್ಲದ ಗಾಂಧಿ, ಪರಿವರ್ತಿತನಾಗಿ ಮಹಾತ್ಮನೆನಿಸಿಕೊಳ್ಳಲು ಕಾರಣವಾದದ್ದು ಸತ್ಯ, ಅಹಿಂಸೆ, ಪ್ರಾಮಾಣಿಕತೆ, ಆಧ್ಯಾತ್ಮಿಕತೆ ಹಾಗೂ ಸ್ವವಿಮರ್ಶೆಯೆಂಬ ತತ್ವಗಳು.

ಬಹುಮುಖ್ಯ ವಿಚಾರವೆಂದರೆ ಇವರ ಪ್ರಭಾವಲಯ ಪ್ರವೇಶಿಸಿದ ಪ್ರತಿಯೊಬ್ಬರಲ್ಲೂ ಅಗಾಧ ಬದಲಾವಣೆಗಳಾಗುತ್ತಿದ್ದುದು. ಇದಕ್ಕೆ ಕಾರಣ ಎಲ್ಲರೂ ನಮ್ಮವರೇ, ಎಲ್ಲ ಧರ್ಮಗಳೂ ಒಂದೇ ಎಂಬ ವಿಶಾಲ ಮನೋಭಾವ, ಅಚಲ ದೈವಭಕ್ತಿ ಹಾಗೂ ಮಗುವಿನಂಥ ಮುಗ್ಧ ಮನಸ್ಸು. ಬ್ಯಾರಿಸ್ಟರಾಗಿ ಇಂಗ್ಲೆಂಡಿನಿಂದ ಮರಳಿ ಭಾರತಕ್ಕೆ ಬಂದಾಗ ಗಾಂಧೀಜಿಗೆ ಇಪ್ಪತ್ತೆರಡರ ಹರಯ. ಸುಳ್ಳು ಹೇಳಲು ಭಯ. ಅಂದರೆ ವಕೀಲಿ ವೃತ್ತಿ ನಡೆಸುವುದು ಹೇಗೆ? ರಾಜಕೋಟ ಹಾಗೂ ಮುಂಬೈನಲ್ಲಿ ವೃತ್ತಿ ಸರಿಯಾಗಿ ನಡೆಯಲಿಲ್ಲ; ಸ್ವಾವಲಂಬಿ ಜೀವನ ನಡೆಸಲು ಸಾಧ್ಯವಾಗಲಿಲ್ಲ. ಎಲ್ಲೆಲ್ಲೂ ಒಳಸಂಚು ಹಾಗೂ ಪಿತೂರಿ. ಗೃಹಸ್ಥ ಗಾಂಧಿಗೆ ದಿಗಿಲಾಗಿತ್ತು. ಈ ಸಂದರ್ಭದಲ್ಲಿ ದಕ್ಷಿಣ ಆಫ್ರಿಕಾದಲ್ಲಿ ವ್ಯಾಪಾರಸ್ಥರಾಗಿದ್ದ ಪೋರಬಂದರಿನ ವ್ಯಾಪಾರಿ ಸಂಸ್ಥೆಯ ಮೊಕದ್ದಮೆಗಳನ್ನು ನಡೆಸಲು ಇವರನ್ನು ನೇಮಿಸಿಕೊಂಡಿತು. ಹೀಗಾಗಿ ದಕ್ಷಿಣ ಆಫ್ರಿಕಾಕ್ಕೆ ತೆರಳಿದರು. ಅಲ್ಲಿಯ ಬಿಳಿಯರು ಇವರನ್ನು 'ಕೂಲಿ ಬ್ಯಾರಿಸ್ಟರ್' ಎಂದು ಕರೆಯುತ್ತಿದ್ದರೆಂಬುದು ಮಾತ್ರ ಅಲ್ಲ, ಹಲವು ರೀತಿಯಲ್ಲಿ ಸ್ವಾಭಿಮಾನಕ್ಕೆ ಪೆಟ್ಟುಕೊಟ್ಟರು. ಪ್ರಥಮದರ್ಜೆ ಟಿಕೆಟ್ ಇದ್ದರೂ ಬೋಗಿಯಿಂದ ನೂಕಿದ್ದು, ಕುದುರೆ ಗಾಡಿಯ ಬಿಳಿಯ ನಿರ್ವಾಹಕ ಕಾಲಬಳಿ ಕುಳಿತುಕೊಳ್ಳಲು ಹೇಳಿ ಅವಮಾನಿಸಿದ್ದು, ಪ್ರತಿಭಟಿಸಿದಕ್ಕೆ ಹಿಗ್ಗಾ-ಮುಗ್ಗಾ ಥಳಿಸಿದ್ದು, ಇಂಥ ಅನೇಕ ಕೆಟ್ಟ ಅನುಭವಗಳಾದವು. ಸುಶಿಕ್ಷಿತರಾದ ತಮ್ಮ ಸ್ಥಿತಿಯೇ ಹೀಗಿರಬೇಕಾದರೆ, ಕೂಲಿಗಳಾಗಿ ದಕ್ಷಿಣ ಆಫ್ರಿಕಾದಲ್ಲಿರುವ ಲಕ್ಷಾಂತರ

ಭಾರತೀಯರ ಸ್ಥಿತಿ ಹೇಗಿರಬೇಡ! ಇದಕ್ಕೇನಾದರೂ ಮಾಡಬೇಕೆಂದು ನಿರ್ಧರಿಸಿ, ಗಾಂಧಿ ಭಾರತೀಯರನ್ನು ಒಗ್ಗೂಡಿಸಿದರು. ಸಮಸ್ಯೆಗಳ ಮೂಲ ಪಾರತಂತ್ರ್ಯ, ಬಡತನ, ನಿರಕ್ಷರತೆ ಹಾಗೂ ಅಸಂಘಟಿತ ಸ್ಥಿತಿ, ಎಂಬ ಅರಿವು ಮೂಡಿಸಿ ಎಲ್ಲರೂ ಅಕ್ಷರಸ್ಥರಾಗಬೇಕೆಂಬ ಸತ್ಯವನ್ನು ಮನಗಾಣಿಸಿದರು. ಈ ನಿಟ್ಟಿನಲ್ಲಿ ಅವರ ಪ್ರಯತ್ನಗಳು ಅಚ್ಚರಿಯ ಫಲಿತಾಂಶ ನೀಡಿದ್ದಲ್ಲದೆ, ಗಾಂಧಿ ಅಲ್ಲಿನ ಭಾರತೀಯರ ಕಣ್ಮಣಿಯಾದರು; ತಮ್ಮ ಮಕ್ಕಳ ಜೊತೆಗೆ ಭಾರತೀಯರ ಮಕ್ಕಳಿಗೂ ಶಿಕ್ಷಣ ನೀಡಲಾರಂಭಿಸಿ ಹೊಸ ಸಂಚಲನ ಸೃಷ್ಟಿಸಿದರು. 'ಹಿಡಿದರೆ ಹಿಡಿತುಂಬ, ಬಿಟ್ಟರೆ ಬಯಲ ತುಂಬ' ಎಂಬಂತಿದ್ದ ಗಾಂಧಿ ಬಾಪೂಜಿಯಾದರು. ಅಪ್ಪ ಇಟ್ಟ 'ಬಾಪೂ' ಎಂಬ ಹೆಸರು ಹೊತ್ತ ನನ್ನೊಳಗೂ ಹೊಕ್ಕು ಹೊಸ ಸಂಚಲನ ಮೂಡಿಸಿ, ಬಹುವಾಗಿ ಕಾಡಿ ನನ್ನಿಂದ ಈ ವಚನ ಬರೆಯಿಸಿದರು.

ಬಾಪು ಎನ್ನುತ್ತಾರೆ ಇವನ ಬಲ್ಲವರು
ಸಾಧುಂಗೆ ಸಾಧು ಮಾಧುರ್ಯಂಗೆ ಮಾಧುರ್ಯ
ದೇವರೆಂದರೆ ಇವಗೆ ಬೆಳಕಿನೊಡೆಯ ಆ ಸೂರ್ಯ!
ನಂಜಿಗೆ ಮತ್ತೆಂದೂ ಕೈಕೊಡದ ಧೈರ್ಯ
ನಂಜಿ ಸುಖದಿಂದಿದ್ದಾನೆ ಶರಣ, ಸಂತ-ಮಹಂತರು
ನಿರ್ಮಿಸಿದ ಕಾಯಕ ಕೈತೋಟದಲಿ ಕಾಯಕ ನಿರತ,
ಸೋಲಿಂಗೆ ಕುಗ್ಗದೆ, ಗೆಲುವಿಂಗೆ ಹಿಗ್ಗದೆ
ಬದುಕಿನೊಂದಿಗನುಸಂಧಾನಗೈಯುತ
ಸಿಟ್ಟ-ಸಿಡಿಲನುಕ್ಕಿನ ಕೊಡದಿ ಹೊಗಿಸಿ ಸಾವಧಾನದ
ಮುಚ್ಚಳ ಮುಚ್ಚಿ, ಮನಬಿಚ್ಚಿ ಮಾತನಾಡುತ
ದೂರವಿಟ್ಟು ದಾನವರ, ದೇವಮಾನವರೊಂದಿಗೆ
ಕಲೆತು ಬಾಳಬೇಕೆನುತ, ಸದ್ಗುರು ಬಸವಲಿಂಗ

ಹುಟ್ಟಾ ಸಂತನಲ್ಲದ ಗಾಂಧಿ ಹಲವು ದೌರ್ಬಲ್ಯಗಳನ್ನು ಮೀರುತ್ತ ಮಹಾತ್ಮಗಿರಿ ಏರಿದರು. ನಾನು ಇದನ್ನು ರೂಪಕವಾಗಿ ಪ್ರಸ್ತುತಪಡಿಸಿದ್ದು 1990ರ ದಶಕದಲ್ಲಿ. ಇದಕ್ಕೆ ದೊರೆತ ಶಿಕ್ಷಕರ ಅದ್ಭುತ ಪ್ರತಿಕ್ರಿಯೆ ಮತ್ತು 'ಸಬ್‌ಕೊ ಸನ್ಮತಿ ದೇ ಭಗವಾನ್' ಎಂಬ ಹೆಸರಿನಿಂದ ದೆಹಲಿ ಕರ್ನಾಟಕ ಸಂಘದ ಮಿತ್ರರಾದ ಶ್ರೀ ಶಿವಾನಂದ ಇಂಗಳೇಶ್ವರ ಅವರ ನಿರ್ದೇಶನದಲ್ಲಿ ಮಕ್ಕಳಿಂದ ಆಡಿಸಿದಾಗ ಹೊರಹೊಮ್ಮಿದ ಉದ್ಗಾರವೇ "ನಾನಾನೆಂಬದು ನಾನಲ್ಲ" ಎಂಬ ನಾಟಕವಾಗಿ ಹೊರಬಂದಿತು. 2019ರಲ್ಲಿ ಮೈಸೂರು ಅಸೋಸಿಯೇಷನ್ ಮುಂಬೈನಲ್ಲಿ ಏರ್ಪಡಿಸಿದ್ದ ನೇಸರು ಜಾಗತಿಕ ಏಕಾಂಕ

ನಾಟಕ ರಚನಾಸ್ಪರ್ಧೆಯಲ್ಲಿ ಬಹುಮಾನವೂ ದೊರಕಿತು. ತೀರ್ಪುಗಾರರಾಗಿದ್ದ ಶ್ರೀ ಹುಲಿಗೆಪ್ಪ ಕಟ್ಟೀಮನಿ ಅವರು, "ನನ್ನನ್ನು ಬಹುವಾಗಿ ಕಾಡಿದ ಈ ನಾಟಕದ ಪ್ರಯೋಗ ಮಾಡಬಯಸಿದ್ದೇನೆ, ಇದು ಪೂರ್ಣಾವಧಿ ನಾಟಕವಾಗಿ ಬರಲಿ" ಎಂದರು. ಕೆಟ್ಟ ದಂಪತಿಗಳು ಜಗಳ ಮಾಡುತ್ತಾರೆ, ಸಾಮಾನ್ಯ ಸತಿಪತಿಗಳು ವಾದ ಮಾಡುತ್ತಾರೆ, ಅಸಾಮಾನ್ಯರು ಸಂವಾದದ ಮೂಲಕ ಒಬ್ಬರನ್ನೊಬ್ಬರು ಅರಿಯುವ ಪ್ರಯತ್ನ ಮಾಡುತ್ತಾರೆ. ಇಂಥ ಅಸಾಮಾನ್ಯ ದಾಂಪತ್ಯ ಮೋಹನದಾಸ್–ಕಸ್ತೂರಬಾ ಅವರದು. ಆದ್ದರಿಂದ ನನ್ನ ನಾಟಕದ ವಸ್ತು ಏಕಕಾಲಕ್ಕೆ ಲೋಕಲ್ ಹಾಗೂ ಗ್ಲೋಬಲ್ ಆಯಾಮಗಳನ್ನು ಒಳಗೊಂಡಿರುವಂಥದು. ಇದರ ಲೋಕಾರ್ಪಣೆ ಗಾಂಧಿ ಭವನ, ಗಾಂಧಿ ಸ್ಮಾರಕ ನಿಧಿಯ ಮೂಲಕ ಆಗುತ್ತಿರುವುದು ನನಗೆ ದೊರೆತ ಬಹುದೊಡ್ಡ ಬ್ರೇಕ್ ಎಂದು ಭಾವಿಸುವೆ. ಈ ನಾಟಕ ಹೆಚ್ಚೆಚ್ಚು ಜನರನ್ನು ತಲುಪಿ, ಹೆಚ್ಚೆಚ್ಚು ಪ್ರಯೋಗಗಳನ್ನು ಕಂಡು ಗಾಂಧಿ–ಕಸ್ತೂರಬಾರ ಸಂದೇಶ ಎಲ್ಲರಿಗೂ ತಲುಪಲಿ ಎಂಬ ಆಶಯ ನನ್ನದು.

ನನ್ನನ್ನು ಹರಸಿ ಬೆಳೆಸಿದ ಎಲ್ಲ ಪೂಜ್ಯರಿಗೆ, ಗುರುಗಳಿಗೆ, ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾದ ಸಹೃದಯಿ ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರಿಗೆ, ಸದಾ ಹಸನ್ಮುಖಿ, ಮಮತಾಮಯಿ, ಗಾಂಧಿ ಭವನದ ಕಾರ್ಯದರ್ಶಿ ಶ್ರೀಮತಿ ಇಂದಿರಾ ಕೃಷ್ಣಪ್ಪನವರಿಗೆ, ಒಳ್ಳೆಯದನ್ನು ಎಲ್ಲಿದ್ದಲ್ಲಿಗೆ ಅರಸಿಕೊಂಡು ಹೋಗಿ ತಂದು ಪರಿಚಯಿಸುವ ಗುಣಗ್ರಾಹಿ, ಉಪಾಧ್ಯಕ್ಷರಾದ ಶ್ರೀ ವಿ.ಎಸ್. ತಿಪ್ಪನಗೌಡರಿಗೆ, ಗಾಂಧಿ ಸ್ಮಾರಕ ನಿಧಿಯ ಎಲ್ಲ ಸದಸ್ಯರುಗಳಿಗೆ, ನಿತ್ಯ ಕುತೂಹಲಿ ಶಿಕ್ಷಕ ಬಂಧುಗಳಿಗೆ, ನಾಟಕದ ಬಗ್ಗೆ ಮೆಚ್ಚುಗೆಯ ಮಾತು ಬರೆದ ಶ್ರೀ ಹುಲಿಗೆಪ್ಪ ಕಟ್ಟೀಮನಿ ಅವರಿಗೆ, ಮೈಸೂರು ಅಸೋಸಿಯೇಷನ್ ಮುಂಬೈನ ಎಲ್ಲ ಕನ್ನಡಾಭಿಮಾನಿ ಬಂಧುಗಳಿಗೆ, ಇದರ ಮೊದಲ ಪ್ರಯೋಗದ ನಿರ್ದೇಶಕರಾದ ಸನ್ಮಿತ್ರ ಶಿವಾನಂದ ಇಂಗಳೇಶ್ವರ, ದೆಹಲಿ ಕನ್ನಡ ಸಂಘ ಹಾಗೂ ದಿನಕರ ತಂಡದ ಎಲ್ಲ ಸಹೃದಯ ಬಂಧುಗಳಿಗೆ, ನಾಟಕಕ್ಕೆ ಮುನ್ನುಡಿ ಬರೆದ ಗೆಳೆಯ ರಾಗಂ ಅವರಿಗೆ, ಬೆನ್ನುಡಿ ಬರೆದ ಗೆಳೆಯ ಡಾ. ಬೇಲೂರು ರಘುನಂದನ್ ಅವರಿಗೆ ನನ್ನೊಂದಿಗೆ ನಿತ್ಯ ಸಂವಾದ ನಡೆಸಿ ಮುನ್ನಡೆಸುವ ಹಿತೈಷಿಗಳಾದ ಡಾ. ಜಿ.ಆರ್. ತಮಗೊಂಡ, ಅಶೋಕ ಚಲವಾದಿ, ಡಾ. ಜಿನದತ್ತ ಹಡಗಲಿ, ಸಂತೋಷ್ ತಮ್ಮಯ್ಯ, ಪ್ರೊ. ಶೇಷಾಚಲ ಹವಾಲ್ದಾರ್, ಪ್ರೊ. ಚಂದ್ರಗೌಡ ಕುಲಕರ್ಣಿ, ಶ್ರೀಕಾಂತ ಪತ್ತಾರ, ಪಾಂಡುರಂಗ ಯಲಿಗಾರ, ಶರಣಬಸವ ಚೋಳಿನ, ಅಶೋಕ ಬೈಲವಾಡ, ಡಾ. ನಿರ್ಮಲಾ ಯಲಿಗಾರ, ಎಚ್.ಎಸ್. ಆರತಿ, ಪ್ರಸನ್ನಕುಮಾರ್, ಬಸವಲಿಂಗಯ್ಯ, ವಿಶ್ವೇಶ್ವರಿ, ಜನ್ನು[illegible]ಲ, ರಮೇಶ್, ಸತೀಶ್, ಸುರೇಶ್ ಪರ್ವತಿಕರ್, ಈಶಣ್ಣ, ಶಿವಾನಂದ, ಛಾಯಾ ಭಗವತಿ.

ಸುಮಂಗಲಾ, ಬೆಳಗಾವಿ ಲೇಖಕಿಯರ ಸಂಘದ ಸೋದರಿಯರು, ವಾತ್ಸಲ್ಯ ವಿಚಾರ ವೇದಿಕೆಯ ಎಲ್ಲ ಕಲಾವಿದರಿಗೆ, ನನ್ನನ್ನು ಬೆಳಸಿದ ವಿದ್ಯಾರ್ಥಿಗಳಿಗೆ ನಾನು ಚಿರಋಣಿ.

ವಾತ್ಸಲ್ಯ ವಿಚಾರ ವೇದಿಕೆಯ ಅಸ್ತಿಯಂತಿದ್ದ ಮಿತ್ರ, ಮಹಾದೇವ ಬೆಣಗಿ ಹಾಗೂ ಅಶೋಕ್ ಬೀಳಗಿ ಅವರು ಹೇಳದೆ ಕೇಳದೆ ಎದ್ದು ಹೋದ ಅಘಾತವನ್ನು ಸಹಿಸಿಕೊಳ್ಳಲಾಗುತ್ತಿಲ್ಲ. ಭೌತಿಕವಾಗಿ ಇಲ್ಲದಿದ್ದರೂ ಅವರ ಹಾರೈಕೆ ನಮ್ಮೊಂದಿಗಿವೆ. ಹಾಗೆ ನನ್ನೊಳಗಿನ ಬಾಪುವಿಗೆ ಬಂಧನದ ಬೇಡಿ ಹಾಕದೆ ನನ್ನನ್ನು ಸಮಾಜಕ್ಕೆ ಬಿಟ್ಟುಕೊಟ್ಟ ಮನೆಯೊಡತಿ 'ಮಾಯಿ', ವಾತ್ಸಲ್ಯದ ಮತ್ತೆಲ್ಲ ವಾರಸುದಾರರಿಗೆ, ನನ್ನನ್ನು ಗಾಢವಾಗಿ ಪ್ರೀತಿಸುವ ರಂಗಬಂಧುಗಳಿಗೆ ನನ್ನ ಪ್ರೀತಿಪೂರ್ವಕ ವಂದನೆಗಳು. ಅಂದವಾದ, ಅರ್ಥಪೂರ್ಣವಾದ ಮುಖಪುಟ ರಚಿಸಿ, ಮುದ್ರಿಸಿದ ಕ್ರಿಯೇಟೀವ್‌ಗೀಕ್ಸ್‌ನ ಮಹೇಶ್ ಅವರ ತಂಡಕ್ಕೆ ಧನ್ಯವಾದಗಳು.

ಪ್ರೊ. ಬಿ.ಆರ್. ಪೊಲೀಸ್‌ಪಾಟೀಲ
'ವಾತ್ಸಲ್ಯ', ಬನಹಟ್ಟಿ – 587311

ಸಂಪರ್ಕ :
9380603538, 9448242980

ಪರಿವಿಡಿ



ನಿಜವಾದ ಪ್ರೀತಿ ವ್ಯಕ್ತವಾಗುವುದು ಹೊಗಳಿಕೆಯಿಂದಲ್ಲ, ಸೇವೆಯ ಮುಖಾಂತರ. ಆತ್ಮ ಶುದ್ಧೀಕರಣವು ನಿಜವಾದ ಸೇವೆಯ ಪ್ರಾಸ್ತಾವಿಕ ವಿಧಾನವಾಗಿರುವುದು ಅವಶ್ಯಕ ಸಂಗತಿಯಾಗಿರುವುದು.

– ಮಹಾತ್ಮ ಗಾಂಧಿ

ನಾನಾನೆಂಬುದು ನಾನಲ್ಲ

ರಂಗ ರೂಪ

ಪ್ರೊ. ಬಿ.ಆರ್. ಪೊಲೀಸ್‌ಪಾಟೀಲ

ನಾಟಕದ ಪಾತ್ರಗಳು

1. ಮೋಹನದಾಸ್ ಕರಮಚಂದ ಗಾಂಧಿ
2. ಕಸ್ತೂರಬಾ
3. ರುಸ್ತುಮ್‌ಜಿ
4. ಮನಸುಖಲಾಲ್
5. ಮಿ.ಲಾಟನ್
6. ಕಪ್ತಾನ್
7. ಸೇಠ್ ಆದಮ್‌ಜಿ
8. ಮಣಿಲಾಲ್}
9. ರಾಮದಾಸ್} ಮಕ್ಕಳು
10. ಲೇಡಿ ಅಲೆಗ್ಸಾಂಡರ್
11. ನಿರೂಪಕ
12. ಮುಮ್ಮೇಳ
13. ಧ್ವನಿ 1
14. ಧ್ವನಿ 2
15. ಒಬ್ಬ
16. ಇನ್ನೊಬ್ಬ
17. ನೀಲಕಂಠಜಿ
18. ದಾದಾ ಅಬ್ದುಲ್ಲಾ
19. ಮುರುಘನ್
20. ಬಾಲಸುಂದರಂ

ದೃಶ್ಯ – 1

(ವೇದಿಕೆಯ ಹಿಂದೆ ಗಾಂಧಿ 150 ಮರೆಯಲಾಗದವರ ಸಾನ್ನಿಧ್ಯದಲ್ಲಿ ಎಂಬ ಬ್ಯಾನರ್ ರಾರಾಜಿಸುತ್ತಿದೆ. ವೇದಿಕೆಯ ಮೇಲೆ ಖಾದೀಧಾರಿ ವ್ಯಕ್ತಿಗಳಿಬ್ಬರು ಕುಳಿತಿರುವುದು, ಪೋಡಿಯಂ ಹಿಂದೆ ನಿರೂಪಕ ಕಾರ್ಯಕ್ರಮ ಆರಂಭಿಸಲು ಸಿದ್ಧನಾಗಿರುವುದು. ಮೆಲ್ಲಗೆ ಬೆಳಕು ಪ್ರಖರವಾಗುತ್ತದೆ)

ನಿರೂಪಕ ಮಹಾಜನಗಳಿಗೆ ನಮ್ಮೆಲ್ಲರ ಹೃತ್ಪೂರ್ವಕ ನಮಸ್ಕಾರ "ಗಾಂಧಿ 150 ಮರೆಯಲಾಗದವರ ಸಾನ್ನಿಧ್ಯದಲ್ಲಿ" ಈ ಸಂಭ್ರಮದ ಸಮಾರಂಭಕ್ಕೆ ಸಾಕ್ಷಿಯಾದ ಸ್ವಾತಂತ್ರ್ಯ ಹೋರಾಟಗಾರರೂ ತಮ್ಮ ಗಾಂಧಿಗಿರಿಗಾಗಿ ಈ ನಾಡಿನ ತುಂಬೆಲ್ಲ ಚಿರಪರಿಚಿತರಾದ ಸಮಾಜಮುಖಿ ಚಿಂತಕರೂ ಆದ ಮಾನ್ಯ ಶ್ರೀ ನೀಲಕಂಠಜಿ ಅವರಿಗೆ ತಮ್ಮೆಲ್ಲರ ಪರವಾಗಿ ಹೃತ್ಪೂರ್ವಕವಾದ ಸ್ವಾಗತ. (ಚಪ್ಪಾಳೆ) ಹಾಗೆ ಈ ಸಮಾರಂಭದ ಅಧ್ಯಕ್ಷತೆ ವಹಿಸಿದ ನಮ್ಮ ಸಮಿತಿಯ ಅಧ್ಯಕ್ಷರಾದ ಶ್ರೀ ಶಿವರಾಜ ಅವರಿಗೂ ಆದರದ ಸ್ವಾಗತ. ಮತ್ತು ಈ ಸಂಭ್ರಮವನ್ನು ನಮ್ಮೊಂದಿಗೆ ಹಂಚಿಕೊಳ್ಳಲು ಬಂದಿರುವ ತಮ್ಮೆಲ್ಲರಿಗೂ ಪ್ರೀತಿ ಪೂರ್ವಕ ಸ್ವಾಗತ ಕೋರಿ ಈ ಕಾರ್ಯಕ್ರಮವನ್ನು ಗಾಂಧೀಜಿಯವರನ್ನು ಕುರಿತು ರಚಿಸಲಾದ ಒಂದು ಲಾವಣಿಯೊಂದಿಗೆ ಪ್ರಾರಂಭಿಸುತ್ತೇವೆ. ಇದನ್ನು ನಡೆಸಿಕೊಡುವವರು ನಾಡಿನ ಖ್ಯಾತ ಲಾವಣಿಕಾರರಾದ ಶ್ರೀ ಬಾಪೂಜಿ ಹಾಗೂ ಅವರ ತಂಡದವರು..ಬನ್ನಿ ಆಲಿಸೋಣ. ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸೋಣ.

ಮುಮ್ಮೇಳ ಗಾಂಧಿ ನೂರಾ ಐವತ್ತರ ಸಂಭ್ರಮಕ್ಕೆ ಸಾಕ್ಷಿಯಾದ ತಮಗೆಲ್ಲ ಶರಣು ಅಂದು ನಮ್ಮ ಈ ಲಾವಣಿ ಆರಂಭ ಮಾಡ್ತೀವಿ, ಕೇಳ್ರಿ.

ಗಾಂಧಿ ಅಜ್ಜಾ ನಮ್ಮ ಅಜ್ಜಾ ಹೆಂತಾ ಸರದಾರ
ಯುಗಕೊಮ್ಮೆ ಹುಟ್ಟಿಬರತಾರಿಂಥಾ ಮಹಾತ್ಮರಾ

ಇಸ್ವಿ ಸನ್ ಹದಿನೆಂಟ್ನೂರಾ ಅರವತ್ತೊಂಬತ್ತ
ಅಕ್ಟೋಬರ್ ತಿಂಗಳದಾಗ ಎರಡನೇ ತಾರೀಖ
ನೆಲದಾಗಿನ ನಕ್ಷತ್ರೊಂದು ಎದ್ದು ಬಂದಿತ್ತ
ಹಿಂದುಸ್ತಾನತ್ತುಂಬಾ ಬೆಳ್ಳಂಬೆಳಕ ಆಗಿತ್ತ

ತಾಯಿ ಪುತಳಿಬಾಯಿ ತಂದಿ ಕರಮಚಂದರಾ
ಮುದ್ದು ಮೋಹನದಾಸಂತ ಹೆಸರ ಇಟ್ಟಾರ
ಕೂಸಿನಿಂದ ದೇಶಾತ ಜಗಜ್ಜಾಹೀರಾ
ಯುಗಕೊಮ್ಮೆ ಹುಟ್ಟಿ ಬರತಾರಿಂತಾ ಮಾತ್ಮರಾ

ಸಂಗದೋಷದಿಂದ ಕೆಟ್ಟು ಚುಟ್ಟಾ ಸೇದ್ಯಾರ
ಕಳು ಮಾಡಿ ಅಪ್ಪನ ಮುಂದ ಸುಳ್ಳ ಹೇಳ್ಯಾರ
ಹರಿಶ್ಚಂದ್ರ ಶ್ರವಣಕುಮಾರ ಹಾದೀ ತೋರ್‍ಯಾರ
ಅಪ್ಪನ ಮುಂದ ಹಿಡಿಯಾಗಿ ಕೈಯ ಮುಗದಾರ

ಬ್ಯಾರಿಸ್ಟರ್ ಪಾಸ ಮಾಡಿ ಬರತೀನೆಂದಾರ
ಇಂಗ್ಲಂಡ ದೇಶಕ ಹಡಗಾ ಹತ್ತಿ ಹೊಂಟನಿಂತಾರ
ಅವ್ವನ ಕೈಮ್ಯಾಗ ಕೈ ಹಾಕಿ ಕಣ್ಣೀರೊರಿಸ್ಯಾರ
ಮದ್ಯ ಮಾಂಸ ಮುಟ್ಟಂಗಿಲ್ಲ ಇದ ನಿರ್ಧಾರ

ದಕ್ಷಿಣಾಫ್ರಿಕ ದೇಶಕ್ಹೋಗಿ ಸಡ್ಡ ಹೊಡದಾರ
ಪರಂಗೇರ ಮೂಗ ಹಿಡದು ಹಕ್ಕ ಬೇಡ್ಯಾರ
ಕುಟಿಲ ಕಾರಸ್ಥಾನಕ ಚಳ್ಳಹಣ್ಣ ತಿನಿಸ್ಯಾರ
ಬಿಟ್ಟೂ ಬಿಡದ ಹಕ್ಕಿಗಾಗಿ ಚಳುವಳಿ ನಡಿಸ್ಯಾರ

ವಕೀಲಿಕೆಂಬೂ ಬಂಗಾರ ಕೋಳಿ ಹಂಗ ಬಿಟ್ಟಾರ
ಆಸೆಂಬೊ ಗಯ್ಯಾಳಿ ದೂರ ಇಟ್ಟಾರ
ನಾನಂಬೂ ಮೃಗ ಬೆಂಕಿ ಇಲ್ದ ಸುಟ್ಟಾರ
ರಾತ್ರಿ ಹಗಲ ಪರಂಗೇರ ನಿದ್ದಿಗೆಡಿಸಾರ

(ಪ್ರೇಕ್ಷಕರ ಕರತಾಡನ ಮೇಳದ ವಂದನೆ)

ನಿರೂಪಕ ತುಂಬ ಅದ್ಭುತವಾದ ಲಾವಣಿ ಕಟ್ಟಿ ಅಷ್ಟೇ ಅದ್ಭುತವಾಗಿ ಹಾಡಿದ ಬಾಪೂಜಿ ಅವರಿಗೂ ಮತ್ತು ಅವರ ಮೇಳದವರಿಗೂ ಧನ್ಯವಾದ ಹೇಳ್ತಾ ನಮ್ಮ ಇವತ್ತಿನ ಅತಿಥಿಗಳಾದ ಮಾನ್ಯ ಶ್ರೀ ನೀಲಕಂಠಜೀ ಅವರನ್ನು ಗಾಂಧೀಜಿ ಅವರ ಜೊತೆಗೆ ಸ್ವಾತಂತ್ರ್ಯಾಂದೋಲನದಲ್ಲಿ ಭಾಗವಹಿಸಿ, ಲಾಠಿ ಪೆಟ್ಟು ತಿಂದು, ಜೈಲುವಾಸ ಅನುಭವಿಸಿದ ಗಾಂಧೀಜಿ ಕುರಿತ ತಮ್ಮ ವಿಚಾರ ಹಂಚಿಕೊಳ್ಳಬೇಕು ಅಂತ ವಿನಂತಿಸ್ತೇನೆ.

ನೀಲಕಂಠಜಿ ಸಭಿಕರಿಗೆಲ್ಲ ಶರಣು ಶರಣಾರ್ಥಿ. ಗಾಂಧಿ 150 ಇದು ಅಂತ್ಯ ಅಲ್ಲ, ಆರಂಭ. ಗಾಂಧಿ ಸಾವಿರದ ಐವತ್ತು, ಲಕ್ಷದ ಐವತ್ತೂ ಅಂತ್ಯ ಅಲ್ಲ, ಯಾಕಂದರ ಗಾಂಧಿ ವ್ಯಕ್ತಿ ಅಲ್ಲ, ಶಕ್ತಿ. ಶಕ್ತಿ ಇವತ್ತಿಗೂ ಶಕ್ತಿ, ಯಾವೊತ್ತಿಗೂ ಶಕ್ತಿ. ಜಗದೊಡೆಯ ಜಗನ್ನಾಥನ ಸಂಗಾತಿ ಶಕ್ತಿ ಈ ಜಗದ ಜೀವ. ಇಂಥಾ ಶಕ್ತಿಗೆ ಹ್ಯಾಂಗ ಸಾವಿಲ್ಲವೊ ಹಾಂಗ ತನಗಾಗಿ ತಾನಲ್ಲ ಅಂತ ಪರರಿಗಾಗಿ ಜೀವ ಸವೆಸಿದ ಮಹಾತ್ಮಾ ಗಾಂಧಿಯಂತವರಿಗೂ ಸಾವಿಲ್ಲ. ನಾವು ಆಚರಿಸೊ ಇಂಥ ಸಮಾರಂಭದಿಂದ, ಅವರ ದೊಡ್ಡ ಪ್ರತಿಮೆ ನಿಲ್ಲಸೂದ್ರಿಂದ ಅವರು ದೊಡ್ಡವರಾಗೂದಿಲ್ಲ. ಅವರ ತತ್ವ ಆಚರಿಸೋದ್ರಿಂದ ಅವರ್ನ ದೊಡ್ಡವರ್ನ ಮಾಡಬೇಕು. ಕವಿ ದಿನಕರ ದೇಸಾಯಿ ಅವರು ತಮ್ಮ ಒಂದು ಕವಿತೆಯೊಳಗ ಇದನ್ನ ಬಾಳ ಅರ್ಥಪೂರ್ಣವಾಗಿ ಹೇಳ್ಯಾರ, ಕೇಳ್ರಿ.

ನಿನ್ನ ಪ್ರತಿಮೆಯ ನಿಲಿಸಿ ನಾವು ಮೆರೆವುದು ವ್ಯರ್ಥ
ನಮ್ಮ ಹೃದಯದೊಳಿರಲಿ ನಿನ್ನ ಬದುಕಿನ ಅರ್ಥ
ನಿನ್ನ ಭಸ್ಮಕೆ ಕಾಶಿ ಗೋಕರ್ಣ ಬೇಕಿಲ್ಲ
ನಿನ್ನ ಬೂದಿಯ ತ್ರಾಣ ಪುಣ್ಯಕ್ಷೇತ್ರಕ್ಕಿಲ್ಲ
ನಿನ್ನ ಕರ್ಮದ ಕಲ್ಪವೃಕ್ಷ ಅಜರಾಮರವು
ನಿನಗೇಕೆ ಜನ್ಮ-ತಿಥಿಗಳ ಬಾಹ್ಯ ಜಂಜಡವು

(ಪ್ರೇಕ್ಷಕರ ಕರತಾಡನ) ಗಾಂಧಿ ಅಂದರ ಸತ್ಯ, ಸತ್ಯ ಅಂದರ ಗಾಂಧಿ. ಸತ್ಯ ಸ್ಥಾಯಿ ಅಲ್ಲ, ಸಂಚಾರಿ, ಸತ್ಯ ಸ್ಥಾವರ ಅಲ್ಲ, ಜಂಗಮ. ಹಂಗ ಸತ್ಯ

ಮಾತಾಡುವವನೂ ಸ್ಥಾಯಿಯಲ್ಲ. ನಿಂತಲ್ಲೇ ನಿಲ್ಲೂದು ಸಾಧ್ಯ ಇಲ್ಲ. ಯಾಕಂದರ ಸತ್ಯ ಒಂದು ಕಹಿಯಾದ ಕಷಾಯ, ಕುಡಿದ್ರ ರೋಗ ಗುಣ ಆಗ್ತದ. ಆದರ ಕುಡಿಯಾಕ ಆಗಂಗಿಲ್ಲ. ಹಿಂಗ ಸತ್ಯ ಮತ್ತ ಗಾಂಧಿ ಇಬ್ಬರನ್ನೂ ಅರಗಿಸಿಕೊಳ್ಳೂದು ಬಾಳ ಕಷ್ಟ ಆಯ್ತು ಆ ಕಾಲಘಟ್ಟದ ಮಂದೀಗೆ. ಅವರಾಡಿದ ಮಾತು ಒಮ್ಮೊಮ್ಮೆ ಶಬ್ದದೊಳಗಿನ ಅರ್ಥ ಅನ್ನಿಸಿದರ ಮತ್ತೊಮ್ಮೆ ಶಬ್ದದೊಳಗಿನ ನಿಶಬ್ದ ಅನ್ನಿಸ್ತಿದ್ದವು. ಹೀಂಗಾಗಿ ಗಾಂಧಿ ಅಂದರ ಒಂದು ಒಡೀಲಾರದ ಒಗಟಾಗಿಬಿಟ್ಟಿದ್ದರು.

ಧ್ವನಿ ಯಾರಿಗೆ ?

ನಿಲಕಂಠಜ ಹೊರಗಿನವರಿಗೊ ಏನ್ ಒಳಗಿನವರಿಗೊ ಅನ್ನಬ್ಯಾಡ್ರಿ. ಯಾಕಂದರ ಈ ಹೊರಗ–ಒಳಗ, ಮ್ಯಾಲೆ ಕೆಳಗ ಅನ್ನೂ ಭೇಧ ಮರತು ಬದುಕಿದ ಗಾಂಧಿ. ಬದುಕು ಕಟ್ಟಿಕೊಳ್ಳಲಿಕ್ಕೆ ದಕ್ಷಿಣ ಆಫ್ರಿಕಾಕ ಹೋದವರು ಅಲ್ಲೀ ಭಾರತೀಯರ ಸ್ಥಿತಿ ಕಂಡು ಮಮ್ಮಲ ಮರುಗಿದರು. ಭೇದದ ಮೂಲಕ್ಕ ಕೈಹಾ್ ಮೈನುಗ್ಗ ಮಾಡಿಕೊಂಡ್ರು, ಅಂಥಾ ಒಂದು ಪ್ರಸಂಗ ನೆನಪಿಸ್ತೀನಿ ಕೇಳ್ರಿ. ದಕ್ಷಿಣ ಆಫ್ರಿಕಾದ ಬಿಳಿಯರ ಸರಕಾರ ಭಾರತೀಯರನ್ನ ಬಾಳ ಕೆಟ್ಟದಾಗಿ ನಡಿಸಿಕೊಳ್ತಿತ್ತು. ಅವರ ಮತಾಧಿಕಾರ ಕಸಗೊಳ್ಳಾಕ ಹೊರಟಿತ್ತು. ಅವರ ತಲಿಮ್ಯಾಲ ಹೊರಲಾರದಂಥ ತೆರಿಗೆಭಾರ ಹೇರಿತ್ತು. ಇದರ ವಿರುದ್ಧ ಹೋರಾಟ ಮಾಡಲಾಕಂತ ನೇಟಲ್ ಇಂಡಿಯನ್ ಕಾಂಗ್ರೆಸ್ ಸಂಘ ಕಟ್ಟಿ ಹೋರಾಟ ಮಾಡಿದ ಗಾಂಧಿ ಭಾರತಕ್ಕ ಬಂದ ಮ್ಯಾಲೂ ಪತ್ರಿಕೆಯೊಳಗ ಇದರ ಬಗ್ಗೆ ಬರದರು. ಹೋರಾಟದ ಹೆದ್ದಾರಿ ರೂಪಿಸಿದರು. ಎರಡನೆ ಸಾರೆ ಅವರು ಡರ್ಬನ್‌ದೊಳಗ ಬಂದು ಇಳದಾಗ ಒಂದು ಘಟನೆ ನಡೀತದ. ಅದೇನಪಾ ಅಂದರ (ಫ್ಲ್ಯಾಷ್ ಬ್ಯಾಕ್)

ದೃಶ್ಯ - 2

(ಡರ್ಬನ್ ಬಂದರಿನ ಹೊರಗಿನ ಅಂಗಳ)

ಹಡಗಿನ ಕಪ್ತಾನ್ ಮಿ. ಗಾಂಧಿ, ನೀವು ದುಡುಕಬಾರದು, ನನ್ನ ಮಾತು ಕೇಳ್ರಿ ನಿಮ್ಮ ಜೀವಕ್ಕೆ ಇಲ್ಲಿ ಅಪಾಯ ಅದ. ಅದಕ್ಕ, ನೀವು, ನಿಮ್ಮ ಕುಟುಂಬದವರೆಲ್ಲ ಸಂಜೆತನಕ ಬಂದರ್‌ದಲ್ಲೇ ಇದ್ದು ಕತ್ತಲಾದ ಮ್ಯಾಲೆ ರುಸ್ತುಂಜಿ ಅವ್ರ ಮನೆಗೆ ಹೋಗಬೇಕು.

ಗಾಂಧಿ ಯಾಕ? ಕ್ಯಾಪ್ಟನ್, ನನ್ನ ಜೀವಕ್ಕ ಹಾನಿ ಮಾಡುವವರು ಯಾರು ? ಯಾವ ಕಾರಣಕ್ಕ?

ಕಪ್ತಾನ್ ಡರ್ಬಾನಿನ ಬಿಳಿಯರು

ಗಾಂಧಿ ಯಾಕ ? ನಾನು ಅವರಿಗೆ ಏನ್ ಅನ್ಯಾಯ ಮಾಡೀನಿ?

ಲಾಟನ್ ಮಿ. ಗಾಂಧಿ ಈ ಕಪ್ತಾನರು ಹೇಳಿದ್ದು ಸುಳ್ಳಲ್ಲ. ನೀವು ಭಾರತದ ಪತ್ರಿಕೆಗಳಲ್ಲಿ ಇಲ್ಲಿಯ ಸರಕಾರ ಮತ್ತೆ ಬಿಳಿಯ ಜನ ಭಾರತೀಯರನ್ನ ಕೆಟ್ಟದಾಗಿ ನಡೆಸಿಕೊಳ್ತಾರೆ ಅಂತ ಬರೆದದ್ದು ಒಂದು ಕಾರಣ. ಹಾಗೆ ಈಗ ಇಲ್ಲಿಗೆ ಬಂದು ತಲುಪಿದ ಎರಡೂ ಹಡಗುಗಳಲ್ಲಿ ಬಂದ ಭಾರತೀಯರನ್ನೆಲ್ಲ ನೀವೇ ಕರೆದುಕೊಂಡು ಬಂದು ಅವರ ವಿರುದ್ಧ ಹೋರಾಟ ಮಾಡ್ತೀರಿ ಅನ್ನೂದು ಇನ್ನೊಂದು.

ಗಾಂಧಿ ಮಿ. ಲಾಟನ್, ನೀವು ಹೇಳಿದ್ದರೊಳಗ ಮೊದಲನೇದ್ದು ಅರ್ಧ ಸತ್ಯ. ಆದರ ಎರಡನೇದ್ದು ಪೂರಾ ಸುಳ್ಳು. ಯಾಕಂದರ ಈ ಎರಡೂ ಹಡಗುಗಳಲ್ಲಿ ಬಂದ ಎಂಟು ನೂರು ಜನರಲ್ಲಿ ನನ್ನ ಕುಟುಂಬದವರನ್ನ ಬಿಟ್ಟರೆ ಪರಿಚಯದವರು ಬೆರಳೆಣಿಕೆಯಷ್ಟೇ ಜನ. ಹೌದು. ಭಾರತೀಯರ ನ್ಯಾಯಬದ್ಧ ಬೇಡಿಕೆಗಳಿಗಾಗಿ ಹೋರಾಟ ಮಾಡೋದು ನನ್ನ ಗುರಿ. ಅದನ್ನ ನಾನು ಮುಂದುವರೆಸದೆ ಬಿಡಲಾರೆ. ಇನ್ನೊಂದು ಸಂಗತಿ ಸುಳ್ಳು ಅಂತ ನಾನು ಅವರಿಗೆ ಹೇಳ್ತೀನಿ.

ಕಪ್ತಾನ್	ನೀವು ಹೇಳಬಹುದು ಗಾಂಧಿ, ಆದ್ರೆ ಅವ್ರು ನಿಮ್ಮನ್ನ ನಂಬೋದಿಲ್ಲ. ನಿಮ್ಮನ್ನ ಹಗಲಿನಲ್ಲಿ ಸಿಟಿಯೊಳಗೆ ಕಳಿಸಬಾರದು ಅಂತ ಮಿ.ಎಸ್ಕೋಂಬ್ ಅವ್ರು ಹೇಳಿ ಕಳಿಸಿದ್ದಾರೆ.
ಲಾಟನ್	ಗಾಂಧಿ ಇಲ್ಲಿಗೆ ಬಂದಿರೋದು ವಕೀಲಿ ವೃತ್ತಿ ಮಾಡೋಕೆ. ಕದ್ದು ಮುಚ್ಚಿ ಜೀವನ ಮಾಡ್ಲಿಕ್ಕಲ್ಲ. ಇವತ್ತಲ್ಲದಿದ್ರೂ ನಾಳೆಯಾದ್ರೂ ಹೊರಗೆ ಬರಲೇಬೇಕಲ್ಲ?
ಕಪ್ತಾನ್	ಅದೆಲ್ಲಾ ನನಗೆ ಗೊತ್ತಿಲ್ಲ. ರಾತ್ರಿ ಇವರ ಕುಟುಂಬದವರಿಗೆ ಪೊಲೀಸ್ ಸುಪರಿಂಟೆಂಡೆಂಟ್‌ರು ರಕ್ಷಣೆ ಕೊಡ್ತಾರೆ ಅಂತ ಮಿ.ಎಸ್ಕೋಂಬ ತಿಳಿಸಿದ್ದಾರೆ.
ಲಾಟನ್	ನಿಮ್ಮ ಅಭಿಪ್ರಾಯ ಏನು ಮಿ. ಗಾಂಧಿ?
ಗಾಂಧಿ	ನಿಮ್ಮ ಅಭಿಪ್ರಾಯನೇ ನನ್ನ ಅಭಿಪ್ರಾಯ. ಈಗಲೇ ಹೊರಡೋಣ. ಯಾರಾದ್ರೂ ನಮ್ಮನ್ನ ತಡೆದರೆ ಸತ್ಯ ಹೇಳೋಣ.
ಲಾಟನ್	ವೆರಿ ಗುಡ್. ನಿಮಗೆ ಹೆದರಿಕೆ ಇಲ್ಲದಿದ್ರೆ ಹೀಗೆ ಮಾಡೋಣ.
ಗಾಂಧಿ	ಹ್ಯಾಗೆ?
ಲಾಟನ್	ನಿಮ್ಮ ಶ್ರೀಮತಿಯವರು ಹಾಗೂ ಮಕ್ಕಳು ಗಾಡಿಯಲ್ಲಿ ರುಸ್ತುಂಜಿ ಅವರ ಮನೆಗೆ ಹೋಗಲಿ. ನಾವು ಹಿಂದಿನಿಂದ ನಡೆದುಕೊಂಡು ಹೋಗೋಣ. ನೀವು ರಾತ್ರಿ ಹೊತ್ತು ಕಳ್ಳನಂತೆ ಪುರ ಪ್ರವೇಶ ಮಾಡೋದು ನನಗೆ ಒಪ್ಪಿಗೆ ಇಲ್ಲ.
ಕಪ್ತಾನ್	ನಿಮ್ಮಿಷ್ಟ. ನಾನು ಹೇಳೋದನ್ನ ಹೇಳೀದೀನಿ.. ಇಲ್ಲಿ ಕೇಳಿ, ನೀವು ಹೋಗೋದಾದರೆ ಪೊಲೀಸರ ಕಾವಲಿನಲ್ಲಾದ್ರೂ ಹೋಗಿ.
ಲಾಟನ್	ಹಂ. ಅದು ಹೇಡಿತನ. ನಾವಿಬ್ಬರೂ ವಕೀಲರು. ನಮಗೂ ಪೊಲೀಸರ ರಕ್ಷಣೆ ಬೇಕೆ?
ಕಪ್ತಾನ್	ನಿಮಗಲ್ಲ ಮಿ.ಲಾಟನ್, ಇವರಿಗೆ, ಈ ಗಾಂಧಿಗೆ..
ಗಾಂಧಿ	ಬೇಡ, ನನ್ನ ರಕ್ಷಣೆಗೆ ಸತ್ಯ ಅದ. ನೀವು ನಮ್ಮ ಚಿಂತೆ ಮಾಡಬ್ಯಾಡ್ರಿ. ಆದ್ರೂ ನಿಮ್ಮ ಕಾಳಜಿ, ನಿಮ್ಮ ಸಲಹೆಗೆ ಧನ್ಯವಾದ. ನಮಗೆ ಅಪ್ಪಣೆ ಕೊಡ್ರಿ..
ಕಪ್ತಾನ್	ಆಯ್ತು, ಏಸು ನಿಮ್ಮನ್ನ ಕಾಪಾಡ್ಲಿ. ಹೋಗಿ ಬನ್ನಿ. (ಗಾಂಧಿ, ಲಾಟನ್ ಹೊರಡುವರು (ಸಂಗೀತ...)

ದೃಶ್ಯ - 3

(ಡರ್ಬನ್ನಿನ ರಸ್ತೆ. ಆಗಾಗ ಕುದುರೆ ಗಾಡಿಗಳು
ರಿಕ್ಷಾಗಳು ಹಾದು ಹೋಗುವ ಸದ್ದು)

ಲಾಟನ್ ಮಿ. ಗಾಂಧಿ,

ಗಾಂಧಿ ಯೆಸ್ ಮಿ. ಲಾಟನ್?

ಲಾಟನ್ ನೀವು ಸ್ವಲ್ಪ ಇರಿ. ನಾನು ಮೊದಲು ಹೊರಗೆ ಹೋಗ್ತೇನೆ. ಅಲ್ಲಿಯ ಸಿಚುವೇಶನ್ ನೋಡಿ ನಿಮ್ಮನ್ನು ಕರೀತೇನೆ, ಆಗ ಬನ್ನಿ.

ಗಾಂಧಿ (ನಕ್ಕು) ನೀವೂ ಪೂರ್ತಿ ನಿರ್ಭೀತರಾಗಿಲ್ಲ ಅನ್ನಿ.

ಲಾಟನ್ ಹಾಗಲ್ಲ, ಹಡಗಿನ ಕಪ್ತಾನರು, ಮಿ. ಎಸ್ಕೋಂಬ್ ಅವರು ಅಷ್ಟೆಲ್ಲ ಎಚ್ಚರಿಕೆ ನೀಡಿದ ಮೇಲೆ ನಾವೂ ಸ್ವಲ್ಪ ಜಾಗರೂಕರಾಗಿರಬೇಕಲ್ಲಾ..? ಹಾಂ..ಈಗ ಬನ್ನಿ ಹೊರಗೆ..

ಗಾಂಧಿ ನಿಮ್ಮ ಪ್ರೀತಿ ಮತ್ತು ಕಾಳಜಿಗೆ ತುಂಬ ಥ್ಯಾಂಕ್ಸ್ .. ನಡೀರಿ.

ಧ್ವನಿ 1 ಓ ಅದು ಗಾಂಧಿ ಅಲ್ಲವೆ?

ಧ್ವನಿ 2 ನೊ ಡೌಟ್, ಅವನೇ– ಆ ಟರ್ಬನ್ ನೋಡಿ

ಧ್ವನಿ 1 ಬನ್ನಿ ಅಟ್ಯಾಕ್ ಮಾಡೋಣ (ಹೋ ಎಂದು ಚೀರುತ್ತ ದಾಳಿ ಮಾಡುವರು)

ಲಾಟನ್ ಯೂ ಬ್ರೂಟ್ಸ್ ಹೋಗಿ, ಹೊರಟ್ಹೋಗಿ ಇಲ್ಲಿಂದ

ಧ್ವನಿ 2 ಇಲ್ಲ, ನಮಗೆ ಗಾಂಧಿ ಬೇಕು. ಆತನ ಪ್ರಾಣ ಬೇಕು..

ಲಾಟನ್ ಇಲ್ಲ, ನೀವು ಕಾನೂನು ಕೈಯೊಳಗೆ ತೊಗೊಳ್ಳೋ ಹಾಗಿಲ್ಲ. ಅವರಿಗೆ ಏನೂ ಮಾಡಬೇಡಿ.

ಧ್ವನಿ 1 — ಬೇಡ ಮಿ.ಲಾಟನ್. ನೀವು ಇದರೊಳಗೆ ಸಿಕ್ಹಾಕೋಬೇಡಿ. ಅವರ್ನ ನಮಗೆ ಒಪ್ಪಿಸಿ ನೀವು ಹೊರಟು ಹೋಗಿ.

ಧ್ವನಿ 2 — ಅವರು ಬಿಡ್ಲಿಲ್ಲ ಅಂದ್ರೆ ನಾವು ಬಿಡಿಸಿಕೊಳ್ಳೋಣ. ಲಾಟನ್ ಅವರ್ನ ಆ ಕಡೆ ಎಳಕೊಂಡು ಹೋಗಿ.

ಲಾಟನ್ — ಏ ಬಿಡ್ರಿ, ಏನಿದೆಲ್ಲ? ಶಿಟ್ ..
(ಧ್ವನಿ ದೂರದೂರಕ್ಕೆ ಸರಿಯುವುದು)

ಧ್ವನಿ 1 — ಏ ಗಾಂಧಿ, ನಮ್ಮ ಬಗ್ಗೆ ನಿಮ್ಮ ಪತ್ರಿಕೆಗಳಲ್ಲಿ ಕೆಟ್ಟದಾಗಿ ಬರೆದಿದ್ದೀಯಾ? ಇಲ್ಲಿಯ ಇಂಡಿಯನ್ಸ್‌ನ ಕಟ್ಟಿಕೊಂಡು ಹೋರಾಟ ಮಾಡ್ತೀಯಾ? ಅದು ನಮ್ಮ ವಿರುದ್ಧ!

ಧ್ವನಿ 3 — ಈತ ಉಳಿದರಲ್ವೆ ಹೋರಾಟ ಮಾಡೋದು! ಕೊಂದ್ಹಾಕಿ ಬಿಡಿ ಈತನ್ನ (ರೋಷದ ಧ್ವನಿ, ಕೈಯಿಂದ, ಕಟ್ಟಿಗೆಯಿಂದ ಹೊಡೆದ ಸದ್ದು, ಓ......ಏ ಹೇರಾಮ್.. ಎಂಬ ನೋವಿನ ಧ್ವನಿ ನರಳಾಟ)

ಲಾಟನ್ — ಏ ಯೂ ಅನ್‌ಸಿವಿಲಾಯಿಜ್ಡ್ ಬ್ರೂಟ್ಸ್! ಬಿಡಿ ಅವರ್ನ.. ರಿಕ್ಷಾ, ರಿಕ್ಷಾ, (ರಿಕ್ಷಾನಿಂತ ಸದ್ದು)ಬನ್ನಿ ಮಿ. ಗಾಂಧಿ, ಹತ್ತಿ ರಿಕ್ಷಾದಲ್ಲಿ..

ಗಾಂಧಿ — ಬೇಡ ಬಿಡಿ ಮಿ.ಲಾಟನ್, ಇವರು ನನ್ನನ್ನ ಕೊಲ್ತಾರಾ,? ನೋಡೋಣ ನಾನು ಸತ್ಯವನ್ನೇ ಹೇಳ್ತೀನಿ.

ಲಾಟನ್ — ಸತ್ಯ ಮಾತಾಡ್ಲಿಕ್ಕೆ ಇಬ್ಬರು ಬೇಕು ಅಂತ ನಿಮಗೆ ಗೊತ್ತಿಲ್ವಾ? ನೋಚಾನ್ಸ್, ನಿಮ್ಮ ಸತ್ಯ ಈ ಮೃಗಗಳಿಗೆ ಅರ್ಥ ಆಗತ್ತಾ ? ನನ್ನ ಮಾತು ಕೇಳಿ, ರಿಕ್ಷಾದಲ್ಲಿ ಹತ್ತಿ..

ಧ್ವನಿ 1 — ಬಿಡಬೇಡಿ ಅವನ್ನ, ಎಳಕೊಂಡು ಬನ್ನಿ ಈ ಕಡೆ (ಮತ್ತೆ ಹೊಡೆತ, ನರಳಾಟ)

ಗಾಂಧಿ — ಹಲೋ ಪ್ಲೀಸ್ ನನ್ನ ಮಾತು ಕೇಳ್ರಿ ಗೆಳೆಯರೆ.

ಧ್ವನಿ 3 — ಇಲ್ಲ, ನಾವೇನೂ ಕೇಳೋದಿಲ್ಲ. ಇವತ್ತು ನಿನ್ನ ಮುಗಿಸಿ ಬಿಡ್ತೇವೆ.

ಲೇಡಿ ಅಲೆಗ್ಸಾಂಡರ್	(ಮಧ್ಯವಯಸ್ಕ ಹೆಂಗಸೊಬ್ಬಳು ಚೀರುತ್ತ ಬರುವುದು) ಏ..ಏ.. ಮನುಷ್ಯರಾ ನೀವು? ಬಿಡಿ ಅವರ್ನ.
ಧ್ವನಿ 1	ನೀವು ಅಡ್ಡ ಬರಬೇಡಿ ಮ್ಯಾಡಮ್, ನಮ್ಮೆಲ್ಲರ ಮಾನ ಕಳೆದ ಈ ಮನುಷ್ಯನನ್ನ ಸುಮ್ಮನೆ ಬಿಡೋದಾ ? ಇವತ್ತು ಇವನನ್ನ ಕೊಂದೇ ಬಿಡ್ತೇವೆ.
ಲೇಡಿ ಅಲೆಗ್ಸಾಂಡರ್	ಹಾಗಿದ್ದರೆ ಮೊದಲು ನನ್ನನ್ನ ಕೊಲ್ಲಿ.. ಯಾರಾದ್ರೂ ಹೋಗಿ ಪೊಲೀಸರ್ನ ಕರಕೊಂಡು ಬನ್ನಿ... ನಾನು ಪೊಲೀಸ್ ಸೂಪರಿಂಟೆಂಡೆಂಟ್ ಅಲೆಗ್ಸಾಂಡರ್‌ರ ಪತ್ನಿ ಅಂತ ಗೊತ್ತಿಲ್ವಾ ನಿಮಗೆ? ಒಳಗೆ ಕಳಿಸ್ಬೇಕಾ ನಿಮ್ಮನ್ನ ? ಹೋಗಿ, ಹೊರಟ್ಹೋಗಿ.. (ಗೊಣಗುತ್ತ ಹೊರಟು ಹೋಗುವರು)
ಗಾಂಧಿ	ಥ್ಯಾಂಕ್ಯೂ ಮಿಸ್ಸೆಸ್ ಅಲೆಗ್ಸಾಂಡರ್, ನೀವು ನನ್ನ ಪ್ರಾಣ ಮಾತ್ರ ಉಳಿಸಲಿಲ್ಲ. ಹೋರಾಟದ ಧ್ವನಿಯನ್ನು ಉಳಿಸಿದಿರಿ. ನಿಮ್ಮ ಉಪಕಾರ ನಾನು ಎಂದೂ ಮರೆಯಲ್ಲ.
ಲೇಡಿ ಅಲೆಗ್ಸಾಂಡರ್	ನನಗ್ಗೊತ್ತು. ಮಿ.ಗಾಂಧಿ. ನಿಮ್ಮ ಹೋರಾಟ ನ್ಯಾಯಸಮ್ಮತವಾಗೇ ಇದೆ. ನಮ್ಮ ತಾತ್ವಿಕ ಬೆಂಬಲ ನಿಮಗಿದೆ. ಬನ್ನಿ. ಪೊಲೀಸ್ ಸ್ಟೇಶನ್ನಿಗೆ ಹೋಗೋಣ. ಸದ್ಯ ನೀವು ಅವರು ಹೇಳಿದ ಹಾಗೆ ಕೇಳೋದೆ ಒಳ್ಳೆಯದು. ನಮ್ಮ ಅಗತ್ಯ ಬಿದ್ದಾಗ ನೆನಪಿಸಿಕೊಳ್ಳಿ... ನಾನು ಮತ್ತೆ ಮಿ. ಅಲೆಗ್ಸಾಂಡರ್ ನಿಮಗೆ ಖಂಡಿತ ಸಹಾಯ ಮಾಡ್ತೇವೆ.
ಗಾಂಧಿ	ಥ್ಯಾಂಕ್ಯೂ ಮ್ಯಾಮ್..
ಲೇಡಿ ಅಲೆಗ್ಸಾಂಡರ್	ಬನ್ನಿ ಹೊರಡೋಣ. ಮಿ. ಗಾಂಧಿ, ತುಂಬ ಪೆಟ್ಟಾಯ್ತಾ ? ಗಾಯ ಆಗಿದೆಯಾ?
ಗಾಂಧಿ	ಗಾಯ ಆಗಿಲ್ಲ ಮ್ಯಾಮ್, ನೋವಾಗಿದೆ.
ಲೇಡಿ ಅಲೆಗ್ಸಾಂಡರ್	ವೆರಿ ಸಾರಿ. ಅವರ ಪರವಾಗಿ ನಾನು ಕ್ಷಮೆ ಕೇಳ್ತೀನೆ. ದಯವಿಟ್ಟು ಕ್ಷಮಿಸಿ ಬಿಡಿ ನಮ್ಮನ್ನ.

ಗಾಂಧಿ ಅಯ್ಯೋ ಬ್ಯಾಡ ಮ್ಯಾಮ್, ಹಾಗೆಲ್ಲ ಮಾತಾಡಬೇಡಿ. ತಾವು, ಮಿ. ಲಾಟನ್, ಮಿ. ಅಲೆಗ್ಸಾಂಡರ್, ಮಿ. ಎಸ್ಕೋಂಬ್ ಇಷ್ಟೆಲ್ಲಾ ಒಳ್ಳೆಯವರಿರೋ ಇದೇ ಸಮುದಾಯದಲ್ಲೇ ಹೊಡೀರಿ, ತುಳೀರಿ, ಕೊಲ್ರಿ ಅನ್ನುವವರೂ ಇರ್ತಾರಲ್ಲ ಅಂತ..

ಲೇಡಿ ಅಲೆಗ್ಸಾಂಡರ್ ಅವರು ಈ ಸಮುದಾಯದ ಭಾಗ ಅಲ್ಲ, ಅವರು ಆಳುವ ಕೂಟದ ಪ್ರತಿನಿಧಿಗಳು, ದುರಂತ ಅಂದರೆ ಈ ಮೈನಾರಿಟೀನೇ ಮೆಜಾರಿಟಿಯ ಮೇಲೆ ದೌರ್ಜನ್ಯ ಎಸಗ್ತಾ ಬಂದಿರೋದು.

ಗಾಂಧಿ ಹಾಗಿದ್ದರೆ ಈ ಮೆಜಾರಿಟಿ ಅವರನ್ನ ಎಜ್ಯುಕೇಟ್ ಮಾಡಬಹುದಲ್ವಾ? ದೌರ್ಜನ್ಯ ತಡೀಬಹುದಲ್ವಾ?

ಲೇಡಿ ಅಲೆಗ್ಸಾಂಡರ್ ಇಲ್ಲಿ ಲೆಕ್ಕಕ್ಕೆ ಬರೋದು ಆಳುವವರ ಮೆಜಾರಿಟಿ ಮತ್ತು ಮೈನಾರಿಟಿ. ಅಲ್ಲಿ ನಮ್ಮಂಥವರ ಧ್ವನಿಗೆ ಬೆಲೆ ಇರಲ್ಲ.. ಮೇಲಾಗಿ. ನಿಮಗೂ ಗೊತ್ತಿದೆಯಲ್ಲ ಗಾಂಧೀಜಿ. ಸಾತ್ವಿಕರು ಸತ್ತ ಹಾಗಿರ್ತಾರೆ ಅಂತ. ಆದ್ರೆ ಒಂದು ಮಾತು ಸತ್ಯ, ಕೊನೆಗೆ ಜಯ ಸಿಗೋದು ಸತ್ಯಕ್ಕೆ ಮಾತ್ರ. ರಿಯಲಿ, ಆಯ್ ಪಿಟಿ ದಿ ಇಂಡಿಯನ್ಸ್ ಹಿಯರ್, ಅವರಿಗೆ ನ್ಯಾಯ ಸಿಗಬೇಕು. ಅದೇ ನನ್ನ ಆಶಯ.

ಗಾಂಧಿ ಥ್ಯಾಂಕ್ಸ್ ಎ ಲಾಟ್ ಮ್ಯಾಡಂ. ಇವತ್ತು ನನಗೆ ಬಿದ್ದ ಏಟಿನ ನೋವಿಗಿಂತ ನಿಮ್ಮ ನೈತಿಕ ಬೆಂಬಲದಿಂದ ಸಂತೋಷ ಆಗಿದೆ.

ಲೇಡಿ ಅಲೆಗ್ಸಾಂಡರ್ ಇದು ನನ್ನ ಕರ್ತವ್ಯ ಮಾತ್ರ ಅಲ್ಲ, ಮನುಷ್ಯರಾದ ಎಲ್ಲರ ಕರ್ತವ್ಯ, ಒಂದು ಮಾತು ನೆನಪಿಡಿ. ಕ್ರೌರ್ಯಕ್ಕಿಂತ ಕರುಣೆ ದೊಡ್ಡದು. ನೀವು ಬ್ಯಾರಿಸ್ಟರ್ ಪಾಸ್ ಮಾಡೀದೀರಿ, ತುಂಬ ಒಳ್ಳೆಯ ಪ್ರ್ಯಾಕ್ಟೀಸ್ ಇದೆ. ಸುಖಿ ಜೀವನ ನಡೆಸಬಹುದಾದ ನೀವು ಕಷ್ಟ ಮೈಮೇಲೆ ಹಾಕಿಕೊಂಡು ದುಃಖಿತರ ಕಣ್ಣೀರು ಒರೆಸ್ತಾ ಇದ್ದೀರಲ್ಲ. ಯು ಆರ್ ರಿಯಲಿ ಗ್ರೇಟ್.

ಗಾಂಧಿ ಭಾರತೀಯರೆಲ್ಲರ ಧ್ವನಿ ಆಗಿದ್ದ ಸ್ವಾಮಿ ವಿವೇಕಾನಂದರು "ಪರರಿಗಾಗಿ ಬದುಕುವವನೇ ಬದುಕಿ ಇರ್‍ತಾನೆ, ಮಿಕ್ಕವರೆಲ್ಲ ಇದ್ದೂ ಸತ್ತ ಹಾಗೆ" ಅಂತ ಹೇಳ್ತಿದ್ರು. ಹಾಗೆ ಬದುಕಬೇಕು ಅನ್ನೋ ಇಚ್ಛೆ ನನ್ನದೂ ಕೂಡ.

ಲೇಡಿ ಅಲೆಗ್ಸಾಂಡರ್ ಅದಕ್ಕೇ ನಿಮಗೆ ಜಯ ಸಿಕ್ಕೇ ಸಿಗುತ್ತೆ ಅಂದದ್ದು. ಕ್ರೂರ್‍ಯೆಲ್ಟಿಗಿಂತ ಸ್ಪಿರಿಚ್ಯುಯಾಲಿಟಿ ತುಂಬ ದೊಡ್ಡದು.. ಹಾಂ..ಪೊಲೀಸ್ ಸ್ಟೇಷನ್ ಹತ್ರ ಬಂತು. ಮಿ. ಗಾಂಧಿ. ನಿಮ್ಮ ಮೇಲೆ ಅಟ್ಯಾಕ್ ಮಾಡಿದ ಈ ಹುಂಬರ ಮೇಲೆ ಕಂಪ್ಲೇಂಟ್ ಕೊಡಿ. ಅವರಲ್ಲಿ ಕೆಲವರ ಗುರ್ತು ನನಗಿದೆ. ನಿಮಗೆ ಗುರ್ತಿದ್ದವರ ಹೆಸರು ನೀವು ಹೇಳಿ. ಅವರ್‍ನ ಜೈಲಿಗೆ ಹಾಕಿಸಿ.

ಗಾಂಧಿ ಇಲ್ಲ ಮ್ಯಾಡಮ್, ನಾನು ಯಾರ ಮೇಲೂ ಕಂಪ್ಲೇಂಟ್ ಕೊಡಲ್ಲ. ಯಾರಿಗೂ ಶಿಕ್ಷೆ ಆಗೂದು ನನಗೆ ಬೇಕಿಲ್ಲ. ಅವರು ಹತ್ತು ಸಾರಿ ನನ್ನ ಮೇಲೆ ದಾಳಿ ಮಾಡಿದ್ರೂ ನಾನ್ ಅವರ ಮೇಲೆ ಕಂಪ್ಲೇಂಟ್ ಕೊಡೋದಿಲ್ಲ.

ಲೇಡಿ ಅಲೆಗ್ಸಾಂಡರ್ ಅದಕ್ಕೇ ನಿಮ್ಮನ್ನು ಗ್ರೇಟ್ ಅಂದದ್ದು. ಆ ಏಸುಕ್ರಿಸ್ತನ ನಂತರ, ನಾನು ಇಂಥ ಗುಣಗಳನ್ನು ಕಂಡದ್ದು ನಿಮ್ಮಲ್ಲೇ ಗಾಂಧೀಜಿ.

ಗಾಂಧಿ ಇಲ್ಲ ಮ್ಯಾಡಮ್, ಭಾರತದಲ್ಲಿ ಸಂತರ ಒಂದು ಪರಂಪರೆಯೇ ಇದೆ. ನಾನು ಅವರ ಅನುಯಾಯಿ ಮಾತ್ರ

ಲೇಡಿ ಅಲೆಗ್ಸಾಂಡರ್ ಮೆ ಗಾಡ್ ಬ್ಲೆಸ್ ಯೂ. ಆದ್ರೆ ನೀವು ಈ ಸಂದರ್ಭದಲ್ಲಿ ಪೊಲೀಸರು ಹೇಳಿದಂತೆ ಕೇಳಿ.. ನಾನು ಬರ್‍ತೀನೆ. ಏಸು ನಿಮಗೆ ಒಳ್ಳೇದು ಮಾಡಲಿ. ನಾನು ಹೋಗಬಹುದಾ?

ಗಾಂಧಿ ಆಯ್ತು ಮ್ಯಾಡಮ್.. ನಮಸ್ಕಾರ, ಬನ್ನಿ

(ನಿರ್ಗಮನ.. ಸಂಗೀತ..)

ದೃಶ್ಯ – 4

(ಜನರ ಗುಜು ಗುಜು ..ಬನ್ನಿ, ಕೂತುಕೊಳ್ಳಿ ಎಂದು ಸ್ವಾಗತಿಸುವ ಮಾತುಗಳು ಕೇಳಿಸುವುದು)

ರಸ್ತುಮ್‌ಜಿ ಶಾಂತಿ–ಶಾಂತಿ, ಗೆಳೆಯರೆ, ದಯವಿಟ್ಟು ಶಾಂತರಾಗಿ,.. ಇಲ್ಲಿ ಈ ದಕ್ಷಿಣ ಆಫ್ರಿಕಾದೊಳಗಿರೊ ಭಾರತೀಯರ ಹಿತ ಕಾಪಾಡ್ಲಿಕ್ಕೆ ಗಾಂಧೀಜಿ ಮತ್ತೆ ನೆಟಾಲಿಂಡಿಯನ್ ಕಾಂಗ್ರೆಸ್ ಮಾಡ್ತಾ ಇರೊ ಕೆಲಸ ಹಾಗೂ ಹೋರಾಟ ಅದ್ಭುತವಾದದ್ದು. ಇದಕ್ಕಾಗಿ ಗಾಂಧೀಜಿ ಅವರನ್ನ ಅಭಿನಂದಿಸಲಿಕ್ಕೆ, ಮತ್ತೆ ಹೋರಾಟದ ಮುಂದಿನ ದಾರಿ ಕಂಡುಕೊಳ್ಳಲಿಕ್ಕೆ. ನಾವೀಗ ನಮ್ಮ ಈ ಮನಿಯೊಳಗ ಸೇರಿದೀವಿ.. ತಾವೆಲ್ಲ ತಮ್ಮ ತಮ್ಮ ಪ್ರಾಮಾಣಿಕ ಅಭಿಪ್ರಾಯ ಹಂಚಿಕೊಳ್ಳಬೇಕು. (ಮತ್ತೆ ಗುಜು ಗುಜು) ಶಾಂತಿ, ಶಾಂತಿ....ಈಗಲ್ಲ, ಗಾಂಧೀಜಿ ಬಂದ ಮ್ಯಾಲೆ ತಿಳಿಸಿ ಅಂದದ್ದು.

ಒಬ್ಬ ಗಾಂಧೀಜಿ ಬಂದರು ನೋಡಿ ರುಸ್ತುಮ್‌ಜಿ.

ರುಸ್ತುಮ್‌ಜಿ ಓ ಹೌದಾ? ಬರ್ರಿ ಗಾಂಧೀಜಿ, ನಾವೆಲ್ಲ ನಿಮಗಾಗಿ ಕಾಯ್ತಾ ಇದ್ದೀವಿ.

ಗಾಂಧಿ ನಾನು ತಡ ಮಾಡಿದ್ನೇನು ಆದಮ್‌ಜಿ?

ಆದಮ್‌ಜಿ ಇಲ್ಲ, ಇಲ್ಲ, ತಾವು ಎಂದೂ ಲೇಟ್ ಮಾಡಿ ಬರೂದಿಲ್ಲ. ಈಗ ಸರಿಯಾಗಿ ನಾಲ್ಕು ಗಂಟೆ. ಇವರೇ ಬೇಗ ಬಂದಿದ್ದಾರೆ. ತಾವು ಬರ್ತೀರಿ ಅಂದರೆ ಇಲ್ಲಿಯ ಭಾರತೀಯರೆಲ್ಲ ಬಂದು ಸೇರಿ ಬಿಡ್ತಾರೆ. ಅಷ್ಟೊಂದು ಪ್ರೀತಿ–ಗೌರವ, ತಮ್ಮ ಮೇಲೆ ಅವರಿಗೆ ಮತ್ತೆ ನಮಗೆ.

ಗಾಂಧಿ ಧನ್ಯವಾದ, ನನ್ನ ಮೇಲಿನ ಪ್ರೀತಿ ಗೌರವಗಳಿಗಿಂತ ಸಮ್ಮ ಸ್ವಾಭಿಮಾನ ಹೆಚ್ಚಿಸಿಕೊಳ್ಳಬೇಕು ನಾವು.

ರುಸ್ತುಮ್‌ಜಿ	ಹೌದು. ಗಾಂಧೀಜಿ ಹೇಳಿದ್ದು ಸತ್ಯ ನಮ್ಮ ಹೋರಾಟ ನಮಗೆ ಜಯ ಸಿಗೋವರೆಗೂ ಮುಂದುವರೀಬೇಕು. ಇದರ ಸ್ವರೂಪದ ಬಗ್ಗೆ ಈಗ ತಾವೆಲ್ಲ ತಮ್ಮ ತಮ್ಮ ಅಭಿಪ್ರಾಯ ತಿಳಿಸಿ.
ಗಾಂಧಿ	ಹೌದು, ನಾನು ಭಾರತಕ್ಕೆ ಹೋದಾಗ ಕಾರ್ಯದರ್ಶಿ ಆಗಿ ತುಂಬ ಉತ್ತಮ ಕೆಲಸ ಮಾಡಿದ ಸೇಠ್ ಆದಮ್‌ಜಿ ಮಿಯಾಖಾನ್‌ರು ಒಂದೆರಡು ಮಾತು ಹೇಳಲಿ.
ಆದಮ್‌ಜಿ	ಶುಕ್ರಿಯಾ ಗಾಂಧೀಜಿ. ಗೆಳೆಯರೆ, ಗಾಂಧೀಜಿ ಅವರ ಕ್ಷಮಾಗುಣ, ಸತ್ಯಶೀಲತೆಯಿಂದ ನಾವು ಇಲ್ಲಿರೋ ಭಾರತೀಯರೆಲ್ಲರ ಗೌರವ ಮೊದಲಿಗಿಂತ ತುಂಬ ಹೆಚ್ಚಾಗಿದೆ. ಇದಕ್ಕೆ ನೆಟಾಲ್ ಅಡ್ವರ್ಟೈಜರ್ ಹಾಗೂ ಇತರ ಪತ್ರಿಕೆಗಳಲ್ಲಿ ಪ್ರಕಟವಾದ ಲೇಖನಗಳು ಸಾಕ್ಷಿ ಆಗಿವೆ. ಆದರೆ ನಮಗಿನ್ನೂ ಸಂಪೂರ್ಣ ನ್ಯಾಯ ಸಿಕ್ಕಿಲ್ಲ. ವರ್ಣಭೇದ, ದಬ್ಬಾಳಿಕೆ ನಿಂತಿಲ್ಲ. ಅದನ್ನೆಲ್ಲ ನಾವು ವಿರೋಧಿಸಬೇಕು. ಗಾಂಧೀಜಿ, ರುಸ್ತುಮ್‌ಜಿ ಭಾಯಿ, ಮನಸುಖಲಾಲ್‌ಜಿ ನಾಜರ್ ಇವರೆಲ್ಲರ ನೇತೃತ್ವದೊಳಗೆ ಈ ನೆಟಾಲಿಂಡಿಯನ್ ಕಾಂಗ್ರೆಸ್ ವ್ಯವಸ್ಥಿತವಾಗಿ ಕೆಲಸ ಮಾಡಬೇಕು. ಅದರ ಸ್ವರೂಪದ ಬಗ್ಗೆ ತಾವೆಲ್ಲ ತಮ್ಮ ತಮ್ಮ ಅಭಿಪ್ರಾಯ ತಿಳಿಸಿ ಸಹಕರಿಸಬೇಕು ಅಂತ ವಿನಂತಿ ಮಾಡ್ತೇನೆ.. ನಮಸ್ಕಾರ.
ರುಸ್ತುಮ್‌ಜಿ	ಹೌದು, ಒಬ್ಬೊಬ್ಬರಾಗಿ ಎದ್ದು ನಿಂತು ತಮ್ಮ ಅಭಿಪ್ರಾಯ ತಿಳಿಸಿ.
ಒಬ್ಬ	ಈ ಬಿಳಿಯರಂದರ ನನ್ನ ಮೈ ಉರೀತದ, ಸಿಟ್ಟುಸಾವ ಬರ್ತದ.
ಗಾಂಧಿ	ಗೆಳೆಯಾ, ಹೋರಾಟ ಮಾಡವ್ರಿಗೆ ಛಲ ಇರಬೇಕು ಸಿಟ್ಟು ಇರಬಾರದು. ಛಲ ಗೆಲ್ಲಿಸಿದರೆ, ಸಿಟ್ಟು ಕೊಲ್ಲಸ್ತದ.
ಒಬ್ಬ	ಮತ್ತ ಅವರೊಳಗ ಸಿಟ್ಟಿಲ್ಲೇನು ಗಾಂಧೀಜಿ....?
ಗಾಂಧಿ	ಅದೇ ಅವರ ಅವಸಾನದ ಮೊದಲನೆ ಹೆಜ್ಜೆ.

ಇನ್ನೊಬ್ಬ ಆದ್ರೆ ಆ ಮೊದಲನೆ ಹೆಜ್ಜೆಯೊಳಗೇ ನಮ್ಮನ್ನೆಲ್ಲ ಕೊಂದು ಬಿಡ್ತಾರಲ್ಲ ಗಾಂಧೀಜಿ?

ಗಾಂಧಿ ಕೊಂದವರು ಉಳಿದಾರೇನು?

ಒಬ್ಬ ಮತ್ತ ಅವರೆಲ್ಲಿ ಸತ್ತಾರ ಗಾಂಧೀಜಿ ? ನೂರಕ್ಕಿಂತ ಹೆಚ್ಚು ವರ್ಷ ಬಾರಾಣೆ ಕೆಂಪು ಮೋತಿಯವರು ಬಾರಾಣೆ ಕಪ್ಪು ಮಂದೀನ ಆಳ್ತಾ ಬಂದಾರಲ್ಲ, ಇದಕ್ಕೇನ ಹೇಳ್ತೀರಿ ?

ಇನ್ನೊಬ್ಬ ಭೇದ ಮಾಡ್ತಾ ಬಂದಾರಲ್ಲ, ಭೇದಕ್ಕಿಂತ ಕೆಟ್ಟ ಸಾವು ಬ್ಯಾರೇ ಅದ ಏನು?

ರುಸ್ತುಮ್‌ಜಿ ಹೌದು, ಇವರನ್ನೂದು ಖರೇ ಅದ ಗಾಂಧೀಜಿ, ಅವರು ಹೇಳದ ಕೇಳದ ಯಾವಾಗಬೇಕು ಆವಾಗ ನಮ್ಮ ಅಡಿಗೀ ಮನೀತನಕ ಬರಬಹುದು, ಆದರೆ ನಾವು ಅವರ ಪಬ್ಲಿಕ್ ಪಾರ್ಕಿನೊಳಗೂ ಕಾಲಿಡಬಾರದು ಅನ್ನೂದು ಭೇದ ಅಲ್ಲೇನು?

ಆದಮ್‌ಜಿ ರುಸ್ತುಮ್‌ಜಿ ಭಾಯಿ ಹೇಳಿದ್ದು ಸರಿ, ನಮ್ಮ ನಶೀಬ ನಾವಲ್ಲ, ಅವರೇ ಬರೀಬೇಕು ಅನ್ನೂದು ಅನ್ಯಾಯ ಅಲ್ಲೇನು?

ಒಬ್ಬ ನಮ್ಮ ಸ್ವಾಭಿಮಾನ ನಾಶ ಮಾಡೋ ಹಕ್ಕನ್ನ ಇವರಿಗೆ ಕೊಟ್ಟವರು ಯಾರು? ಇದಕ್ಕ ಕೊನೆ ಇಲ್ಲೇನು?

ಗಾಂಧಿ ರುಸ್ತುಮ್‌ಜಿ, ಆದಮ್‌ಜಿ, ನಿಮ್ಮ ಈ ಪ್ರಶ್ನೆಗಳೇ ನಮ್ಮ ಹೋರಾಟದ ಹಿಡಿದ ಬೀಜ. ಶೋಷಿತರ ಮನಸ್ಸಿನ ನೆಲ ಹದ ಮಾಡಿ ಈ ಬೀಜ ಬಿತ್ತಬೇಕು. ನಾವು ಸ್ವತಂತ್ರರಾಗಬೇಕು.

ಇನ್ನೊಬ್ಬ ಶಾಂತಿ ಶಾಂತಿ ಅನಕೊಂತ ಹೋದರ ಸ್ವಾತಂತ್ರ್ಯ ಸಿಗೋದಿಲ್ಲ.

ಒಬ್ಬ ನಾವು ಪ್ರತೀಕಾರಕ್ಕ ಮುಂದಾಗಬೇಕು. ಅವರು ನಮ್ಮೊಳಗಿನ ಒಬ್ಬನ್ನ ಕೊಂದರ ನಾವು ಅವರೊಳಗಿನ ಇಬ್ಬರ್‍ನ ಕೊಲ್ಲಬೇಕು.

ಇನ್ನೊಬ್ಬ	ಹೌದು, ನೀವು ಹೂಂ ಅಂದು ನೋಡ್ರೀ ಗಾಂಧೀಜಿ, ನಾಲ್ಕು ದಿವಸದೊಳಗ ಅವರ ಮಾರಣ ಹೋಮ ಮಾಡಿಬಿಡ್ತೀವಿ.
ಗಾಂಧಿ	ನೋ, ನಾನು ಇದಕ್ಕ ಎಂದೂ ಅವಕಾಶ ಮಾಡಿ ಕೊಡೋದಿಲ್ಲ. ಪ್ರತಿರೋಧ ಪ್ರತೀಕಾರದ ರೂಪ ತಾಳಿದರ ಹೋರಾಟ ಸತ್ತು ಹೋಗ್ತದ, ಅನಾಹುತ ಸಂಭವಿಸ್ತದ. ಎಲ್ಲರೂ ಅಳಿದ ಬಳಿಕ ಸ್ವಾತಂತ್ರ್ಯ ಪಡಕೊಂಡು ಯಾರು ಯಾರನ್ನ ಆಳೋದು?
ಒಬ್ಬ	ಉಳಿದವರು ತಮ್ಮನ್ನ ತಾವು ಆಳಿಕೊಳ್ಳೋದು.
ರುಸ್ತುಮ್‌ಜಿ	ಹೌದು ಗಾಂಧೀಜಿ, ಈ ನೀಗ್ರೋಗಳಿಗೂ ಇವರ ಮ್ಯಾಲೆ ಸಿಟ್ಟದ. ಅವರನ್ನ ನಮ್ಮೊಳಗ ತೊಗೊಂಡು ಈ ಬಿಳಿಯರನ್ನ ನಿರ್ನಾಮ ಮಾಡಿ ಬಿಡಬಹುದಲ್ಲ!
ಗಾಂಧಿ	ತಪ್ಪು ರುಸ್ತುಮ್‌ಜಿ, ನಮ್ಮ ಉದ್ದೇಶ, ನಾವು ಸ್ವತಂತ್ರರಾಗಬೇಕು ಅನ್ನೂದೊ? ಅಥವಾ ಅವರ್ನ ನಿರ್ನಾಮ ಮಾಡಬೇಕು ಅನ್ನೂದೋ?
ಮನಸುಖಲಾಲ್	ನಾವು ಸ್ವಾತಂತ್ರರಾಗಬೇಕು ಅನ್ನೂದು.
ಗಾಂಧಿ	ಮತ್ತೆ ಡರ್ಬನ್ ದಾರಿ ಹಿಡದು ಪ್ರಯಾಣ ಮಾಡಿ ಜೋಹಾನ್ಸ್‌ಬರ್ಗ್ ತಲುಪೋದು ಸಾಧ್ಯ ಆದ ಏನು ಮನಸುಖಲಾಲ್‌ಜಿ ?
ರುಸ್ತುಮ್‌ಜಿ	ಅದಕ್ಕ ಈಗೇನು ಮಾಡೋಣ ಅಂತೀರೀ ಗಾಂಧೀಜಿ?
ಗಾಂಧಿ	ನಾವು ಸುಸಂಘಟಿತರಾಗಿ ಹೋರಾಟ ಮುಂದುವರಿಸೋಣು. ನಮಗ ಸ್ವಾತಂತ್ರ್ಯ ಬೇಕು ಅಂತ ಕೂಗಿ ಕೂಗಿ ಹೇಳೋಣು.
ಇನ್ನೊಬ್ಬ	ಅಧಿಕಾರಸ್ತರ ಗೊಡ್ಡು ಕಿವೀಗೆ ನಮ್ಮ ದನಿ ಕೇಳಸ್ತದೇನು?
ಗಾಂಧಿ	ಕೇಳಿಸದಿದ್ದರ ಇನ್ನೂ ಎತ್ತರದ ದನಿಯೊಳಗ ಹೇಳೋಣು.
ಒಬ್ಬ	ಆಗೂ ಕೇಳದಿದ್ದರ?
ಗಾಂಧಿ	ಮತ್ತಷ್ಟು ಧ್ವನಿ ಎತ್ತರಿಸೋಣ.

ಮನಸುಖಲಾಲ್	ಆಗೂ ಕೇಳಿಸೀತು ಅಂತ ನನಗ ಅನ್ನಸೋದಿಲ್ಲ ಗಾಂಧೀಜಿ. ಯಾಕಂದರ ಕರುಣೆಯ ಕ್ಷೀಣ ಧ್ವನಿ ಕ್ರೌರ್ಯಕ್ಕೆ ಕೇಳಿಸಿದ ಉದಾಹರಣೆ ಇತಿಹಾಸದೊಳಗೂ ಸಿಕ್ಕಿಲ್ಲ, ಪುರಾಣದೊಳಗೂ ಕೇಳಿಸಿಲ್ಲ.
ಗಾಂಧಿ	ಯಾಕಿಲ್ಲ ? ಕೃಷ್ಣನ ಕರುಣೆ ಕೌರವನ ಕ್ರೋಧ ಮತ್ತ ಕ್ರೌರ್ಯದ ಮ್ಯಾಲೆ ಜಯ ಸಾಧಿಸಲಿಲ್ಲೇನು?
ರುಸ್ತುಮ್‌ಜಿ	ಅದು ಕಾವ್ಯಸತ್ಯ ಗಾಂಧೀಜಿ. ವಾಸ್ತವಸತ್ಯ ಅಲ್ಲ.
ಮನಸುಖಲಾಲ್	ಹೌದು, ಶಾಂತಿಯಿಂದ ನಾವು ಸಾವಿರ ವರ್ಷ ಕೇಳಿಕೊಂತ ಹೋದರೂ ಅವರು ನಮಗ ಸ್ವಾತಂತ್ರ್ಯ ಕೊಡಂಗಿಲ್ಲ.
ಒಬ್ಬ	ಈಗ ನಮ್ಮ ಮುಂದಿರೋ ಮಾರ್ಗ ಯುದ್ಧ ಒಂದೇ..
ಗಾಂಧಿ	ಯುದ್ಧ ಎಂಬೋದು "ನಂಜಿನ ಹೈನ ಗೆದ್ದು ಕಟ್ಟುವರು ಸಾವಿನ ಸದನ" ಅಂತ ಜ್ಞಾನಿಗಳು ಹೇಳಿದ್ದು ನಿಮಗ ಗೊತ್ತಿಲ್ಲೇನು ? ಸೂತಕದ ಮನಿಯೊಳಗ ಸಮಾಧಾನದಿಂದ್ ಇರೋದು ಹ್ಯಾಂಗ್ ಸಾಧ್ಯ ಆದೀತು ಅಣ್ಣಂದಿರಾ?
ಇನ್ನೊಬ್ಬ	ಅಂದ್ರೇನು, ಅವರು ಹೊಡೆದರ ಹೊಡಿಸಿಕೊಂಡು, ತುಳದರ ತುಳಿಸಿಕೊಂಡು
ಒಬ್ಬ	ಕೊಂದ್ರ ಸತ್ತು ಹೋಗಿ ಬಿಡೋಣು ಅನ್ನೋದು ನಿಮ್ಮ ಅಂಬೋಣೇನು ಗಾಂಧೀಜಿ?
ಗಾಂಧಿ	ಹೌದು, ನಾವು ತಾಳಿಕೊಳ್ಳೋ ಒಂದು ಪೆಟ್ಟು ಅವರಿಗೆ ಎರಡಾಗ್ತದ ಬದುಕು ಬರಡನಸ್ತದ, ಅವರ ಕ್ರೌರ್ಯ ಅವರಿಗೇ ಕೀಸರಾಗ್ತದ. ಒಂದು ದಿನಾ ನಮ್ಮಷ್ಟಕ್ಕ ನಮ್ಮನ್ನು ಬಿಟ್ಟು ಎದ್ದು ಹೋಗಿ ಬಿಡಬೇಕು ಅನಸ್ತದ. ಹೌದು ಗೆಳೆಯರೆ, ಶಾಂತೀಗೆ ಇಂಥ ದೊಡ್ಡ ಶಕ್ತಿ ಅದ ಅಂತ ನನಗ ಅನಸ್ತದ.. ನನಗ ತಮ್ಮ ಸಿಟ್ಟು ಆಕ್ರೋಶಕ್ಕಿಂತ ಶಾಂತಿ, ಸಹಕಾರಬೇಕು. ಪ್ಲೀಜ್.. ಅದನ್ನ ಕೊಡಿ ಅಂತ..

ರುಸ್ತುಮ್‌ಜಿ	ಆಯ್ತು ಗಾಂಧೀಜಿ, ನಾವೀಗಾಗಲೇ ತಮ್ಮನ್ನ ನಮ್ಮ ನಾಯಕರು ಅಂತ ಒಪ್ಪಿಕೊಂಡದ್ದಾಗೇದ. ತಮ್ಮ ಹೆಜ್ಜೆಯೊಳಗ ಹೆಜ್ಜೆ ಇಟ್ಟು ನಡಿಯಾಕ ನಾವು ತಯಾರದೀವಿ.
ಧ್ವನಿಗಳು	ಹೌದು, ಹೌದು.. ಗಾಂಧೀಜಿ ನಮ್ಮ ನಾಯಕರು.. ಮೋಹನದಾಸ್ ಗಾಂಧೀಜೀ ಕಿ..ಜೈ.. (ಜೈಕಾರದೊಂದಿಗೆ ಧ್ವನಿ ಕರಗುವುದು)

ದೃಶ್ಯ – 5

(ಗಾಂಧೀಜಿ ಅವರ ಮನೆ.. ಮುಂಜಾನೆ..)

ಗಾಂಧಿ ವೈಷ್ಣವ ಜನತೋ ತೇನೆ ಕಹಿಯೆ
ಜೋ ಪೀಡ ಪರಾಯಿ ಜಾಣೇ ರೇ
ಪರ ದುಃಖ್ಖೇ ಉಪಕಾರ ಕರೇತೋ ಏ
ಮನ ಅಭಿಮಾನ ನ ಆಣೇರೆ
ಸಕಲ ಲೋಕಮಾ ಸಹುನೇ ವಂದೇ
ನಿಂದ ನ ಕರೆ ಕೇ ನೀರೆ
ವಾಚ ಕಾಥ ಮನ ನಿಶ್ಚಲ ರಾಖೇ
ಧನ ಧನ ಜನನೀ ತೇನೀ ರೇ
ಸಮದೃಷ್ಟಿ ನೇ ತೃಷ್ಣಾ ತ್ಯಾಗಿ
ಪರಸ್ತ್ರೀ ಜೇನೇ ಮಾತರೇ
ಜಿಹ್ವಾ ಥಕೀ ಅಸತ್ಯ ನ ಬೋಲೇ
ಪರಧನ ನವ ಝಾಲೆ ಹಾಥರೇ
ಮೋಹ ಮಾಯಾ ವ್ಯಾಪೇ ನಹೀ ಜೇನೇ
ದೃಢ ವೈರಾಗ್ಯ ಜೇನಾ ಮನಮಾರೇ
ರಾಮನಾಮ ಶುಂತಾಲೀರೇ ಲಾಗಿ
ಸಕಲ ತೀರಥ್ ತೇನಾ ತನಮಾರೇ
ವಣ ಲೋಭೀನೇ ಕಪಟರಹಿತ ಛೇ
ಕಾಮ ಕ್ರೋಧ ನವಾರ್ಯಾ ರೇ
ಭಣೆ ನರಸಯ್ಯೋ ತೇನು ದರಸನ ಕರತಾಂ
ಕುಲ ಏಕೋ ತೇರಾ ತಾರ್ಯಾರೇ

(ಪ್ರಾರ್ಥನೆ ಮುಗಿಯುತ್ತಿರುವಂತೆ ಕರೆಗಂಟೆಯ ಸದ್ದು)

ಕಸ್ತೂರಬಾ (ಒಳಗಿನಿಂದಲೇ) ಯಾರು? ಬಂದೆ ನಿಲ್ರಿ (ಹೊರಗೆ ಬಂದು ಬಾಗಿಲು ತೆರೆದು) ಓ ರುಸ್ತುಮ್‌ಜಿ, ಮನಸುಖಲಾಲ್‌ಜೀ? ಬರ್‍ರಿ.. ಬರ್‍ರಿ.. ಇವರು ಒಳಗಡೆ ಪ್ರಾರ್ಥನಾ ಮಾಡ್ಲಿಕ್ಕ ಹತ್ಯಾರ, ಕೂತುಕೊಳ್ರಿ

ಗಾಂಧಿ	(ಒಳಕೋಣೆಯಿಂದ ತುಸು ಎತ್ತರದ ದನಿಯಲ್ಲಿ) ಬಾ, ಅವರ್ನ ಇಲ್ಲಿಗೆ, ನನ್ನ ಕೋಣೆಗೇ ಕಳಿಸು.
ಕಸ್ತೂರಬಾ	ಇವರು ಕರೀತಾರ, ಒಳಗೆ ಹೋಗ್ರಿ..ನಾನು ಚಹಾ ತರ್ತೀನಿ.
ಗಾಂಧಿ	ಬಾ, ನಾನು ಹೇಳೋತನಕ ನೀನೇನೂ ತರೋದು ಬ್ಯಾಡ.. ಬರ್ರಿ, ನಾನು ನಿಮ್ಮ ದಾರೀನೇ ಕಾಯ್ತಿದ್ದೆ..ಹೂಂ ಹೇಳ್ರಿ. ಮನಸುಖಲಾಲ್‌ಜಿ, ನಾನು ಹೇಳಿದ ವಿಷಯಾ ಏನ್ ಮಾಡಿದ್ರಿ?
ಮನಸುಖ	ನೀವು ಬಹಳ ವಿಷಯ ಹೇಳೀರಿ, ಅದರಲ್ಲಿ ಯಾವುದು?
ಗಾಂಧಿ	ಅದೇ ನಾವು ಇಂಡಿಯಾಕ್ಕೆ ಹೋಗೋ ವಿಷಯ.
ರುಸ್ತುಮ್‌ಜಿ	ನೀವು ಹೋಗಲೇಬೇಕಾ ಗಾಂಧೀಜಿ?
ಗಾಂಧಿ	ಹೌದು, ನಾನು ಬಂದ ಕೆಲಸ ಮುಗೀತಲ್ಲ. ಕೋರ್ಟಿನಲ್ಲಿ ಕೇಸು ನಿಕಾಲಿ ಆದ ಮೇಲೆ ವಕೀಲರದೇನು ಕೆಲಸಾ?
ಮನಸುಖ	ನಮ್ಮ ಹಕ್ಕಿಗಾಗಿ ಹೋರಾಟ
ಗಾಂಧಿ	ಅದನ್ನ ಮುಂದುವರಿಸಲಿಕ್ಕೆ ನೀವೆಲ್ಲ ಅದೀರೆಲ್ಲ, ನೆಟಾಲಿಂಡಿಯನ್ ಕಾಂಗ್ರೆಸ್ ನೇತೃತ್ವದೊಳಗ ಅದು ಮುಂದುವರೀಲಿ, ನಾನೆಲ್ಲಿದ್ರೂ ನನ್ನ ಬೆಂಬಲ ನಿಮಗಿದ್ದೇ ಇರ್ತದ.
ರುಸ್ತುಮ್‌ಜಿ	ಆದ್ರೂ ನೀವಿದ್ದಾಂಗ ಆಗೂದಿಲ್ಲ ಗಾಂಧೀಜಿ.
ಗಾಂಧಿ	ಯಾರೂ ಅನಿವಾರ್ಯ ಆಗಬಾರದು ರುಸ್ತುಮ್‌ಜಿ, ಮನೆಗೆದ್ದು ಮಾರುಗೆದೆ ಅಂತಾರಲ್ಲ ಹಾಗೆ.. ಅಲ್ಲಿ ಭಾರತದೊಳಗ ಕಿತ್ತು ತಿನ್ನೋ ಬಡತನ ಅದ, ಕರಾಳ ಶಾಸನ ಜಾರಿ ಅದ. ಕ್ರೌರ್ಯ ತೈ ತೈ ಅಂತ ಕುಣ್ಯಾಕ ಹತ್ತೇದ. ಇಂಥದರೊಳಗ ಸ್ವಾತಂತ್ರ್ಯದ ಅರ್ಥಾನ, ಪಾರತಂತ್ರ್ಯದ ಅನಾಹುತಾನ ನಮ್ಮ ಜನಗಳಿಗೆ ಮನಗಾಣಿಸಬೇಕಾಗೇದ. ಅದಕ್ಕ ನಾನು ಭಾರತಕ್ಕ ಹೋಗಲೇಬೇಕು.
ರುಸ್ತುಮ್‌ಜಿ	ಆದರೆ ಇಲ್ಲೀ ಭಾರತೀಯರು, ಅದರೊಳಗ ಈ ನೆಟಾಲಿಂಡಿಯನ್ನರು ನಿಮ್ಮನ್ನ, ನಿಮ್ಮ ಕುಟುಂಬದವರನ್ನ ಎಷ್ಟು ಹಚ್ಚಿಕೊಂಡಾರಂದ್ರ ನೀವು ಹೊರಟು ನಿಂತೀರಿ ಅನ್ನೊ ಸುದ್ದಿ

ಕೇಳಿದಾಗಿನಿಂದ ಬಾಳಷ್ಟು ಮಂದಿ ಊಟಾನೂ ಮಾಡಿಲ್ಲ, ಒಳಗೊಳಗ ಕಣ್ಣೀರು ಹಾಕಾಕ ಹತ್ಯಾರ.

ಗಾಂಧಿ ಹೌದು, ಅದು ನನಗೂ ತಿಳಿದದ. ಮತ್ತ ನನ್ನ ಸ್ಥಿತಿಯೇನು ಬ್ಯಾರೇ ಅದ ಅಂತ ತಿಳಿದೀರೇನು ಲಾಲ್‌ಜಿ? ಅವರ ಕಣ್ಣೀರು ಕಾಣತಾವ, ನನ್ನೂವು ಕಾಣೂದಿಲ್ಲ, ಅಷ್ಟೇ ವ್ಯತ್ಯಾಸ. ಈ ನೆಟಾಲ್‌ವಾಸಿಗಳು ನಮ್ಮನ್ನ ಪ್ರೇಮಾಮೃತದೊಳಗ ಮುಳುಗಿಸಿಬಿಟ್ಟಾರ. ಖರೇ ಪ್ರೀತಿ ಪ್ರಕಟ ಆಗೋದು ಅಗಲೋ ಪ್ರಸಂಗ ಬಂದಾಗ ಅಲ್ಲೇನು? ಮೀರಾಳ ಹಾಡು ಗೊತ್ತಲ್ಲ ನಿಮಗ?

ಮನಸುಖ ಗಾಂಧೀಜಿ, ನಿಮ್ಮ ಹೃದಯದಿಂದ ಆ ಹಾಡು ಇನ್ನೊಮ್ಮೆ ಹೊರಹೊಮ್ಮಲಿ. ಎಷ್ಟು ಸಾರೆ ಕೇಳಿದರೂ ಮತ್ತ ಮತ್ತ ಕೇಳಬೇಕು ಅನಸ್ತದ. ದಯವಿಟ್ಟು ಅದನ್ನ ಹಾಡ್ರಿ

ಗಾಂಧಿ (ನಕ್ಕು) ನಾನು ಹಾಡೋದಾ? ನನಗ ರಾಗವಾಗಿ ಕೆಮ್ಮಲಿಕ್ಕೂ ಬರೂದಿಲ್ಲ (ಮತ್ತೆ ನಗೆ)

ರುಸ್ತುಮ್‌ಜಿ ಭಾವಗೀತೆ, ಭಕ್ತಿಗೀತೆಗಳಲ್ಲಿ ರಾಗಕ್ಕಿಂತ ಭಾವ ಮುಖ್ಯ ಗಾಂಧೀಜಿ. ಅದೆಂಥ ಭಕ್ತಿ, ಅದೇನು ತನ್ಮಯತೆ ಆ ಮೀರಾಳದು, ತಮ್ಮದು!

ಗಾಂಧಿ ಅವಳದು ಅನ್ನಿ, ನನ್ನದೆಂಥಾ ತನ್ಮಯತೆ! ಆದರೂ ತಮ್ಮ ಕೋರಿಕೆ ನನ್ನ ಕರ್ಕಶ ಸ್ವರಕ್ಕಿಂತ ದೊಡ್ಡದು. ಆಗಲಿ, ಕೇಳ್ರಿ

ಕಾಚರೆ ತಾಂತಣೀ ಮನೇ ಹರಜೀ
ಏ ಬಾಂಧಿ. ಜೇಮತಾಣೀ ತೇಮ ತೇಮನೀರೇ
ಮನೇಲಾಗೀ ಕಟಾರೀ ಪ್ರೇಮ್ ನಿ..

ರುಸ್ತುಮ್‌ಜಿ ಆಹಾ! ನೀವು ಹಾಡಿದರ ಆ ಮೀರಾ ಪ್ರತ್ಯಕ್ಷಳಾಗಿ ನಮ್ಮ ಮುಂದ ನಿಂತು ಹಾಡಿದಂಗ ಅನಸ್ತದ.

ಗಾಂಧಿ ಇದರ ಗೌರವ ಸಲ್ಲಬೇಕಾಗಿದ್ದು ನನ್ನ ಕಂಠಕ್ಕ ಅಲ್ಲ, ಮೀರಾಳ ಭಕ್ತಿಗೆ, ಅವಳ ಭಾವಕ್ಕ.. ಭಗವಂತ ನನ್ನನ್ನು ಪ್ರೇಮ ಅಂಬೋ ನೂಲೆಳೆಯೊಳಗೆ ಬಂಧಿಸಿದ್ದಾನ. ನಾನು ಅವರ ದಾಸಿ' ಅನ್ನೋದು ಬ್ರಿಜ್ ಭಾಷೆಯೊಳಗಿನ ಈ ಗೀತೆಯ ಅರ್ಥ.

ನೆಟಾಲಿನ ಭಾರತೀಯರಿಗೂ ನಮಗೂ ಇಂಥಾದ್ದೇ ಸಂಬಂಧ. ಈ ಮೋಹನದಾಸ ನಿಮ್ಮೆಲ್ಲರ ದಾಸ, ಆದರ ಇವನ ಜವಾಬ್ದಾರಿ ಇಷ್ಟೇ ಅಲ್ಲ, ಮನಸುಖಲಾಲ್‌ಜಿ, ನೀವು, ಖಾನ್ ಸಾಹೇಬರು ಇಲ್ಲಿದ್ದಾಗ ನಾನು ಮಾಡತಾ ಇದ್ದಂಥಾ ಕೆಲಸಾನ ಅಷ್ಟೇ ಕಾಳಜಿಯಿಂದ ಮಾಡ್ತೀರಿ ಅನ್ನೋ ಭರವಸೆ ನನಗದ. ನಿಮ್ಮ ಜೊತೆ ರುಸ್ತುಮ್‌ಜಿ ಮತ್ತವರ ಬಳಗ, ಒಂದಷ್ಟು ಹಿರಿಯರು ಎಲ್ಲಾ ಇರತಾರ.

ರುಸ್ತುಮ್‌ಜಿ ಆದರೂ, ನೀವಿದ್ದರ ಇನ್ನೂ ಒಳ್ಳೇದು ಗಾಂಧೀಜಿ.

ಗಾಂಧಿ ಆದರ ಭಾರತದ ಹಳ್ಳಿಗಾಡಿನ ಜನರ ನೋವು, ಅವರ ಅಸಹಾಯಕತೆ, ಆಕ್ರಂದನ ನನ್ನನ್ನ ಇಲ್ಲಿ ನಿಲ್ಲಗೊಡ್ತಾ ಇಲ್ಲ. ನಾನು ಈ ನಡುವೆ ಭಾರತಕ್ಕ ಹೋಗಿ ಬಂದಿರದಿದ್ದರ, ಅದನ್ನೆಲ್ಲ ಕಣ್ಣಾರೆ ನೋಡಿರದಿದ್ದರ ನಿಮ್ಮಾಂಗ ತಣ್ಣಗ, ತುಸು ಬೆಚ್ಚಗ ಇಲ್ಲೇ ಇದ್ದು ಬಿಡತಿದ್ನೋ ಏನೋ! ಈಗ ಅದು ಸಾಧ್ಯ ಇಲ್ಲ. ನಾವು ಹೊರಡೊ ತಯಾರಿ ಮಾಡಿದ್ದೂ ಆಗೇದ. ಇದಕ್ಕ ಇವರ್‍ನೂ ಒಪ್ಪಿಸೊ ಜವಾಬ್ದಾರಿ ನಿಮ್ಮದು ಅಂತ ಹೇಳಿದ್ದೆ.

ಮನಸುಖ ಒಪ್ಪಿಸೋದು ಬಾಳ ಕಷ್ಟ ಆಯ್ತು ಗಾಂಧೀಜಿ. ಒಂದು ಕಂಡೀಷನ್ ಮ್ಯಾಲೆ ಅವರು ನಿಮ್ಮನ್ನ ಕಳಸಾಕ ಒಪ್ಪಿಕೊಂಡಾರ.

ಗಾಂಧಿ ಏನದು..?

ರುಸ್ತುಮ್‌ಜಿ ತಮ್ಮ ಸೇವಾದ ಅಗತ್ಯ ಬಿದ್ದರ ಒಂದು ವರ್ಷದೊಳಗ ತಿರುಗಿ ಆಫ್ರಿಕಾಕ್ಕ ಬರಬೇಕು ಅಂಬೋದು ಅವರ ಕರಾರು.

ಮನಸುಖ ಹಾಂಗಿದ್ರ ಹೋಗಲಿ, ಇಲ್ಲದಿದ್ದರ ನಾವು ಉಪವಾಸ ಸತ್ಯಾಗ್ರಹ ಮಾಡ್ತೀವಿ ಅಂತಾರ.

ಗಾಂಧಿ (ನಕ್ಕು) ಒಹೋ ನಾನು ಕಾಣಿಕೆ ಕೊಟ್ಟ ಬಾಣ ನನ್ನ ಮ್ಯಾಲೇ ಪ್ರಯೋಗಿಸ್ತಾರಂತೇನು? (ಮತ್ತೆ ನಕ್ಕು) ಲಾಲ್‌ಜಿ, ರುಸ್ತುಮ್‌ಜೀ, ನೂರಾ ಐವತ್ತು ವರ್ಷಗಳಿಂದ ಭಾರತೀಯರನ್ನ ಹರದು ಮುಕ್ತಾ ಇದ್ದ ಪಾರತಂತ್ರ್ಯದ ಜಡ್ಡು ಕಳಿಯಾಕ ಒಂದೇ ಒಂದು ವರ್ಷ ಹ್ಯಾಂಗ್ ಸಾಲ್ತದ? ಈ ಅವಧಿಯೊಳಗ ಅಳೋ ಬಡವರ ಕಣ್ಣೀರು ಒರಸೋದೂ ಸಾಧ್ಯ ಇಲ್ಲ. ಪರಿಹಾರದ

ಮಾತು ದೂರ ಉಳೀತು. ಇಲ್ಲೀ ಭಾರತೀಯರ ಸೇವಾ ಮಾಡ್ಲಿಕ್ಕೆ.. ನೀವು ಇದ್ದೇ ಇರ್ತೀರಲ್ಲ. ಇದನ್ನ ಅವರಿಗೆ ತಿಳಿಸಿ ಹೇಳ್ರಿ

ರುಸ್ತುಮ್‌ಜಿ ಇಲ್ಲ ಗಾಂಧೀಜಿ, ಅವರದು ಒಂದು ನೆಪ ಅಷ್ಟೆ. ನಮಗೂ ನಿಮ್ಮನ್ನ ಬಿಟ್ಟುಕೊಡ್ಲಿಕ್ಕೆ ಆಗೂದಿಲ್ಲ. ಗಾಂಧೀಜಿ ಇಲ್ಲದ ನೆಟಾಲಿಂಡಿಯನ್ನರ ಜೀವನದ ರಥ. ಅದರ ಗಾಲೀನೇ ಉರಳೋದಿಲ್ಲ ಅನ್ನೊ ಸ್ಥಿತಿ ನಿರ್ಮಾಣ ಆಗೇದ.

ಮನಸುಖ ನಮ್ಮೆಲ್ಲರ ಮನಸ್ಸಿನೊಳಗೂ ಇದೇ ಇರೋದು. ಅದಕ್ಕ ನೀವು ಒಂದು ವರ್ಷದೊಳಗ ಮತ್ತ ಬಂದು. ಹೋಗಿ... ಹಿಂಗೇ ಬರ್‍ತಾ ಹೋಗ್ತಾ ಇರಬಹುದಲ್ಲ ಗಾಂಧೀಜಿ?

ಗಾಂಧಿ ಬಂದು ಹೋಗುವವರು ಎಂದೂ ಬಂಧುಗಳಾಗೂದಿಲ್ಲ ಲಾಲ್‌ಜಿ. ಒಂದು ಸಾರೆ ಬಂದು ಹೋಗಲಿಕ್ಕೆ ಕನಿಷ್ಟ ಮೂರು ತಿಂಗಳಾದ್ರೂ ಬೇಕು, ಸಾಕಷ್ಟು ಹಣಾನೂ ಬೇಕು.

ರುಸ್ತುಮ್‌ಜಿ ಹಣಾ ನಾವೆಲ್ಲ ಕೂಡಿಸಿ ಕೊಡ್ತೇವೆ ಅಂತಾರೆ ಅವರೆಲ್ಲ.

ಗಾಂಧಿ ಕೂಡಿಸೋದು ಮುಖ್ಯ ಅಲ್ಲ ರುಸ್ತುಮ್‌ಜಿ, ಕೂಡಿಸಿದ ಹಣ ವ್ಯಯಿಸೋ ರೀತಿ ಮುಖ್ಯ. ಸಾರ್ವಜನಿಕರಿಂದ ಕೂಡಿಸಿದ ಒಂದೊಂದು ಪೈಸೆಯು ಕೂಡ ವ್ಯರ್ಥ ಖರ್ಚಾಗಬಾರ್ದು. ನೋಡೋಣ, ನಾನು ಇಂಡಿಯಾಕ್ಕೆ ಹೋದಬಳಿಕ ವಿವರವಾಗಿ ಪತ್ರ ಬರೀತೇನೆ. ಈಗ ಇನ್ನೊಂದು ಮುಖ್ಯ ವಿಷಯ.

ಮನಸುಖ ಮತ್ತೇನು ಗಾಂಧೀಜಿ?

ಗಾಂಧಿ ಈ ಬಾರಿ ಮತ್ತ ಇದಕ್ಕಿಂತ ಮುಂಚೆ ನೀವು ಮತ್ತೆ ನಿಮ್ಮಂಥ ಅಭಿಮಾನಿಗಳು ನಮಗೆ ತುಂಬ ಬೆಲೆಯುಳ್ಳ ಕಾಣಿಕೆಗಳನ್ನ ಕೊಟ್ಟೀರಲ್ಲಾ?

ರೂಸ್ತುಮ್‌ಜಿ ಹೌದು, ತಾವು ತೋರಿದ ಪ್ರೀತಿ, ಅಂತಃಕರಣಕ್ಕ, ತಮ್ಮ ಪರಿಶ್ರಮಕ್ಕ ನಮ್ಮ ಕಾಣಿಕೆ ಏನೇನೂ ಅಲ್ಲ ಬಿಡ್ರಿ

ಮನಸುಖ ಅದರ ಪ್ರಸ್ತಾಪ ಈಗ ಯಾಕೆ ಗಾಂಧೀಜಿ?

ಗಾಂಧಿ ಯಾಕಂದ್ರೆ ನಾನು ಈ ಎಲ್ಲ ಕಾಣಿಕೆಗಳನ್ನ ಮತ್ತ ನಿಮಗೇ ಒಪ್ಪಿಸಿ ಹೋಗೋ ನಿರ್ಧಾರ ಮಾಡೀನಿ.

ಮನಸುಖ (ಆಘಾತಗೊಂಡು) ಗಾಂಧೀಜಿ, ಅವು ತಿರುಗಿ ಕೊಡ್ಲಿ ಅಂತ ಕೊಟ್ಟ ವಸ್ತುಗಳಲ್ಲ. ನಮ್ಮೆಲ್ಲರ ನೆನಪಾಗಿ ನಿಮ್ಮ ಬಳಿ ಇರ್ಲಿ ಅಂತ.

ಗಾಂಧಿ ನೆನಪು ವಸ್ತುವಿನ ರೂಪದೊಳಗ ಇರೂದಿಲ್ಲ, ಇರಬಾರದು ಕೂಡ. ಅದು ಹೃದಯದೊಳಗ ನೆಲೆಗೊಳ್ಳಬೇಕು. ನೀವೆಲ್ಲ ನಮ್ಮಗಳ ಹೃದಯದೊಳಗ ಇದ್ದ ಬಳಿಕ ಈ ಲೋಹ ಯಾಕ? ಲೋಹದ ಮೋಹ ದೇಹವನ್ನ ಬಾಧಿಸ್ತದ, ಮನಸ್ಸನ್ನ ಕೆಡಸ್ತದ. ಅದಕ್ಕ ಅವುಗಳನ್ನೆಲ್ಲ ಇಲ್ಲಿರೊ ಸಮಸ್ತ ಭಾರತೀಯರ ಸೇವೆಗೇ ಉಪಯೋಗಿಸಬೇಕು ಅನ್ನೋ ನಿರ್ಧಾರ ನಂದು.. ರುಸ್ತುಮ್‌ಜಿ, ಇದಕ್ಕಾಗಿ ಒಂದು ಟ್ರಸ್ಟ್ ಮಾಡಿ ಇದರ ಮುಖ್ಯಸ್ಥರಾಗಿ ನಿಮ್ಮನ್ನೇ ನೇಮಿಸ್ತಾ ಇದ್ದೀನಿ. ನೀವು, ಇನ್ನಷ್ಟು ಜನ ಟ್ರಸ್ಟೀಗಳು ಸೇರಿ ಈ ನಿಧೀನ ಬೆಳಸಬೇಕು, ಮತ್ತ ಸತ್ಕಾರ್ಯಕ್ಕ ಬಳಸಬೇಕು.

ರುಸ್ತುಮ್‌ಜಿ ಅಲ್ಲಾ ಗಾಂಧೀಜಿ, ಕೊಡೊ ದಾನಿಗಳು, ಬೇಕಾದಷ್ಟು ಜನ ಅದಾರ. ಅದಕ್ಕಂತ ಮತ್ತ ಕೂಡಿಸೋಣು. ಆದರ ಇವು ಪ್ರೀತಿಯಿಂದ ನಿಮಗ, ಮತ್ತ ನಿಮ್ಮ ಕುಟುಂಬದವರಿಗೆ ಕೊಟ್ಟ ವಸ್ತು ಅದಾವ, ಇವು ನಿಮ್ಮ ಹತ್ತರನ ಇರಲಿ.

ಗಾಂಧಿ ಇಲ್ಲ, ನನ್ನ ನಿರ್ಧಾರ ಅಚಲ. ಇವೆಲ್ಲ ಮೋಹನದಾಸ್ ಗಾಂಧೀಗೆ ಬಂದ ಉಡುಗೊರೆಗಳಲ್ಲ. ನಾವೆಲ್ಲರೂ ಮಾಡಿದ ಸಮಾಜ ಸೇವೆಗೆ ಸಂದವುಗಳು. ಆದ್ದರಿಂದ ಇವನ್ನ ಸ್ವೀಕರಿಸೊ ಹಕ್ಕು ನನಗಿಲ್ಲ. ನೀವು ದಯವಿಟ್ಟು ನನ್ನ ಮಾತು ಒಪ್ಪಿಕೊಂಡು ಎಲ್ಲ ಜನರನ್ನೂ ಒಪ್ಪಿಸಬೇಕು. ಬರ್ರಿ, ಬಾಳ ಹೊತ್ತಾಯ್ತು. ಮುಂದಿನ ಕೆಲಸ ನೋಡೋಣ. ಸಮಾಜಸೇವಕರು ಒಂದೇ ಕಡೆ ಇರಬಾರದಲ್ಲಾ? ಬಾ... (ಹೊರಗೆ ಬರುತ್ತ) ನನ್ನ ಮಾತು ಕೇಳಿಸ್ತೇನು?

ಕಸ್ತೂರಬಾ (ಒಳಗಿನಿಂದಲೇ) ಹಾಂ..ಕೇಳಿಸ್ತು.. (ಹೊರಗೆ ಬಂದು) ಕಷಾಯ ತಂದೀನಿ ತೊಗೊಳ್ರಿ

ಗಾಂಧೀಜಿ ಅರೆ, ನನ್ನ ಮನಸ್ಸಿನೊಳಗ ಇದ್ದದ್ದೂ ಇದೇ. ಇದು ನಿನಗ ಹ್ಯಾಂಗ ಗೊತ್ತಾಯ್ತು?

ಕಸ್ತೂರಬಾ	ನಾನು ನಿಮ್ಮ ಅರ್ಧಾಂಗಿ ಆಗಿ ಇಪ್ಪತ್ತು ವರ್ಷಾಯ್ತಲ್ಲ. ಋಷಿಗಳ ಬಯಕೆ ಋಷಿ ಪತ್ನೀಗೆ ತಿಳೀದಿದ್ದರ ಹ್ಯಾಂಗ?
ಗಾಂಧಿ	(ದೊಡ್ಡನಗೆ ನಕ್ಕು) ಹೀಗೇ ಎಲ್ಲ ತಿಳಕೊಂಡು ಹೋಗತಿದ್ದರ ತಿಕ್ಕಾಟ ಇರೋದೇ ಇಲ್ಲಲ್ಲ ? ಸರಿ ರುಸ್ತುಮ್‌ಜಿ, ಲಾಲ್‌ಜಿ, ನಾನು ಮತ್ತ ನಿಮಗ ಭೆಟ್ಟಿ ಆಗ್ತೀನಿ, ನೀವು ಹೋಗಿ ಬರ್ರಿ ನಮಸ್ಕಾರ..
ಮನಸುಖ	ಆಯ್ತು ಗಾಂಧೀಜಿ, ನಮಸ್ಕಾರ, ನಾವಿನ್ನ ಬರ್ತೀವಿ.
ಗಾಂಧಿ	ಬರ್ರಿ (ಸಂಗೀತ) ಬಾ, ಮಕ್ಕಳೆಲ್ಲಾ ಎಲ್ಲಿ? ಕಾಣಸ್ತಾ..ಇಲ್ಲಲ್ಲ, ಮಣಿಲಾಲ್, ರಾಮದಾಸ್..
ಕಸ್ತೂರಬಾ	ಇದು ಆಡಿಕೊಳ್ಳೋ ಸಮಯ ಆಡಾಕ ಹೋಗಿರ್ತಾರ. ಯಾಕ, ಅವರ ಹತ್ತರೇನು ಕೆಲಸಾ?
ಗಾಂಧೀಜಿ	ಏನಿಲ್ಲ, ಅವರ್ನ ಕರಕೊಂಡು ಹಿಂಗೇ ಒಂದಿಷ್ಟು ತಿರುಗಾಡಿಕೊಂಡು ಬರೋಣ ಅನ್ನಿಸ್ತು..
ಕಸ್ತೂರಬಾ	ಒಹೊ, ಏನಿವತ್ತು ಮಕ್ಕಳ ಮ್ಯಾಲೆ ಇಷ್ಟೊಂದು ಅಕ್ಕರತೆ?
ಗಾಂಧೀಜಿ	ಅವರು ಎಷ್ಟಾದರೂ ನಮ್ಮ ಮಕ್ಕಳಲ್ಲೇನು?
ಕಸ್ತೂರಬಾ	ಇಷ್ಟು ದಿವಸ ಇದ್ದಿರಲಿಲ್ಲೇನು?
ಗಾಂಧಿ	(ತಡಬಡಾಯಿಸುತ್ತ) ಅಲ್ಲ, ವಿಹಾರ ಆರೋಗ್ಯಕ್ಕ ಬಾಳ ಒಳ್ಳೆಯದು. ನಾನು ಅವರ್ನ ಕರಕೊಂಡು ಹೀಗೇ ಒಂದಷ್ಟು ಸುತ್ತಾಡಿಕೊಂಡು ಬರ್ತೀನಿ.. ಬರ್ಲಾ?..

(ನಿರ್ಗಮನ. ಸಂಗೀತ)

ದೃಶ್ಯ - 6

ಗಾಂಧಿ (ತುಸು ಎತ್ತರದ ದನಿಯಲ್ಲಿ) ಬಾ...

ಕಸ್ತೂರಬಾ (ಒಳಗಿನಿಂದಲೇ) ಏನು?

ಗಾಂಧಿ ಸ್ವಲ್ಪ ಹೊರಗ ಬರ್ತೀಯೇನು, ನಿನ್ನ ಕೂಡ ಮಾತಾಡೋವದ.

ಕಸ್ತೂರಬಾ (ಗೊಣಗುತ್ತಲೆ ಹೊರಗೆ ಬಂದು) ಮುಂಜಾನೆ ಕೆಲಸದ ವ್ಯಾಳೆ ಏನಂಥಾ ಮಾತು? ಲಗೂನ ಹೇಳ್ರಿ

ಗಾಂಧಿ ಏ..ಏನಿಲ್ಲ, ಇವತ್ತ ಬಾಳ ಸೆಕೆ ಅನಸೂದಿಲ್ಲಾ?

ಕಸ್ತೂರಬಾ ಸೆಕೆ ಹೊರಗಿಲ್ಲ. ಒಳಗಿರಬೇಕು. ಡಿಸೆಂಬರ್ ತಿಂಗಳ, ಆಫ್ರಿಕಾದೊಳಗ ಹೆಂತಾ ಸೆಕೆ ಇರ್ತದ? ಏನ ಹೇಳಬೇಕಾಗೇದ ಹೇಳಿಬಿಡ್ರಿ ಸಂಕೋಚಬಿಟ್ಟು.

ಗಾಂಧಿ ಏನಿಲ್ಲ, ಈ ನೆಟಾಲಿನ ನಮ್ಮ ಅಭಿಮಾನಿಗಳು ಮತ್ತ ಕಕ್ಷಿದಾರರು ಆಗಾಗ ನಮಗ ಒಂದಷ್ಟು ಕಾಣಿಕೆ ಕೊಟ್ಟಾರಲ್ಲ ಅದರ ಬಗ್ಗೆ..

ಕಸ್ತೂರಬಾ ಅದರ ಬಗ್ಗೆ ಮಾತಾಡೂದೇನದ? ಅವರು ಬಾಳ ಒಳ್ಳೇವರು, ಒಳ್ಳೊಳ್ಳೆ ವಸ್ತುಗಳನ್ನ ಕೊಟ್ಟಾರ.

ಗಾಂಧಿ ಅದೆ, ಅವರು ಕೊಟ್ಟ ವಸ್ತುಗಳನ್ನ ನಾವು ಇಟಗೋಬೇಕಾ ಅಂತ?

ಕಸ್ತೂರಬಾ ನಮಗ ಕೊಟ್ಟಾರ ಅಂದ್ರ ನಾವ ಇಟಗೋಬೇಕಲ್ಲ.

ಗಾಂಧಿ ಈ ಕಾಣಿಕೆ, ಈ ವಸ್ತುಗಳನ್ನ ಯಾಕ ಕೊಟ್ಟಾರ ಹೇಳು ಅವರು?

ಕಸ್ತೂರಬಾ ಅಭಿಮಾನದಿಂದ ಕೊಟ್ಟಾರ, ಪ್ರೀತಿಯಿಂದ ಕೊಟ್ಟಾರ.

ಗಾಂಧಿ ಬಾ, ನನ್ನ ಪ್ರಶ್ನೆ ಅದಲ್ಲ, ಇದನ್ನ ಕೊಡುವಾಗ ಅವರಿಗೆ ಕಂಡದ್ದು, ಅಂದರ ಅವರ ಗಮನದಲ್ಲಿದ್ದದ್ದು ನಾವೋ ಏನ ನಮ್ಮ ಕೆಲಸಾನೋ?

ಕಸ್ತೂರಬಾ	ವಿಚಿತ್ರ ಪ್ರಶ್ನೆ ನಿಮ್ಮದು! ಮದುವಿಗೆ ಹೋದವ್ರಿಗೆ ನಿಮಗ ಮದುಮಗ ಕಂಡ್ನೋ ಏನ್ ಮದುಮಗಳೊ ಅಂತ ಕೇಳಿದರ ಏನು ಉತ್ತರಾ ಕೊಟ್ಟಾರವರು! ನನಗ ನಾವು–ನಮ್ಮ ಕೆಲಸ ಬ್ಯಾರೆ ಬ್ಯಾರೆ ಅಂತ ಅನಿಸಿಲ್ಲ. ಸುತ್ತು ಬಳಸಿ ಯಾಕ ಮಾತು? ನಿಮ್ಮ ಮನಸಿನೊಳಗ ಇದ್ದದ್ದನ್ನ ಸ್ಪಷ್ಟವಾಗಿ ಹೇಳಿಬಿಡ್ರೆಲ.
ಗಾಂಧಿ	ಹೌದು, ಸ್ಪಷ್ಟವಾಗಿ ಹೇಳಿಬಿಡೂದು ಒಳ್ಳೇದು. ಬಾ, ನಾವಲ್ಲ, ನಮ್ಮ ಸಮಾಜ ಸೇವಾನ ನೆನಸಿಕೊಂಡು ಈ ಕಾಣಿಕೆ ಕೊಟ್ಟಾರ ಅವರು. ಅದಕ್ಕ ಅವನ್ನ ನಾವು ಸಮಾಜಕ್ಕ ಹಿಂದಿರುಗಿಸಬೇಕು ಅಂಬೂ ಸಂಕಲ್ಪ ನಂದು.
ಕಸ್ತೂರಬಾ	ನಿಮ್ಮದಿರಬಹುದು. ಆದರ ನಂದಿಲ್ಲ. ಅವರು ಅಷ್ಟೊಂದು ಪ್ರೀತಿಯಿಂದ ಕೊಟ್ಟದ್ದನ್ನ ತಿರಿಗಿ ಕೊಡೋದು ಒಳ್ಳೇದಲ್ಲ. ಅದು ಅವನ್ನ ಕೊಟ್ಟವರಿಗೇ ಅವಮಾನ.
ಗಾಂಧಿ	ಬಾ, ಇಲ್ಲಿ ಕೇಳು ಸೇವೆಯ ಪ್ರತಿಫಲ ಸೇವೆಯೇ ಹೊರತು ಯಾವ ವಸ್ತುನೂ ಅಲ್ಲ. ಸಮಾಜಸೇವಾ ಅಂದ್ರ ಒಂದು ಯಜ್ಞ ಇದ್ದಂಗ. ಇಲ್ಲಿ ಅರ್ಪಣೆಗೆ, ಆಹುತಿಗೆ ಆದ್ಯತೆ ಇರಬೇಕೆ ವಿನಹ ಪ್ರತಿಫಲದ ಅಪೇಕ್ಷೆ ಇರಬಾರದು.
ಕಸ್ತೂರಬಾ	ನಾವೆಲ್ಲಿ ಮಾಡೀವಿ ? ಅವರೇ ತಿಳದು ಪ್ರೀತಿಯಿಂದ ಕೊಟ್ಟಾರ.
ಗಾಂಧಿ	ಹೋಗಲಿ, ಅವನ್ನ ಇಟ್ಟುಕೊಂಡಾದರೂ ಏನ್ ಮಾಡೂದದ? ಬಂಗಾರ, ಬೆಳ್ಳಿ, ವಜ್ರ, ಇವೆಲ್ಲಾ ನನಗ, ನಿನಗ ಬೇಕಾ ಈಗ?
ಕಸ್ತೂರಬಾ	ಮದುವ್ಯಾಗಿ ಮಕ್ಕಳಾದ ಬಳಿಕ ನಾವು, ನಮ್ಮ ಬಯಕೆ ಬೆಂಕ್ಯಾಗ ಬಿದ್ದಿರತಾವ, ನಾ ತೊಗೊಂಡೇನ ಮಾಡ್ಲಿ ಅವನ್ನ? ನಮಗ ಬೇಕಾಗದಿದ್ದರೂ ನಮ್ಮ ಮಕ್ಕಳಿಗೆರ ಬೇಕಲ್ಲ?
ಗಾಂಧಿ	ಅವರ ಬಗ್ಗೆ ನಾವ್ಯಾಕ ತಲಿ ಕೆಡಿಸಿಗೋಬೇಕು? ತಮಗ ಬೇಕಾದದ್ದನ್ನ ಅವರು ಸ್ವಂತ ದುಡಿಮೆಯಿಂದ, ಸ್ವಸಾಮರ್ಥ್ಯದಿಂದ ಪಡಕೊಳ್ಳಿ, ಮ್ಯಾಲಾಗಿ ಅವರೇನರ ನಿನ್ನ ಮುಂದ ನಮಗ ಇಂಥಾ ವಸ್ತು ಬೇಕು ಅಂತ ಅಂದಾರೇನು?
ಕಸ್ತೂರಬಾ	ಮಕ್ಕಳಿಗೆ ಬೇಕಾದ ಎಲ್ಲಾನೂ ಅವರು ಬೇಡಿದಾಗ ಕೊಡಸೋವು ಇರಂಗಿಲ್ಲ. ನಾವಾಗೇ ತಿಳದು ಕೊಡಸುವಂಥಾವೂ ಇರ್ತಾವ.

ಗಾಂಧಿ ಎಲ್ಲಾರ ಮಕ್ಕಳಂಗ ಅದಾರೇನು, ನಮ್ಮ ಮಕ್ಕಳೂನೂ? ಈಗ ನಿನ್ನೆದುರಿಗೇ ಪರೀಕ್ಷಾ ಆಗ್ಲಿ. ಮಕ್ಕಳಾ, ಮಣಿಲಾಲ್, ರಾಮ್‌ದಾಸ್ ಹೇಳ್ರಿ, ನಿಮಗ ಈ ವಸ್ತು ಒಡವೆಗಳೆಲ್ಲಾ ಬೇಕಾ?

ಇಬ್ಬರೂ (ಗಿಳಿಪಾಠ ಒಪ್ಪಿಸುವಂತೆ) ನಮಗೆ ಈ ಕಾಣಿಕೆಗಳು ಬೇಡ, ಸಮಾಜದಿಂದ ಬಂದದ್ದು ಮರಳಿ ಸಮಾಜಕ್ಕೇ ಹೋಗಬೇಕು.

ಗಾಂಧಿ ನೋಡು ಇದು ಮಕ್ಕಳ ನಿರ್ಧಾರ. ಈಗ ಏನ್ ಹೇಳ್ತೀ?

ಕಸ್ತೂರಬಾ ಅವಕ್ಕೇನ ತಿಳೀತದ? ಬಂಗಾರ ಅಂದ್ರೇನು ಅಂತನೂ ತಿಳೀದ ಬಂಗಾರಗಟ್ಟಿ ಅವು. ನಿನ್ನೆ ನೀವು ಅವರ್ನ ಹೊರಗ ಕರಕೊಂಡು ಹೋಗಿ ಬಾಯಿಪಾಠ ಮಾಡಿಸಿಗೊಂಡ್ ಬಂದೀರಿ. ಅವು ಹೇಳ್ತಾವು, ನಿಮ್ಮ ತಾಳಕ್ಕ ತಕ್ಕಂಗ ಅವು ಕುಣೀತಾವು. ಇವರಿಗೆ ಬ್ಯಾಡಾದರ ಬಿಡ್ಲಿ.. ನಾಳೆ ನಮ್ಮ ಸೊಸ್ತೇರಿಗೆರ ಬೇಕಲ್ಲ?

ಗಾಂಧಿ ಅವರಿನ್ನಾ ಸಣ್ಣ ಮಕ್ಕಳು, ಅವರ ಮದುವಿ ಈಗ ಮಾಡೂದಾ? ನೋಡ್ತೀಯಲ್ಲ, ಮದುವಿ ಅಂದ್ರೇನು ಅಂತ ತಿಳಿಯೂಕಿಂತ ಮೊದಲ ಮದುವಿ ಮಾಡಿದರ ಏನಾಗ್ತದ ಅನ್ನೂದಕ್ಕ ಉದಾಹರಣೆ ಆಗಿ ಅದೀವೆಲ್ಲ ನಾನು-ನೀನು!

ಕಸ್ತೂರಬಾ ನಾವಷ್ಟ ಯಾಕ, ಎಲ್ಲಾ ಗಂಡ ಹೆಂಡರಲ್ಲೂ ಇದು ಇದ್ದದ್ದೆ. ಒಡವಿ ಬ್ಯಾಡ ಅನ್ನೊ ಒಡತಿ ಯಾವ ಮನ್ಯಾಗ ಸಿಗ್ತಾಳ? ನೀವು ಸುಳ್ಳ.. ತಲಿ ಕೆಡಿಸಿಗೋಬ್ಯಾಡ್ರಿ, ಈಗ ಮದುವಿ ಮಾಡದಿದ್ದರೂ ನಾಳೆ ಅವರು ವಯಸ್ಸಿಗೆ ಬಂದಾಗಲಾದರೂ ಮಾಡಬೇಕಲ್ಲ. ಒಡವಿ ಇಲ್ದ ಮದುವಿ ಆಗ್ತದೇನು?

ಗಾಂಧಿ ಅದು ಅವರು ವಯಸ್ಸಿಗೆ ಬಂದಾಗಿನ ಮಾತು. ಆಗ ಅವರ ದಾರಿ ಅವರ ಕಂಡುಕೋತಾರ. ಮ್ಯಾಲಾಗಿ ಬೆಳ್ಳಿ, ಬಂಗಾರದ ಮ್ಯಾಲೆ ಆಸೆ ಇರೋ ಸೊಸೆಯಂದಿರನ್ನ ನಾವ್ಯಾಕ ತರಬೇಕು? ಒಂದು ವ್ಯಾಳೇ ಅವರು ಬೇಕು ಅಂದರ ನನ್ನ ಕೇಳು, ನಾನು ತಂದು ಕೊಡ್ತೀನಿ.

ಕಸ್ತೂರಬಾ ಗಾಂಧಿ ಅಂದರ ಒಯ್ದು ಕೊಡೋರು ಅನ್ನೊದು ಜನಜನಿತ ಸತ್ಯ. ತಂದು ಕೊಡೋದು ನಿಮಗೆಲ್ಲಿ ಗೊತ್ತದ? ಇದ್ದದ್ದನ್ನ ಇಟಗೊಳ್ಳಾಕ ಆಗದವರು ಇಲ್ಲದ್ದನ್ನು ತಂದು ಕೊಡ್ತಾರ ಅನ್ನೂದನ್ನ ಯಾರು ನಂಬತಾರ? ನಾನೂ ನಂಬಂಗಿಲ್ಲ.

ನೀವಂತೂ ಇಲ್ಲೀತನಕ ನನಗಂತ ಏನೂ ತಂದು ಕೊಡ್ಲಿಲ್ಲ, ಉಡಿಸಿ, ತೊಡಿಸಿ ಸಂತೋಷ ಪಡ್ಲಿಲ್ಲ. ಈಗ ಬ್ಯಾರೇದವರು ಕೊಟ್ಟದ್ದನ್ನರ ಇರಗೊಟ್ಟರ ಸಾಕು.

ಗಾಂಧಿ ಮುಂದ ನಾನು, ನನ್ನ ಮನಸ್ಸು ಯಾಕ ಬದಲಾಗಬಾರದು?

ಕಸ್ತೂರಬಾ ಸಾಧ್ಯನೆ ಇಲ್ಲ, ಗಂಡನ ದೇಹದ ಕಾಂಕ್ಷೆ, ಮನಸ್ಸಿನ ಬಯಕಿ ತಿಳಕೊಳ್ಳಾರದಾಕಿ ಹೆಂಡ್ತೀನೇ ಅಲ್ಲ. ನಿಮಗ ಸಮಾಜ ಸೇವಾದ ದೆವ್ವ ಬಡದದ. ಅಂತನ ನನ್ನ ತವರವರು ಕೊಟ್ಟ ಒಡವೀನೂ ಮಾರಿ ಸಮಾಜ ಕಾರ್ಯ ಮಾಡೀರಿ. ಈಗ ಮಕ್ಕಳನ್ನೂ ಬೈರಾಗಿಗಳನ್ನ ಮಾಡಾಕ ಹೊಂಟೀರಿ.
ನಾ ಕೊಡಂಗಿಲ್ಲ ಅಂದರ ಕೊಡಂಗಿಲ್ಲ.

ಗಾಂಧಿ ನೋಡು ಕಸ್ತೂರಬಾ, ಕೊಡಂಗಿಲ್ಲ, ಬಿಡಂಗಿಲ್ಲ ಅನ್ನೂದು ಬಾಳ್ವೆ ಅಲ್ಲ. ಒಬ್ಬರ ಮನಸ್ಸನ್ನ ಒಬ್ಬರು ಅರ್ಥ ಮಾಡಿಕೊಂಡು ನಡದರ ಚಂದ. ಈ ಚಂದ ನಿನಗ ಬ್ಯಾಡೇನು? ಸುಮ್ಮನ ಆ ಒಡವೆಗಳನ್ನ ತಂದು ಕೊಟ್ಟಬಿಡು, ಇಲ್ಲದಿದ್ದರ...

ಕಸ್ತೂರಬಾ ಇಲ್ಲದಿದ್ದರ ಏನ್ ಮಾಡ್ತೀರಿ?

ಗಾಂಧಿ ನಾನು ಗಂಡ ಅನ್ನೂ ಅಧಿಕಾರ ಚಲಾಯಿಸಬೇಕಾಗ್ತದ.

ಕಸ್ತೂರಬಾ ಯಾಕ, ನನಗಂತ ಕೊಟ್ಟ ಒಡವೆಗಳು ಅವು. ಆ ಆಭರಣಗಳ ಮ್ಯಾಲೆ ನಿಮ್ದೇನು ಅಧಿಕಾರ?

ಗಾಂಧಿ ಇರ್ತದ, ಇರಬೇಕು. ಸತಿ-ಪತಿ ಕೂಡಿ ಬಾಳಿದರ ದಂಪತಿ. ಬ್ಯಾರೆ ಬ್ಯಾರೆ ಆದರ ಸಂಸಾರದೊಳಗ ಸರಿಗಮ ಇರಂಗಿಲ್ಲ.

ಕಸ್ತೂರಬಾ ನನಗ ಸರಿಗಮ ಬ್ಯಾಡ, ಸರಗಳು ಬೇಕು.

ಗಾಂಧಿ ಬಾ, ಈಗ ಒಂದು ಪ್ರಶ್ನೆ. ಅವರು ನಿನ್ನ ಸಮಾಜಸೇವಾ ಮೆಚ್ಚಿಕೊಂಡು ಕೊಟ್ಟಾರೊ ಏನ್..

ಕಸ್ತೂರಬಾ ನಿಮ್ಮ ಸೇವಾನ ನನ್ನ ಸೇವಾ. ಇಷ್ಟು ದಿವಸ ನಾನು ನೀವು ಹೇಳಿದಂಗ ಕೇಳೀನಿ. ನಿಮ್ಮ ತಾಳಕ್ಕ ಗೆಜ್ಜಿ ಕಟಗೊಂಡು ಕುಣದೀನಿ.

ಗಾಂಧಿ ಅಲ್ಲಾ, ಅಂಥಾದ್ದೇನು ಮಾಡೀದಿ ಅಂತ..?

ಕಸ್ತೂರಬಾ ನಮ್ಮ ತವರಿನೊಳಗ ಯಾರನ್ನ ಮಾತಾಡಿಸಿದರ ಬಾಯಿ ತೊಳಕೊಂತಿದ್ವೊ ಅಂಥವರ ಎಂಜಲಾ ತೊಳದೀನಿ, ಭಂಗಿ

ಬಳದೀನಿ, ನಿಮ್ಮ ಕಡಿಂದ ಬೈಸಿಕೊಂಡೀನಿ, ಬಡಿಸಿಕೊಂಡೀನಿ. (ಗದ್ಗದಳಾಗಿ,] ಒಟ್ಟಿನ ಮ್ಯಾಲ ನಿಮ್ಮ ಕೈಯಾಗ ನಾನು ಸತ್ತ ಸತ್ತು ಉಳದೀನಿ (ಬಿಕ್ಕಳಿಸುತ್ತ). ಕಣ್ಣೀರು-ಕೂಳು ಕೂಡಿಸೇ ನುಂಗೀನಿ. ಈಗ ನೀವು ಏನ ಹೇಳಿದ್ರೂ ನನಗಂತ ಕೊಟ್ಟ ಒಡವೆಗಳನ್ನ ತಂದು ಕೊಡಂಗಿಲ್ಲ ಅಷ್ಟೆ.

ಗಾಂಧಿ (ನಿಷ್ಠುರವಾಗಿ)ಬಾ, ನಾನು ಕೊನೇ ಮಾತು ಹೇಳ್ತೀನಿ ಕೇಳು. ನಿನ್ನ ಒಪ್ಪಿಗಿ ಪಡಿಯೋಕಿಂತ ಮೊದಲ ನಾನು ಅವನ್ನ ಒಂದು ಟ್ರಸ್ಟ್ ಮಾಡಿ ಅದಕ್ಕ ಕೊಡ್ತೀನಿ ಅಂತ ಬರದ್ ಕೊಟ್ಟೀನಿ.

ಕಸ್ತೂರಬಾ ಯಾರನ್ನ ಕೇಳಿ ಬರದ್ ಕೊಟ್ರಿ ನೀವು? ಇಸಗೊಂಡ ನನ್ನನ್ನ? ಏನ್ ಕೊಟ್ಟ ಅವರ್‍ನಾ? ಹೇಂಡ್ತಿ ಅನ್ನೂವಾಕೀಗೆ ಏನೂ ಅಸ್ತಿತ್ವ ಇಲ್ಲೇನು? ನೀವು ಇವನ್ನೆಲ್ಲ ಒಯ್ದು ಬಡದರೂ ಈ ಸಮಾಜ ನಿಮ್ಮನ್ನೇನ ಹಾಡಿ ಹರಸೂದಿಲ್ಲ. ಕಾಡಿಕೊಲ್ತದ.

ಮಣಿಲಾಲ್ (ಆತಂಕದ ಧ್ವನಿಯಲ್ಲಿ) ಮಾ..ಪ್ಲೀಜ್ ಮಾ. ಬಾಪೂಜಿ ಹೇಳೋದನ್ನ ಕೇಳು. ಶಾಂತಿ ಎಲ್ಲಾಕ್ಕಿಂತ ದೊಡ್ಡ ಒಡವಿ ಅಲ್ಲೇನು? ನಮಗ್ಯಾಕವ್ವಾ ಒಡವೆ ಗೊಡವಿ?

ರಾಮದಾಸ ನಿನ್ನೆ ಹೊರಗ ಹೋದಾಗ ಅವರು ನಮಗ ಎಲ್ಲಾ ತಿಳಿಸಿ ಹೇಳ್ಯಾರ.

ಮಣಿಲಾಲ ಸಾರ್ವಜನಿಕ ಸೇವಕ ಬೆಲೆ ಬಾಳುವಂಥ ಬಹುಮಾನ, ಕಾಣಿಕೆ ತೊಗೋಬಾರದಂತ. ಹಾಂಗ ಯಾರಾದರೂ ಕೊಟ್ಟರೂ ಅವನ್ನ ಸಾರ್ವಜನಿಕ ಕೆಲಸಕ್ಕ ಬಳಸಬೇಕು ಅಂತ..

ಕಸ್ತೂರಬಾ ಸಾಕ ಸಾಕು. ಇಷ್ಟು ದಿವಸ ಇವರು ಬುದ್ಧಿ ಹೇಳಿದ್ರು, ಇನ್ನ ಮ್ಯಾಲೆ ನೀವು ಹೇಳ್ರಿ. ಬಾ ಅಂದ್ರ ಬುದ್ಧೀ ಹೇಳಿಸಿಗೊಳ್ಳಾಕ್ಯ ಬಂದಾಕೆಲ್ಲ. ನೀವು ಗಂಡಸರು, ನಿಮಗ ಈ ಸೂಕ್ಷ್ಮ ಎಲ್ಲಾ ತಿಳೆಂಗಿಲ್ಲ. ನಾವು ಹೆಂಗಸರು ಸರೀಕದವರ ಮುಂದ ಸಣ್ಣವರಾಗ್‌ಬಾರದು ಅನ್ನೂ ಆಸೆ ಎಲ್ಲಾ ಹೆಂಗಸರಿಗೂ ಇರ್ತದ. ಗಂಡಾದಾಂವಗೆ ಹೆಂಡ್ತಿ ಆಗೂದೂ ಗೊತ್ತಿರಬೇಕು.

ಗಾಂಧಿ ಬಾ ಇಲ್ಲಿ ಕೇಳು. ಇಷ್ಟು ಉದ್ವೇಗ ಆರೋಗ್ಯಕ್ಕ ಒಳ್ಳೇದಲ್ಲ. ಸ್ವಲ್ಪ ಸಮಾಧಾನ ಮಾಡಿಕೊಂಡು ನಿಧಾನವಾಗಿ ಆಲೋಚನೆ ಮಾಡು. ಸಾರ್ವಜನಿಕ ಸೇವಾ ಮಾಡವರ ಜೀವನ ದುರಾಸೆಯಿಂದ ದೂರ ಇದ್ದು ಸರಳವಾಗಿರಬೇಕು ಅನ್ನೂ ಸತ್ಯ..

ಕಸ್ತೂರಬಾ ಸತ್ಯ ಅಲ್ಲ; ಅದು ಅರ್ಧಸತ್ಯ. ಪ್ರೀತಿಯಿಂದ ಕೊಟ್ಟದ್ದನ್ನ ತೊಗೊಂಡ್ರ ದುರಾಸೆ ಹ್ಯಾಂಗಾಗ್ತದ?

ಗಾಂಧಿ ನಿನ್ನದು ದುರಾಸೆ ಇರಲಿಕ್ಕಿಲ್ಲ. ಆದರ ಜನರ ನೆನಪು ತುಂಬ ಕ್ಷಣಿಕವಾದದ್ದು. ಅವರು ಮುಂದೊಂದು ದಿನ ನಮ್ಮ ನಿಸ್ವಾರ್ಥ ಸೇವಾ ಮರತು ನಮ್ಮ ಕಡೆ, ನಮ್ಮ ಒಡವೆ, ನಮ್ಮ ಆಸ್ತಿ ಇವೆಲ್ಲದರ ಕಡೆ ಬಟ್ಟು ಮಾಡಿ ತೋರಸಬಾರದಲ್ಲ? ಅದಕ್ಕ ಹೇಳಿದ್ನಿ.. ನಿನ್ನ ಮನಸ್ಸಿಗೆ ನೋವಾಗಿದ್ದರ..

ಕಸ್ತೂರಬಾ ಹೆಣ್ಣು-ಬೆಣ್ಣೆ ಎರಡೂ ಒಂದ... ಚೂರು ಬಿಸಿ ತಾಗಿದರೂ ಕರಗತದ (ಗದ್ಗದಳಾಗಿ) ಆಯ್ತು. ನಿಮಗ ತಿಳದಂಗ ಮಾಡ್ರಿ. ನಾ ತಂದು ಕೊಡದಿದ್ದರೂ ನೀವು ಒಯ್ದು ಕೊಡತೀರಿ ಅನ್ನೂದೇ ಖರೆ ಸತ್ಯ. ಇದನ್ನ ತಿಳದೂ ತಿಳದು ನಿಮ್ಮ ಕೂಡ ವಾದ ಮಾಡಿದೆ. ತಿಳಿಸಿ ಹೇಳೂ ಪ್ರಯತ್ನ ಮಾಡ್ದೆ. ಅದು ಈ ಜನ್ಮದಾಗ ಸಾಧ್ಯ ಇಲ್ಲ (ನಿಟ್ಟುಸಿರು) ಆಯ್ತು ತಂದು ಕೊಡ್ತೀನಿ. (ಸಂಗೀತ..) ಮಕ್ಕಳಾ, ಬಾಪೂಜಿಗೆ ಹೇಳ್ರಿ ಅವುಗಳ ಮ್ಯಾಲೆ ನಮ್ಮ ಹಕ್ಕು ಏನೂ ಇಲ್ಲ ಅಂತ...

ಗಾಂಧಿ ತುಂಬಾ ಥ್ಯಾಂಕ್ಸ್ ಬಾ.. ಒಳಗ ಹೋಗಬ್ಯಾಡ.
ಪ್ರಾರ್ಥನೆ ಮಾಡೋಣು ಬಾ.. ಬಾ.. (ನಿಟ್ಟುಸಿರು)
ಬೇಟೆ ಗಾವೊ ಮೇರೆ ಸಾಥ್

ರಘುಪತಿ ರಾಘವ ರಾಜಾರಾಮ್
ಪತಿತ ಪಾವನ ಸೀತಾರಾಮ್
ಈಶ್ವರ ಅಲ್ಲಾ ತೇರೇ ನಾಮ್
ಸಬ್ ಕೋ ಸನ್ಮತಿ ದೇ ಭಗವಾನ್

(ಪುರುಷ ಧ್ವನಿಯೊಂದಿಗೆ ಸ್ತ್ರೀ ಧ್ವನಿಯೂ ಸೇರಿಕೊಂಡಾಗ..
ಗಾಂಧಿ ಆಶ್ಚರ್ಯಚಕಿತರಾಗಿ) ಬಾ.. ನೀನೂ ಬಂದೆಯಾ?
ಓ ಥ್ಯಾಂಕ್ಯೂ [ಬಾ..ಥ್ಯಾಂಕ್ಯೂ (____)
(ಡಪ್ಪಿನ ಸದ್ದು..ಲಾವಣಿ ಚರಣ ಕೇಳಿಬರುತ್ತದೆ)
ಗಾಂಧಿ ಅಜ್ಜ ನಮ್ಮ ಅಜ್ಜ ಹೆಂತಾ ಸರದಾರ
ಯುಗಕೊಮ್ಮೆ ಹುಟ್ಟಿ ಬರ್ತಾರಿಂತ ಮಾತ್ಮರಾ..

[ಸಂಗೀತ, ಮೆಲ್ಲಗೆ ಕತ್ತಲಾಗುವುದು]

ದೃಶ್ಯ – 7

[ಗಾಂಧೀಜಿಯ ಮನೆಯ ಒಳಕೋಣೆ ಒಂದು ಕಡೆಯಲ್ಲಿ ಮಕ್ಕಳಿಬ್ಬರು ಮಲಗಿಕೊಂಡಿದ್ದಾರೆ– ಇನ್ನೊಂದು ಕಡೆ ಕಸ್ತೂರಬಾ ನಿದ್ರಿಸುತ್ತಿದ್ದಾರೆ. ತಡರಾತ್ರಿ ಸಮಯ. ಗಾಂಧಿ ಬಾಗಿಲಲ್ಲಿ ನಿಂತು ಮಕ್ಕಳನ್ನೊಮ್ಮೆ, ಕಸ್ತೂರಬಾರ ನ್ನೊಮ್ಮೆ ನೋಡಿ ಮೆಲ್ಲಗೆ ನಡೆದು ಅವರ ತಲೆ ದಿಂಬಿನ ಪಕ್ಕ ಕುಳಿತುಕೊಂಡು ತಲೆ ನೇವರಿಸುವರು]

ಕಸ್ತೂರಬಾ [ಬೆಚ್ಚಿ ಎದ್ದು ಕುಳಿತು ಪ್ರಶ್ನಾರ್ಥಕವಾಗಿ ಅವರನ್ನು ನೋಡುತ್ತಾರೆ]

ಗಾಂಧಿ [ಪಿಸುಧ್ವನಿಯಲ್ಲಿ] ಬಾ,, ನನ್ನ ಕ್ಷಮಿಸಿಬಿಡು.......

ಕಸ್ತೂರಬಾ [ಮೆಲ್ಲಗಿನ ದನಿಯಲ್ಲಿ] ಇರ್ಲಿ, ರಾತ್ರಿ ಬಾಳಾಗೇದ ಮಲಕೊ ಹೋಗ್ರಿ

ಗಾಂಧಿ ಇಲ್ಲ, ನಿನ್ನ ಕೂಡ ಸ್ವಲ್ಪ ಮಾತಾಡಬೇಕಾಗಿತ್ತು, ಹೊರಗ ಬರತಿಯೇನು?

ಕಸ್ತೂರಬಾ ಬೆಳಿಗ್ಗೆ ಮಾತಾಡಿದ್ದರ ಆಗಂಗಿಲ್ಲೇನು? ಅಷ್ಟು ತುರ್ತು ಅದ ಏನು.. ವಿಷಯ ?

ಗಾಂಧಿ ಹೌದು ! ಎದ್ದು ಹೊರಗಡೆ ಬಾ. [ಎದ್ದು ಹೊರಗಡೆ ಹೋಗುವರು ಕಸ್ತೂರಬಾ ನಿಟ್ಟುಸಿರು ಬಿಟ್ಟು ಅವರನ್ನು ಹಿಂಬಾಲಿಸುವರು] ....ಬಾ ಕೂಡ್ರು..ಬಾ ನನ್ನ ನಡವಳಿಕೆಯಿಂದ ನಿನಗ ನೋವಾಗಿದ್ರ ನನ್ನ ಕ್ಷಮಿಸಿಬಿಡು.

ಕಸ್ತೂರಬಾ ನನ್ನ ಗಂಡನಕೂಡ ನನ್ನದು ಕಾಳಗ ಅಲ್ಲ.. ಅಭಿಪ್ರಾಯಭೇದ ಅಷ್ಟೆ....ನಾ ಅದನ್ನ ಆಗಲೇ ಮರತುಬಿಟ್ಟೆ. ಏನೊ ಮಾತಾಡೋದು ಅದ ಅಂತ ಕರದ್ರೆಲ್ಲ, ಇಷ್ಟೇನಾ, ಇನ್ನೇನಾದ್ರೂ ಹೇಳೋದು ಅದನಾ...?

ಗಾಂಧಿ ಐತಿ, ಆದರ ಈ ವಿಷಯ ಮೊದಲ ನಿಷ್ಕರ್ಷೆಯಾಗಲಿ. ನೀನು ನನ್ನ ಕ್ಷಮಿಸೀನಿ ಅಂದ್ರ ನಾನು ಮುಂದ ಮಾತಾಡತೀನಿ

ಕಸ್ತೂರಬಾ ಗಂಡ ಹೆಂಡ್ರು ಅಂದ್ರ ಹಿಂತಾ ತಪ್ಪು ನಡಿತಾ ಇರತಾವ, ಎಲ್ಲಾನೂ ಕ್ಷಮಿಸಗೊಂತ ಹೋಗಬೇಕಾದ್ರ ಅದಕ್ಕೊಂದು ಕ್ಷಮಾದಾನದ ಬ್ಯಾಂಕೇ ಸ್ಥಾಪನೆ ಮಾಡಬೇಕಾಗತದ, ನಿಮಗ ಅನ್ನಿಸಿದಂಗ ಆಮ್ಯಾಲೆ ನನಗೂ ಒಡೆಯನಿಗಿಂತ ಒಡವೆಗಳ ಮ್ಯಾಲಿನ ಮೋಹ ಅತಿಯಾಯ್ತು ಅಂತ ಅನಿಸಿ ಬೇಜಾರಾಯಿತು. ಅದು ಮುಗಿದು ಹೋದ ಕತಿ. ಈಗ ಮತ್ತೇನು ಹೇಳಬೇಕು ಅನಿಸ್ತು ಹೇಳ್ರಿ

ಗಾಂಧಿ ಏನಿಲ್ಲ. ನಾವು ಇಲ್ಲಿಗೆ ಬಂದ ಕೆಲಸ ಮುಗದಂಗಾಯಿತು. ಇನ್ನ ಇಂಡಿಯಾಕ ಹೊರಡಬೇಕು. ಯಾವಾಗ ಹೊರಡೋಣ ಅಂತ..

ಕಸ್ತೂರಬಾ ನಿಮ್ಮ ಮರ್ಜಿ.ನೀವು ಯಾವಾಗಂತೀರಿ ಆವಾಗ ಹೊರಡೋದು ನಮ್ಮ ಕೆಲಸ.

ಗಾಂಧಿ ಅಲ್ಲಾ.... ಎಲ್ಲಾದರೊಳಗೂ ನನ್ನ ನಿರ್ಣಯವೇ ಅಂತಿಮ ಆಗಬೇಕೇನು? ನಿನ್ನ ಅಭಿಪ್ರಾಯ ಕೇಳಿದ್ದು ತಪ್ಪೇನು?

ಕಸ್ತೂರಬಾ ಇಲ್ಲೀತನಕ ನನ್ನ ಅಭಿಪ್ರಾಯ ಕೇಳಿದಿರೇನು? ನನ್ನ ಹೆರಿಗೆ, ಮಕ್ಕಳ ಪಾಲನೆ ಪೋಷಣೆ, ಬಿಳಿಯರ ವಿರುದ್ಧದ ಹೋರಾಟ, ಬ್ರಹ್ಮಚರ್ಯ ಪಾಲನೆ ಎಲ್ಲಾದರೊಳಗು ನಿಮ್ಮ ನಿರ್ಣಯನೇ ಕೊನೇದಲ್ಲೇನು ?

ಗಾಂಧಿ ಉಳಿದೆಲ್ಲಾನು ಸತ್ಯ ಇರಬಹುದು ಆದರ ಬ್ರಹ್ಮಚರ್ಯ ಪಾಲನೆಯೊಳಗು ನನ್ನ ನಿರ್ಣಯನೇ ಅಖೈರಾದ್ದು ಅಂತೀಯೇನು ? ಇಬ್ಬರ ನಿರ್ಣಯದಿಂದನ, ಇದು ಸಾಧ್ಯವಾಗಬೇಕಲ್ಲ?

ಕಸ್ತೂರಬಾ ಆದರ....ನಮ್ಮ ವಿಷಯದೊಳಗ ಹಾಂಗಾಗಿಲ್ಲ! ನನಗ ಹಾಸಿಗೆ ಹಂಚಗೋಬಾರದು ಅನ್ನಿಸಿದಾಗ ನಿಮಗ ಮಕ್ಕಳು ಬೇಕು ಅನಿಸ್ತು, ನನಗಿನ್ನೂ ಮಕ್ಕಳು ಬೇಕು ಅನ್ನಿಸಿದಾಗ ನಿಮಗ ಬ್ರಹ್ಮಚರ್ಯ ಪಾಲಿಸಬೇಕು ಅನಿಸ್ತು. ನೀವು ಉಪ್ಪು ಬ್ಯಾಳಿ ಉಣ್ಣೋದು ಬಿಟ್ಟು ಮುಖ ತಿರುವಿ ಮಲಕೊಂಡಾಗ ನನಗ ಸಿಟ್ಟ

ಸಾವ ಬಂದು ಮೈಯಲ್ಲಾ ಪರ–ಪರಾ ಅಂತ ಹರಕೋಬೇಕು ಅನ್ನಸ್ತಿತ್ತು.

ಗಾಂಧಿ ಬಾ, ಏನಿದು ನನ್ನ ಮ್ಯಾಲೆ ಇಷ್ಟು ದೊಡ್ಡ ಆರೋಪ ?

ಕಸ್ತೂರಬಾ ನಾ ಹೇಳೋದು ಇನ್ನಾ ಮುಗದಿಲ್ಲ, ನೀವಾಗೇ ಕೇಳಬೇಕಂತ ಎಬ್ಬಿಸಿಗೊಂಡು ಬಂದೀರಿ, ಪೂರಾನರ ಕೇಳ್ರಿ

ಗಾಂಧಿ ಆಯ್ತು, ಹೇಳು..

ಕಸ್ತೂರಬಾ ಹಾಲು ನನ್ನ ಇಷ್ಟದ ಆಹಾರ ಅಂತ ನಿಮಗ ಗೊತ್ತು. ಆದ್ರ ನೀವು ಬ್ರಹ್ಮಚರ್ಯ ಪಾಲಿಸೋದಕ್ಕ ಅದು ವೈರಿ ಅಂತ ನೀವು ಬಿಟ್ಟರಿ, ನಾನೂ ಅದನ್ನ ಬಿಡಬೇಕು ಅಂದಿರಿ. ಬೇಕು ಅನ್ನಿಸಿದರೂ ನಾನು ಅದನ್ನ ಬಿಟ್ಟೆ. ಇದನ್ನ ನೀವು ಬ್ರಹ್ಮಚರ್ಯಪಾಲನೆ ಅಂದಿರಿ, ಎರಡು ಒಂದಾಗೋದ್ರೊಳಗ ಎಷ್ಟ ಎಡರು ತೊಡರು ಅದಾವ ಅಂತ ನೀವು ಎಂದಾದರೂ ಯೋಚಿಸ್‌ದ್ರೇನು?

ಗಾಂಧಿ ಇಷ್ಟೆಲ್ಲ ನಿನ್ನ ಮನಸ್ಸಿನೊಳಗ ಇದ್ದದ್ದು ನನಗ ಗೊತ್ತಾಗಲಿಲ್ಲ.

ಕಸ್ತೂರಬಾ ಇದರೊಳಗ ನನ್ನ ತಪ್ಪೇನದ ?

ಗಾಂಧಿ ಹೇಳಬೇಕು ಅನಿಸಿದಾಗ ನೀನು ಅದನ್ನ ಹೇಳಿಕೊಳ್ಳಲಿಲ್ಲ ಅನ್ನೋದು ತಪ್ಪಲ್ಲೇನು?

ಕಸ್ತೂರಬಾ ಹೆಣ್ಣಿಗೆ ನಾಚಿಕೆ ಆಭರಣ ಅನ್ನೋದನ್ನ ಗಂಡು ತಿಳಕೊಳ್ಳದಿದ್ದರ ಬಯಕಿ ಬೆಂಕಿ ಆಗಿಬಿಡ್ತದ.

ಗಾಂಧಿ ಸಮಾಜದ ಕೆಲಸಕ್ಕ, ತ್ಯಾಗ ಜೀವನಕ್ಕ ಬಯಕೆ ಕುಠಾರ ಪ್ರಾಯವಾದದ್ದು. ಅದಕ್ಕಂತ,, ಸ್ವಾಮಿ ನಿಷ್ಕುಲಾನಂದರು: ತ್ಯಾಗನ ಟಿಕೇರೆ ವೈರಾಗ ಬಿನಾ" ಅಂತ ಹೇಳಿದ್ದು.

ಕಸ್ತೂರಬಾ ಬಿಟ್ಟ ಬಿಡೋದು ಮಾತ್ರ ವೈರಾಗ್ಯನಾ ? ಯಾಕ ಬಿಡಬೇಕು? ಯಾರಿಗಾಗಿ ಬಿಡಬೇಕು? ಹೀಂಗ ಬಿಡೋದ್ರಿಂದ ಆಗೋ ಲೋಕ ಪ್ರಯೋಜನ ಏನು ಅನ್ನೋದಕ್ಕೂ ವೈರಾಗ್ಯಕ್ಕೂ ಸಂಬಂಧ ಇರಬಾರದೇನು?

ಗಾಂಧಿ ಹಾಂ ಈ ಲೋಕ ಪ್ರಯೋಜನದ ವಿಷಯ ನೀ ಹೇಳಿದಿ ನೋಡು ಇದು ನನಗ ಬಹಳ ಹಿಡಿಸ್ತು, ವೈಯಕ್ತಿಕ ಭೋಗಜೀವನಕ್ಕಿಂತ ಲೋಕಹಿತಚಿಂತನ ನನಗ ಹೆಚ್ಚು ಮಹತ್ವದ್ದಾಗಿ ಕಾಣಿಸ್ತು. ಅದಕ್ಕ ನಾನು ನಿನ್ನ ಕೇಳದ ಕೆಲವು ನಿರ್ಧಾರ ತೊಗೋಬೇಕಾತು.

ಕಸ್ತೂರಬಾ ನೀವು ನನ್ನ ಹೊಟ್ಟೆ ಬಟ್ಟೆ ನೋಡಿಕೊಂಡೀರಿ, ನನ್ನ ಮಕ್ಕಳಿಗೆ ತಂದೆ ಆದಿರಿ, ನನ್ನ ಆರೋಗ್ಯ, ಅನಾರೋಗ್ಯದ ಬಗ್ಗೆ ಚಿಂತಿಸಿದ್ರಿ ಅನ್ನೋದಕಿಂತ ನೀವು ತೊಗೊಂಡಿರೋ ಬಾಳಷ್ಟು ಏಕಪಕ್ಷೀಯ ನಿರ್ಧಾರಗಳ ಹಿಂದ ಈ ಲೋಕಹಿತ ಚಿಂತನ ಮುಖ್ಯ ಆಗಿರ್ತಿತ್ತು ಅನ್ನೋ ಕಾರಣಕ್ಕನ ನಾನು ನಿಮ್ಮನ್ನ ಇಷ್ಟ ಪಟ್ಟಿದ್ದು

ಗಾಂಧಿ (ದರ್ಪದಿಂದ) ಓ ರಿಯಲಿ.....? ನೀನು ನನ್ನನ್ನು ಇಷ್ಟಪಡ್ತೀದಿ ಅನ್ನೂ ಸತ್ಯ ನಾನು ಪ್ರತಿಪಾದಿಸ್ತಾ ಮತ್ತು ಪಾಲಿಸ್ತಾ ಬಂದಿರೊ ಸತ್ಯಗಳಿಗಿಂತ ತುಂಬ ಪ್ರಿಯವಾದದ್ದು ಬಾ

ಕಸ್ತೂರಬಾ ಹೌದಾ ? ಯಾಕ?

ಗಾಂಧಿ ಯಾಕಂದ್ರ ವೈರುಧ್ಯಗಳ ನಡುವೆ ಉದ್ಭವಿಸೊ ಪ್ರೀತಿ ಆಕರ್ಷಣೆಯನ್ನ ಮೀರಿದ್ದು ಅಲ್ಲೇನು? ನಿನ್ನ ನಾನು ಎಲ್ಲಾ ಕಾಲಕ್ಕೂ ಸರಿಯಾಗಿ ನಡೆಸಿಕೊಂಡಿಲ್ಲ, ನಿನ್ನ ಇಷ್ಟಾನಿಷ್ಟಗಳಿಗೆ ಬೆಲೆಕೊಡ್ಲಿಲ್ಲ ಅಂತ ನನ್ನ ಮನಸ್ಸು ಹೇಳ್ತದ, ನೀನು ನನಗಾಗಿ ಬಾಳಿದ್ದಕ್ಕಿಂತ ಹೆಚ್ಚಾಗಿ ನಾನು ಇತರರಿಗಾಗಿ ಬಾಳಿದೆ ಅಂತನೂ ನನಗ ಗೊತ್ತದ. ಒಮ್ಮೊಮ್ಮೆ ನನ್ನ ಮ್ಯಾಲೆ ನನಗೇ ಸಿಟ್ಟು ಬರತದ, ಜಿಗುಪ್ಸೆ ಹುಟ್ಟತದ [ಬಾ ರ ಕಣ್ಣಲ್ಲಿ ಹರಿವ ನೀರನ್ನು ಕಂಡು ಅಚ್ಚರಿಯಿಂದ]
ಬಾ, ಯಾಕ, ಈ ಕಣ್ಣೀರು ಯಾಕ?

ಕಸ್ತೂರಬಾ [ಗದ್ಗದಿತಳಾಗಿ] ಇವು ಕಣ್ಣೀರಲ್ಲ. ಆನಂದ ಭಾಷ್ಪಗಳು

ಗಾಂಧಿ ಯಾಕ ?

ಕಸ್ತೂರಬಾ ಇಷ್ಟು ವರ್ಷದೊಳಗ ಇವತ್ತಾದರೂ ನನ್ನ ಬಗ್ಗೆ ಇಷ್ಟು ಗಂಭೀರವಾಗಿ ವಿಚಾರಮಾಡಿ ಹೃತ್ಪೂರ್ವಕವಾಗಿ ಸ್ಪಂದಿಸಿದ್ದಕ್ಕೆ,

ಗಾಂಧಿ ನನ್ನ ಇಂಥಾ ನಡುವಳಿಕೆ ಅಷ್ಟು ಅಸಹಜ ಅನ್ನಸ್ತದೇನು?

ಕಸ್ತೂರಬಾ ಉಳಿದವರ ವಿಷಯಕ್ಕ ಹ್ಯಾಂಗೋ ಏನೋ ಗೊತ್ತಿಲ್ಲ, ಆದರ ನನ್ನ ವಿಷಯದೊಳಗಂತೂ ಇದು ನನ್ನ ನಿರೀಕ್ಷೆಗೆ ಮೀರಿದ್ದು.

ಗಾಂಧಿ ಅದಕ್ಕ ಭಾರತಕ್ಕ ಮರಳೊ ನನ್ನ ನಿರ್ಧಾರ ಸರೀನಾ ಅಂತ ನಿನ್ನ ಕೇಳಿದ್ದು

ಕಸ್ತೂರಬಾ ನನಗ ಸರಿ ಅನ್ನಿಸದಿದ್ದರ ಅದನ್ನ ಬದಲಾಯಿಸ್ತಿರೇನು?

ಗಾಂಧಿ [ಅಚ್ಚರಿಯಿಂದ] ಬಾ, ಈ ಪ್ರಶ್ನೆ ಕೇಳ್ತಾ ಇರೋದು ನೀನೇನಾ ?

ಕಸ್ತೂರಬಾ ಯಾಕ, ನಿಮಗ ವಿಶ್ವಾಸ ಬರವಲ್ದೇನು ?

ಗಾಂಧಿ ನಿಜವಾಗಲೂ. ಯಾಕಂದರ ನೀನು ಈ ದಕ್ಷಿಣ ಆಫ್ರಿಕಾದೊಳಗ ಇರಾಕ ಯಾವಾಗಲೂ ಇಷ್ಟಪಟ್ಟಾಕಿ ಅಲ್ಲ.... ನನ್ನ ನಿರ್ಧಾರ ನಿನಗ ಸಂತೋಷ ಕೊಡ್ತದ ಅಂತ ನಾನು ಭಾವಿಸಿದ್ದೆ.

ಕಸ್ತೂರಬಾ ನನಗ ಇಲ್ಲಿ ಇರಾಕ ಹ್ಯಾಂಗ ಇಷ್ಟ ಇಲ್ಲವೊ ಹಾಂಗ ಅಲ್ಲಿಗೆ ಹೋಗಾಕೂ ಇಷ್ಟ ಇಲ್ಲ.

ಗಾಂಧಿ ಹೌದಾ? ಯಾಕ ?

ಕಸ್ತೂರಬಾ ಯಾಕಂತ ನೀವು ನನ್ನ ಗಂಡ ಆಗಿ ಹೇಳ್ರಿ ನೋಡೋಣ!

ಗಾಂಧಿ [ಗಲಿಬಿಲಿಯಿಂದ] ಇಲ್ಲ, ನನಗ ಏನೂ ಹೋಳಿವಲ್ಲದು. ಬಾ, ಯಾಕ ನಿನಗ ತವರಿಗೆ ಹೋಗಾಕ ಇಷ್ಟ ಇಲ್ಲ ಹೇಳು.

ಕಸ್ತೂರಬಾ ಯಾಕಂದ್ರ ಹತ್ರದವ್ರು, ಹತ್ತರ ಬಂದು, ಬಾ ಹತ್ತರ ಅಂದ್ರ ಓಡಿ ಹೋಗಿ ಅಪ್ಪಿಕೊಬೇಕು ಅನಸ್ತದ. ಒಳಗಿನ್ ನೋವೆಲ್ಲ ಹೊರಗ ಹಾಕಬೇಕು ಅನಸ್ತದ. ಮನಸ್ಸಿನೊಳಗ ಇದ್ದದ್ದನ್ನ ತೋಡಿಕೊಬೇಕು ಅನ್ನಸ್ತದ.

ಗಾಂಧಿ ಅಲ್ಲಿಗೆ ಹೋದ್ರ ತೋಡಿಕೊಳ್ಳೋಕ್ಕೆ, ಅಪ್ಪಿಕೊಳ್ಳೊಕೆ ಇರೊ ಅಡ್ಡಿ ಏನು ಬಾ ?

ಕಸ್ತೂರಬಾ ದಿನಾ ಸಾಯೋರಿಗೆ ಅಳೋರ್‍ಯಾರು

ಗಾಂಧಿ ಅಂದರ......?

ಕಸ್ತೂರಬಾ ಇಲ್ಲಿರೊ ಭಾರತೀಯರು ಕೆಲವು ಲಕ್ಷ ಜನಾ, ಆದರ ಅಲ್ಲಿ ಇರೋರು ಕೋಟಿ ಕೋಟಿ ಮಂದಿ, ಅಲ್ಲಿ ಹೋದಬಳಿಕ

ನಿಮಗ ನನ್ನ ಬಗ್ಗೆ, ಮಕ್ಕಳ ಬಗ್ಗೆ ಕಾಳಜಿ ಕಕ್ಕುಲಾತಿ ತೋರಸೋದು ಸಾಧ್ಯ ಆದೀತಾ ?

ಗಾಂಧಿ ಯಾಕಾಗಂಗಿಲ್ಲ ? ಖಂಡಿತ ಆಗ್ತದ

ಕಸ್ತೂರಬಾ ಇದನ್ನ ನಾನ್ ನಂಬಬೇಕಾ?

ಗಾಂಧಿ ನಂಬದ ಇರೋದಕ್ಕ ಕಾರಣ ಅದನಾ? ಇದ್ದರ ಹೇಳು.

ಕಸ್ತೂರಬಾ ನಮ್ಮ ಮಕ್ಕಳ ಶಿಕ್ಷಣ ಮತ್ತ ಅವರ ಭವಿಷ್ಯದ ಬಗ್ಗೆ ನೀವು ಇಲ್ಲಿ ಎಷ್ಟು ಕಾಳಜಿ ತೊಗೊಂಡೀರಿ?

ಗಾಂಧಿ ಎಷ್ಟ ತೊಗೊಬೇಕೊ ಅಷ್ಟು ತೊಗೊಳ್ಳಿಕ್ಕೆ ಆಗದಿದ್ದರೂ ನನಗ ಸಾಧ್ಯವಾದಷ್ಟು ತೊಗೊಂಡೀನಿ ಅಂತ...

ಕಸ್ತೂರಬಾ ನಿಮಗ ಅನ್ನಿಸಿರಬಹುದು ಆದರ ನನಗೂ ಅನ್ನಿಸಿಲ್ಲ, ಅವರಿಗೂ ಅನ್ನಿಸಿಲ್ಲ. ನಮ್ಮ ಹಿರೇಮಗಾ ಅಂತೂ.....

ಗಾಂಧಿ ಅವನ ಹೆಸರೆತ್ತಬ್ಯಾಡ. ನಮ್ಮ ಮೋಹದ ಫಲ ಅದು, ಅದಕ್ಕೇ ಆತ.....

ಕಸ್ತೂರಬಾ ಇಲ್ಲ, ಅವನಕಡೆ ಎಷ್ಟು ಗಮನ ಕೊಡಬೇಕೊ ಅಷ್ಟು ಕೊಡ್ಲಿಕ್ಕೆ ನಿಮಗಾಯ್ತೇನು ?

ಗಾಂಧಿ ಅಷ್ಟಾಗದಿದ್ದರೂ .....

ಕಸ್ತೂರಬಾ ಅಷ್ಟು ಇಷ್ಟಲ್ಲ, ಎಷ್ಟೂ ಆಗಲಿಲ್ಲ ಅಂತ ಒಪ್ಪಿಕೊಳ್ರಿ, ಅದಕ್ಕ ಅಂವಾ ಮೋಹದ ಮಾಯಾ ಜಾಲದೊಳಗ ಸಿಕ್ಕಾಕೊಂಡದ್ದಷ್ಟೆ ಅಲ್ಲ, ಬಾಳಂದ್ರ ಬಾಳದೂರ ಹೋಗಿಬಿಟ್ಟಾನ.

ಗಾಂಧಿ ಅದಕ್ಕ ಸಂಪೂರ್ಣ ಹೊಣೆಗಾರ ನಾನೇ ಅನ್ನೂದು.. ...

ಕಸ್ತೂರಬಾ ನನ್ನ ಅಭಿಪ್ರಾಯ ಅದಲ್ಲ, ಬೆಳಿಯೊ ಕೂಸು, ಮತ್ತ ಸಸಿ ಬೆಳೆಸುವವರ ಕಣ್ಣರಿಕೆ ಮತ್ತ ಕರುಳರಿಕೆಯೊಳಗ ಇರಬೇಕು. ಇಲ್ಲದಿದ್ದರ ಇಂಥಾ ದುರಂತ ಸಂಭವಿಸ್ತಾವ ಅಂತ ಹೇಳಿದೆ, ಇಲ್ಲೇ ಈ ಪರಿಸ್ಥಿತಿ ಇರುವಾಗ ಅಲ್ಲೀದನ್ನ ನೆನದು ಭಯ ಆಯ್ತು. ಅದಕ್ಕ ನನ್ನ ಆತಂಕ ನಾನು ತೋಡಿಕೊಂಡೆ.

ಗಾಂಧಿ ನಿನ್ನ ಮಾತ್ನ ಸಂಪೂರ್ಣವಾಗಿ ತಳ್ಳಿಹಾಕೊ ನೈತಿಕ ಧೈರ್ಯ ನನಗಿಲ್ಲ ಬಾ....ಆದರೆ ಬಿಡುವು ಮಾಡಿಕೊಂಡು ಅವರ ಭವಿಷ್ಯದ ಕಡೆ ಗಮನ ಹರಿಸ್ತೀನಿ ಅನ್ನೊ ಭರವಸೆ ಅಂತೂ ಕೊಡ್ತೀನಿ.

ಕಸ್ತೂರಬಾ ನಿಮ್ಮದು ಅಲ್ಲದೇ ಹೋದರೂ ಆ ಭಗವಂತನ ಕೃಪಾ ನಮ್ಮ ಮೇಲೆ, ಮಕ್ಕಳಮೇಲೆ ಇರ್ಲಿ ಅಂತ ನಾನು ಹಾರೈಸ್ತೀನಿ.
[ಗಡಿಯಾರದ ಗಂಟೆ ಮೂರುಬಾರಿಸಿದಾಗ]
ರಾತ್ರಿ ಕಳೆದು ಬೆಳಗಾಗತಾ ಬಂತು.. ಮಲಕೊಳ್ರಿ..

ಗಾಂಧಿ ಆಯ್ತು...

[ನಿರ್ಗಮನ..ಬೆಳಕು....ಮಂದವಾಗುತ್ತದೆ.]

ದೃಶ್ಯ – 8

[ದರ್ಬಾನ್ ಬಂದರಿನ ಹೊರವಲಯ. ಸ್ವದೇಶಕ್ಕೆ ಹೊರಡಲಿರುವ ಗಾಂಧಿ ಮತ್ತವರ ಕುಟುಂಬವರಿಗೆ ಕೃತಜ್ಞತೆ ಸಲ್ಲಿಸಿ ವಿದಾಯ ಹೇಳಲು ಸೇರುತ್ತಿದ್ದ ಜನಸಮೂಹ. ಗದ್ದಲ ಗುಜು ಗುಜು]

ಸೇಠ ಆದಮ್‌ಜಿ [ತುಸು ಎತ್ತರದ ಧ್ವನಿಯಲ್ಲಿ] ಶಾಂತಿ, ಶಾಂತಿ ಭಾಯಿಯೋ ಔರ ಬೆಹನೊ, ತಾವೆಲ್ಲ ಶಾಂತರಾಗಬೇಕು. ಇವತ್ತು ಡರ್ಬನ್ ಬಂದರಿನ ಹೊರಗೆ ನಾವು ಸೇರಿರೊ ವಿಷಯ ತಮಗೆಲ್ಲ ಗೊತ್ತಿದೆ, ಈ ಸಂಗತಿ ನಮಗೆಲ್ಲ ಅಪ್ರಿಯ ಹಾಗೂ ಅಷ್ಟೇ ಪ್ರಿಯವಾದದ್ದು. ಅಪ್ರಿಯ ಯಾಕೆಂದರೆ ಇಂದು ನಾವು ಬೇರೆಯವರೊಂದಿಗೆ ವಿಶೇಷವಾಗಿ ಬಿಳಿಯರೊಂದಿಗೆ ಮುಖ ಮೇಲೆತ್ತಿ ಮಾತನಾಡುವ ಶಕ್ತಿಯನ್ನು, ಆತ್ಮ ಗೌರವವನ್ನು ತಂದುಕೊಟ್ಟ ದೇವದೂತ ಶ್ರೀ ಮೋಹನದಾಸ ಕರಮಚಂದ ಗಾಂಧಿ ಇವತ್ತು ಭಾರತಕ್ಕೆ ಹೊರಟಿದ್ದಾರೆ ಎಂಬುದು. ಪ್ರಿಯವಾದದ್ದು ಯಾಕೆಂದರೆ ಭಾರತ ನಮ್ಮ ತಾಯ್ನಾಡು, ಅಲ್ಲಿಯ ಭಾರತೀಯರು ನಮ್ಮ ಬಂಧುಗಳು. ಗಾಂಧೀಜಿಯ ಅನುಪಸ್ಥಿತಿಯಲ್ಲಿ ನಾವು ಹೇಗೆ ನಲುಗಿಹೋಗಿದ್ದೆವೋ ಹಾಗೆ ಅವರು ಇಂದು ನರಳುತ್ತಿದ್ದಾರೆ, ಅವರ ಬಾಳಿನಲ್ಲಿ ಬೆಳಕನ್ನು ತರುವ ಈ ಶಕ್ತಿಯ ಸೂರ್ಯ ಅಲ್ಲಿಗೆ ಹೋಗುತ್ತಿರೋದು ನಮಗೆ ಪ್ರಿಯವಾದ ಸಂಗತಿ, ಇಂದು ನಮ್ಮೆಲ್ಲರ ಹೃದಯ ತುಂಬಿ ಬಂದಿದೆ, ಗಂಟಲು ಕಟ್ಟುತ್ತಿವೆ. [ಗದ್ಗದಿತನಾಗಿ ನನಗೆ ಹೆಚ್ಚಿಗೆ ಮಾತನಾಡಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ರುಸ್ತುಮ್ ಜಿ ಭಾಯಿ ಒಂದೆರಡು ಮಾತು ಹೇಳಬೇಕು ಅಂತ ಕೇಳಿಕೊಂಡು ನನ್ನ ಮಾತು ಮುಗಿಸ್ತೇನೆ.

ರುಸ್ತುಮ್‌ಜಿ ವಂದನೆಗಳು ಸೇಠ್ ಆದಮ್‌ಜಿ, ಬಂಧುಗಳೆ ತಮಗೆಲ್ಲ ನಮಸ್ಕಾರ. ಆದಮ್‌ಜಿ ಹೇಳಿದ್ದು ಸುಳ್ಳೂ ಅಲ್ಲ, ಉತ್ಪ್ರೇಕ್ಷೆಯೂ ಅಲ್ಲ, ಗಾಂಧಿ ಸಾಮಾನ್ಯ ಮನುಷ್ಯರಲ್ಲ, ನಮ್ಮ ಅಭ್ಯುದಯಕ್ಕಾಗಿ

ಅವತರಿಸಿ ಬಂದ ದೇವದೂತ ಎಂಬುದು ಸತ್ಯಸ್ಯ ಸತ್ಯ
[ಕರತಾಡನ– ಗಾಂಧೀಜಿ ಕಿ ಜೈ ಎಂಬ ಜಯಘೋಷ]
ಲಂಡನ್‌ನಲ್ಲಿ ಬ್ಯಾರಿಸ್ಟರ ಪದವಿ ಪಡೆದು ಬಂದ ಅವರು
ಭಾರತದಲ್ಲೇ ಯಶಸ್ವಿ ವಕೀಲರಾಗಿದ್ದಿದ್ದರೆ ನಾವು ಅವರನ್ನು
ನೋಡುವ ಭಾಗ್ಯ ನಮಗೆ ಸಿಗ್‌ತ್ತಿರಲಿಲ್ಲ, ಹಾಗಾಗಲಿಲ್ಲ
ಅನ್ನೋದು ಅವರ ದುರ್ದೈವ–ಅದೇ ನಮ್ಮ ಸುದೈವ.
ಇಂಡಿಯಾದಿಂದ ಅವರನ್ನು ಇಲ್ಲಿಗೆ ಕರೆಸಿಕೊಂಡ ದಾದಾ
ಅಬ್ದುಲ್ಲಾರವರಿಗೆ ನಾವು ಎಷ್ಟು ಕೃತಜ್ಞತೆ ಸಲ್ಲಿಸಿದ್ರೂ ಕಡಿಮೆಯೆ.
ಇವತ್ತು ಅವರೂ ನಮ್ಮೊಂದಿಗಿದ್ದಾರೆ ಅವರಿಗೆ ತಮ್ಮೆಲ್ಲರ
ಪರವಾಗಿ ಒಂದು ಸಲಾಂ [ಕರತಾಡನ–ದಾದಾ ಅಬ್ದುಲ್ಲಾ
ಅವರು ಎದ್ದು ನಿಂತು ಅಭಿನಂದನೆ ಸ್ವೀಕರಿಸುವರು]

ಧ್ವನಿ ಶಾಂತಿ....ಶಾಂತಿ... ಎಲ್ಲರೂ ನನ್ನ ಮಾತನ್ನ ಕೇಳ್ರಿ, ಗಾಂಧೀಜಿ
ನಮ್ಮೆಲ್ಲರ ಆಪ್ತ ಬಂಧು, ನಮ್ಮ ಹಿರಿಯಣ್ಣ, ನಮ್ಮ ತಂದೆ
ಸ್ವರೂಪದಲ್ಲಿದ್ದವರು ನಮ್ಮನ್ನ ಬಿಟ್ ಹೋಗ್‌ಕೂಡದು–ದಾದಾ
ಅಬ್ದುಲ್ಲಾರವರು ದೊಡ್ಡ ಮನಸ್ಸುಮಾಡಿ ಅವರನ್ನು ತಡೀಬೇಕು.

ಧ್ವನಿಗಳು ಹೌದು, ಹೌದು, ಗಾಂಧೀಜಿ ಇಲ್ಲೇ ಉಳಿಯಬೇಕು.

ರುಸ್ತುಮ್‌ಜಿ ಶಾಂತಿ.....ಶಾಂತಿ....ತಾವೆಲ್ಲ ಶಾಂತರಾಗಿ ಕೇಳಿದರೆ ದಾದಾ
ಅವರು ಒಂದೆರಡು ಮಾತು ಹೇಳ್ತಾರ......ದಾದಾಜಿ...[ದಾದಾ
ಅಬ್ದುಲ್ಲಾಜೀ ಕಿ ಜೈ,
ಗಾಂಧೀಜಿ ಕಿ ಜೈ... ಎಂಬ ಜಯಘೋಷ]

ದಾದಾ ಅಬ್ದುಲ್ಲ ಶಾಂತಿ.....ಶಾಂತಿ.....ನನಗ್ಯಾಕೆ ಜೈಕಾರ...? ಅದೆಲ್ಲಾ ಗಾಂಧೀಜಿಗೇ
ಇರಲಿ. ಭಾಯಿಯೋ, ನಿಮ್ಮ ಪ್ರೀತಿ– ಅಭಿಮಾನ ತುಂಬ
ದೊಡ್ಡದು. ಅದು ನನಗೆ ಅರ್ಥ ಆಗಿದೆ, ಗಾಂಧೀಜೀಗೂ ಅದು
ತಿಳಿದಿದೆ. ಆದರೆ ಅವರು ಇಲ್ಲಿರಬೇಕಾದ ಅವಶ್ಯಕತೆಗಿಂತ ಅಲ್ಲಿಗೆ
ಹೋಗಬೇಕಾದ ಅನಿವಾರ್ಯತೆ ಹೆಚ್ಚಿನದು ಅಂತಲೂ ನಂಗೆ
ಗೊತ್ತಿದೆ. ನಂಗೂ ನಮ್ಮ ಕೋರ್ಟಿನ ಕೇಸುಗಳೆಲ್ಲ
ನಿಕಾಲಿಯಾಗಿದ್ರೂ ಅವ್ರು ಇಲ್ಲೇ ಇರಬೇಕು ಅನ್ನಿಸ್ತಿದೆ. ಅದನ್ನ
ನಾನು ಅವರಿಗೆ ಹಲವಾರು ಸಾರಿ ಹೇಳಿದ್ದೆ. ಆದ್ರೆ ಅವರು
ಒಪ್ಪಲಿಲ್ಲ. ಈಗ ಅವರು ಇಲ್ಲಿಗೆ ಬಂದ ನಂತರ ಇನ್ನೊಮ್ಮೆ

ಹೇಳ್ತೇನೆ, ಪ್ರೀತಿಪೂರ್ವಕ ವಿನಂತಿ ಮಾಡಿಕೊಳ್ತೇನೆ, ಅಲ್ಲಿಯ ತನಕ ಬೇರೆ ಯಾರಾದ್ರೂ ಮಾತಾಡ್ರಿ

[ಚಪ್ಪಾಳೆ –ಜೈಕಾರ]

ಬಾಲಸುಂದರಂ ನಮಸ್ಕಾರ. ನನ್ನ ಹೆಸರು ಬಾಲಸುಂದರಂ, ಎಂಟತ್ತು ವರ್ಷಗಳ ಹಿಂದೆ ಭಾರತದ ಮದ್ರಾಸ್ ಪ್ರಾಂತ್ಯದಿಂದ ಇಲ್ಲಿಗೆ ಬಂದೆ. ಇಲ್ಲಿಯ ಒಬ್ಬ ಯೂರೋಪಿಯನ್ ಯಜಮಾನನಿಗೆ ಕರಾರು ಕೂಲಿಯಾಗಿ ಬಂದಿದ್ದೆ. ಎರಡು ವರ್ಷ ಆತ ನೀಡಿದ ಹಿಂಸೆ ತಾಳಿಕೊಂಡೆ, ಅವಮಾನ ಸಹಿಸಿಕೊಂಡೆ, ಯಾಕೆಂದರೆ ನಾವು ಕರಾರು ಕೂಲಿಗಳು ಕನಿಷ್ಟ ಐದು ವರ್ಷದ ಒಪ್ಪಂದ ಪೂರೈಸಬೇಕಿತ್ತು. ಒಂದ್ ದಿನ ನಾನು ಮರೆತು ತಲೆಯ ಮೇಲಿನ ಬಟ್ಟೆ ತೆಗೆಯದೆ ಅವನ್ ಮುಂದೆ ನಿಂತೆ. ಆತ ನನ್ನ ಹೀನಾಯವಾಗಿ ಬೈದ, ಕೈಗ್ ಸಿಕ್ಕ ವಸ್ತುವಿನಿಂದ ಹೊಡೆದ. ನನ್ನ ಮುಂದಿನ ಎರಡು ಹಲ್ಲುಗಳೂ ಮುರಿದು ಬಿದ್ದವು, ಬಾಯಿಂದ ರಕ್ತ ಸೋರ್ತಾ ಇತ್ತು... ಮೈಮೇಲಿನ ಬಟ್ಟೆ ಎಲ್ಲಾ ಚಿಂದ್ ಚಿಂದಿಯಾಗಿದ್ದವು, ಇಂಥದ್ರಲ್ಲಿ ನನಗೆ ಬೇರೆದಾರಿ ಕಾಣಲಿಲ್ಲ ನನ್ನ ಮಿತ್ರ ಮುರುಗನ್, ಗಾಂಧೀಜಿ ಹತ್ರ ನನ್ನ ಕರ್‌ಕೊಂಡು ಹೋದ.

ಮುರುಘನ್ ದಯಾಳು ಗಾಂಧೀಜಿ, ಬಾಲುವನ್ನ ಯೂರೋಪಿಯನ್ ವೈದ್ಯರ ಹತ್ರ ಕರೆದ್‌ಕೊಂಡ್ ಹೋಗಿ ಚಿಕಿತ್ಸೆ ಕೊಡಿಸಿದ್ರು, ಅವರಿಂದ ಪ್ರಮಾಣ ಪತ್ರ ಪಡಕೊಂಡು, ಮ್ಯಾಜಿಸ್ಟ್ರೇಟ್‌ರ ಬಳಿ ಕರ್‌ಕೊಂಡ್ ಹೋದ್ರು

ಬಾಲಸುಂದರಂ ನನ್ನ ಸ್ಥಿತಿಯನ್ನು ಕಂಡು, ವೈದ್ಯರ ಪ್ರಮಾಣ ಪತ್ರ ಓದಿ ಮ್ಯಾಜಿಸ್ಟ್ರೇಟರಿಗೆ ಕೋಪ ಬಂತು. ನನ್ನ ಯಜಮಾನನಿಗೆ ಸಮನ್ಸ್ ಕಳಿಸಿದ್ರು

ಮುರುಘನ್ ಆತನಿಗೆ ಶಿಕ್ಷೆಯಾಗುತ್ತೆ ಅಂತ ಹೆದರಿಕೆ ಆಯ್ತು, ಗಾಂಧೀಜಿ ಆತನ್ನ ಭೇಟಿ ಮಾಡಿ ಮಾತಾಡಿ ಈ ಬಾಲೂನನ್ನ ಋಣಮುಕ್ತನನ್ನಾಗಿ ಮಾಡಿದ್ರು

ಬಾಲಸುಂದರಂ ನನ್ನ ಹೊಸ ಯಜಮಾನ ತುಸು ಒಳ್ಳೆಯವನಾಗಿದ್ದ. ಒಪ್ಪಂದದ ಅವಧಿ ಪೂರೈಸಿದೆ, ಅಷ್ಟರಲ್ಲಿ ನನಗೆ ಚಿಕ್ಕ ಪುಟ್ಟ ವ್ಯಾಪಾರ

ಮಾಡಿ ಹಣ ಗಳಿಸಬೋದು ಅಂತ ಧೈರ್ಯ ಬಂತು. ಹಾಗೆ ಪ್ರಾರಂಭ ಆಗಿ ಇವತ್ತು ಹೋಲ್‌ಸೇಲ್ ವ್ಯಾಪಾರಿಯಾಗಿದ್ದೇನೆ, ಸ್ವಂತ ಮನೆ, ಜಮೀನು ಎಲ್ಲಾ ಇದೆ. ಇದೆಲ್ಲ ನನ್ನಿಂದಾಗಿ ಅಲ್ಲ, ಅದೋ ಅಲ್ಲಿ ಬರ್‍ತಾ ಇದ್ದಾರಲ್ಲ.. ಆ ಪುಣ್ಯಾತ್ಮ ಗಾಂಧೀಜಿಯ ಕೃಪೆಯಿಂದ.

ಮುರುಘನ್ ಗಾಂಧೀಜಿ ಕಿ...[ಎಲ್ಲರೂ ಜೈಕಾರ ಹಾಕುವರು ಗಾಂಧೀಜಿ ಹಾಗೂ ಅವರ ಕುಟುಂಬದ ಸದಸ್ಯರ ಆಗಮನ, ನಿಲ್ಲದ ಕರತಾಡನ, ಜೈಕಾರ]

ರುಸ್ತುಮ್‌ಜಿ [ಎತ್ತರದ ಧ್ವನಿಯಲ್ಲಿ] ಬಂಧುಗಳೆ, ದಯವಿಟ್ಟು ಗಾಂಧೀಜಿ ಅವರಿಗೆ ಇಲ್ಲಿ ಈ ಕಟ್ಟೆ ಮೇಲೆ ಬರಲಿಕ್ಕೆ ದಾರಿ ಮಾಡಿ ಕೊಡಬೇಕು. ಬರ್ರಿ ಗಾಂಧೀಜಿ, ಬರ್ರಿ.... ಆದಮ್‌ಜಿ, ಮನಸುಖಲಾಲಜಿ ಅವರ್‍ನ, ಮತ್ತ ಅವರ ಕುಟುಂಬದವರನ್ನ ಇಲ್ಲಿಗೆ ಕರಕೊಂಡ್ ಬರಬೇಕು

[ಗದ್ದಲ..ಜೈಕಾರ] ದಯವಿಟ್ಟು ಶಾಂತರಾಗಬೇಕು... ಯಾರೂ ಮೇಲೆ ನುಗ್ಗಿ ಬರಬಾರದು. ಆಮೇಲೆ ಒಬ್ಬೊಬ್ಬರೆ ಬಂದು ತಮ್ಮ ಗೌರವಾರ್ಪಣೆ ಮಾಡಬೇಕು....ಹಲೊ, ಶಾಂತಿ...ಶಾಂತಿ, ಈಗ ನಮ್ಮೆಲ್ಲರ ಪರವಾಗಿ ದಾದಾ ಅಬ್ದುಲ್ಲಾರವರು ಮಾತಾಡ್ತಾರ ಶಾಂತರಾಗಿ ಕೇಳ್ರಿ.. ದಾದಾಜಿ...

ದಾದಾ ಅಬ್ದುಲ್ಲಾ ಬಂಧುಗಳೆ, ಶಾಂತಿ.....ಶಾಂತಿ....ನಾನೂ ಇಲ್ಲಿಗೆ ಈ ದಕ್ಷಿಣ ಆಫ್ರಿಕಾ ದೇಶಕ್ಕ ಕೂಲಿಯಾಗೇ ಬಂದೆ ...ಕಷ್ಟಪಟ್ಟು ದುಡಿದೆ, ದುಡಿಮೆಗೆ ತಕ್ಕ ಪ್ರತಿಫಲ ಸಿಕ್ತು, ಹಣ ಗಳಿಸಿದೆ, ಇನ್ನೂಗಳಿಸಿದೆ, ಸ್ವಂತ ಕಂಪನಿ ಸ್ಥಾಪಿಸಿದೆ. ನನಗೆ ಇವತ್ತು ಹಣ, ಚಿನ್ನ, ಒಡವೆ, ವಜ್ರ ಯಾವುದರ ಕೊರತೆನೂ ಇಲ್ಲ. ಆದರ ಇವತ್ತು ಈ ಗಾಂಧೀಜಿಗೆ ನೀವೆಲ್ಲಾ ತೋರಿಸ್ತಿರೊ ಪ್ರೀತಿಯನ್ನ ನೋಡಿ ನನಗ ಏನನಿಸ್ತಿದೆ ಅಂದ್ರ ನಾನು ಹಣವಂತನಾದೆ ಆದರೆ ಗಾಂಧೀಜಿಯವರ ಹಾಗೆ ಶ್ರೀಮಂತ ಆಗಲಿಲ್ಲ ಅಂತ... [ಕರತಾಡನ– ಗಾಂಧೀಜಿ ಜೈ] ಹೌದು, ಬ್ಯಾರೆದವರ ಹೃದಯದೊಳಗ ನಮ್ಮ ಬಗ್ಗೆ ಏಳುವಂಥ ಈ ತರಂಗ, ಕಂಪನಗಳೇನು ಅದಾವಲ್ಲ ಇದು ಖರೇ ಸಂಪತ್ತು,

ಈ ಸಂಪತ್ತನ್ನ ಇವರು ಗಳಿಸಲಿಕ್ಕೆ ಕಾರಣ ಏನು ಅಂತ ನಾನು ಬಾಳಷ್ಟು ಸಾರೆ ಆಲೋಚನೆ ಮಾಡ್ದೆ. ಆಗ್ ಗೊತ್ತಾಗಿದ್ದು ಏನು ಅಂದ್ರ, ಅವರು ಹೂವಿನಷ್ಟು ಕೋಮಲನೂ ಅದಾರ, ವಜ್ರದ ಹಾಗೆ ಕಠೋರನೂ ಅದಾರ. ತಮ್ಮ ಸುಖ, ಸಂತೋಷ ಸುಟ್ಟುಕೊಂಡು ಬ್ಯಾರೆಯವರಿಗೆ ಸಂತೋಷ ಕೊಡ್ತಾರ. ಸತ್ಯವನ್ನು ಬರೆ ಪ್ರೀತಿಸೋದಿಲ್ಲ, ಪೂಜಿಸ್ತಾರೆ, ಇವರು ಪಾಪ ಮಾಡೋದೇ ಇಲ್ಲ ಅಂತಲ್ಲ, ಯಾಕಂದ್ರ ಪಾಪ ಮಾಡದವರು ಈ ಲೋಕದೊಳಗ ಯಾರೂ ಇಲ್ಲ. ಆದರ ಈ ಗಾಂಧೀಜಿಯವರ ವೈಶಿಷ್ಟ್ಯ ಏನು ಅಂದರ ಇವರು ಪಾಪ ಮಾಡಿದ್ದಕ್ಕ ಪಶ್ಚಾತ್ತಾಪ ಪಡ್ತಾರ, ಹಳೆ ಪಾಪಗಳನ್ನ ಕೊಳೆಸಿಕೋತ ಪುಣ್ಯದ ಬೆಳೆ ಬೆಳಿತಾರ, ಅದನ್ನ ಎಲ್ಲರ ಕೂಡ ಹಂಚಿಕೊಂಡು ಉಣ್ಣುವ ದೇವಗಣದವರು ಈ ಗಾಂಧಿ [ಕರತಾಡನ ಜೈಕಾರ] ಹೌದು, ಇಂಥವರನ್ನ ಹೋಗ್ತಿನಿ ಅಂದ ಕೂಡಲೇ ಬಿಟ್ಟುಕೊಡಾಕ ಯಾರಿಗೆ ಮನಸ್ಸಾಗ್ತದ! ನಂಗೂ ಆಗೂದಿಲ್ಲ, ಆದರ ಈಗ ಅವರು ಹೊರಡೋದು ಅನಿವಾರ್ಯ ಅದ, ಹಡಗು ತಯ್ಯಾರಾಗಿ ನಿಂತದ, ಅದಕ್ಕ ಅವರಿಗೆ ನನ್ನ ವಿನಂತಿ ಏನು ಅಂದ್ರ ಒಂದು ವರ್ಷದ ಒಳಗೆ ಅವರು ಮತ್ತ ಇಲ್ಲಿಗೆ ಬರಬೇಕು, ನಮ್ಮೆಲ್ಲರ ಹೋರಾಟದ ಸೂತ್ರ ತಮ್ಮ ಕೈಯ್ಯೊಳಗ ತೊಗೋಬೇಕು.

ಧ್ವನಿಗಳು ಹೌದು– ಹೌದು– ಗಾಂಧೀಜಿ ಮತ್ತೆ ಬರಬೇಕು........

ಮನಸುಖಲಾಲ ದಾದಾ ಅಬ್ದುಲ್ಲಾ ಅವರ ಹೃದಯಾಂತರಾಳದ ಮಾತುಗಳು ಅವರವು ಮಾತ್ರ ಅಲ್ಲ, ಅವು ನಮ್ಮೆಲ್ಲರ ಹೃದಯದ ಧ್ವನಿಯಾಗಿದ್ದವು. ಕರುಣಾಳು ಗಾಂಧೀಜಿ ನಮ್ಮನ್ನೆಲ್ಲ ನಿರಾಶೆ ಮಾಡೋದಿಲ್ಲ ಅಂತ ಭಾವಿಸಿದೀನಿ. ಈಗ ಹಡಗು ಹೊರಡೋ ಸಮಯ– ತಾವೆಲ್ಲ ಅವರಿಗೆ ಅರ್ಪಿಸಬೇಕು ಅಂತ ತಂದಿರೊ ಹೂ ಹಾರ, ಫಲ ಹಾಗೂ ಕಾಣಿಕೆಗಳನ್ನ ರುಸ್ತುಮ್‌ಜಿ ಹಾಗೂ ಆದಮ್‌ಜಿ ಅವರಿಗೆ ಕೊಡಬೇಕು ಅಂತ ವಿನಂತಿ.
ಈಗ ಗಾಂಧೀಜಿ ಮನದಾಳದ ಮಾತುಗಳನ್ನ ಹಂಚಿಕೋಬೇಕು ಅಂತ ವಿನಂತಿಸ್ತೇನೆ [ಕರತಾಡನ]

ಗಾಂಧಿ ಜೈ ಶ್ರೀರಾಮ್. ಬಂಧುಗಳೆ, ನಿಮ್ಮ ಶಾಂತೀನೆ ನನ್ನ ಶಕ್ತಿ, ತಾವೆಲ್ಲ ಶಾಂತರಾಗಿ ಸಹಕರಿಸಿದರ ನಾನು ಒಂದೆರಡು ಮಾತು ಹೇಳ್ತೀನಿ....[ಶಾಂತಿ ನೆಲೆಸಿದ ನಂತರ] ಧನ್ಯವಾದ ಎಲ್ಲರಿಗೂ, ಜನನಿ ಜನ್ಮಭೂಮಿಶ್ಚ ಸ್ವರ್ಗಾದಪೀ ಗರೀಯಸಿ. ಮಿತ್ರರೆ, ತಾಯಿ ಹಾಗೂ ತಾಯಿನಾಡು ಸ್ವರ್ಗಸಮಾನ ಅಂತ ಭಾವಿಸಿದವರು ನಾವು, ಇದಕ್ಕ ನಾನೂ ಹೊರತಲ್ಲ. ತಾಯಿನಾಡಿಗೆ ಹೊರಡ್ತಾ ಅದೀನಿ ಅನ್ನೊ ಸಂತೋಷ ಒಂದು ಕಡೆ ಇದ್ದರ ನಿಮ್ಮನ್ನೆಲ್ಲ ಅಗಲಿ ಹೋಗ್ತಾ ಇದ್ದೀವಿ ಅನ್ನೋ ನೋವು ಇನ್ನೊಂದು ಕಡೆ, ಈ ಪ್ರೀತಿ ಹೀಗೇ, ಇದು ಎರಡು ಮುಖದ ಖಡ್ಗ. ನಾವೆಲ್ಲ ಭಾರತ ಅನ್ನೊ ಭವ್ಯ ವೃಕ್ಷದ ಟಿಸಿಲು, ಎಲೆ, ಹೂ ಕಾಯಿ ಹಣ್ಣುಗಳು. ಅದಕ್ಕಾಗಿ ಈ ವೃಕ್ಷ ಹಸಿರಿರೋತನಕ ನಮಗ ಉಸಿರಿರ್ತದ ಅನ್ನೊ ಸತ್ಯಾನ್ನ ನಾವೆಲ್ಲ ತಿಳಿಬೇಕು. ಭಾರತ ಸ್ವಾತಂತ್ರ್ಯದೊಳಗ, ನಮ್ಮೆಲ್ಲರ ಸ್ವಾತಂತ್ರ್ಯದ ಬೀಜ ಅದ ಅಂತ ಭಾವಿಸಿಕೋಬೇಕು. ಕೆಲವು ವರ್ಷಗಳ ಹಿಂದೆ ನಾನು ಈ ದೇಶಕ್ಕೆ ಬರೋದಕಿಂತ ಮುಂಚೆ ಯಾರೊ ಆಗಿದ್ದ ನಾವು ಇವತ್ತು ಒಬ್ಬರನ್ನೊಬ್ಬರು ಬಿಟ್ಟುಕೊಡ್ಲಿಕ್ಕೆ ತಯ್ಯಾರಿಲ್ಲ ಅಂದರ ಏನರ್ಥ? ನಮ್ಮ ಪ್ರೀತಿ ನಿಷ್ಕಲ್ಮಷವಾದದ್ದು ಅಂತ. ಇಂಥ ಪ್ರೀತಿ ಅಂತ್ಯವಿಲ್ಲದ್ದು. ಇಲ್ಲಿಗೆ ಬರೋವಾಗ ನಾನು ಬರಿಗೈಯಿಂದ ಬಡವನಾಗಿ ಹೊಟ್ಟೆ ಹೊರೆಯಲಿಕ್ಕೆ ಬಂದಿದ್ದೆ. ಈಗ ನಿಮ್ಮೆಲ್ಲರ ಪ್ರೀತಿಯ ಶೇವಣಿ ಪಡೆದುಕೊಂಡು ನಾನು ಸಿರಿವಂತನಾಗಿ ಹೋಗತಾ ಇದ್ದೀನಿ, ಇಲ್ಲೀತನಕ ನಾನು ಏನೆಲ್ಲ ಮಾಡಿದೆ ಅಂತ ದಾದಾ ಅಬ್ದುಲ್ಲಾರವರು ಹೇಳಿದರಲ್ಲ ಅದೆಲ್ಲ ನಾನು ಮಾಡಿದ್ದಲ್ಲ, 'ನಾನಾನೆಂಬುದು ನಾನಲ್ಲ, ನನ್ನದು ಎಂಬುವುದೇನಿಲ್ಲ' ಅನ್ನುವ ದಾರ್ಶನಿಕರ ನುಡಿ ಬೆಳಕಿನೊಳಗ ಬದುಕಬೇಕು ಅನ್ನೋ ಬಯಕೆ ನಂದು. ಇಲ್ಲಿರೊತನಕ ಏನು ಮಾಡಿದ್‌ನೊ, ಅದೇ ಸತ್ಯ ಪ್ರತಿಪಾದನೆಯ ಸಂಕಟವನ್ನ ಉಡಿಯಲ್ಲಿ ಕಟ್ಟಿಕೊಂಡೇ ಭಾರತಕ್ಕೆ ಹೋಗ್‌ತಾ ಇದ್ದೀನಿ. ನಾನು ಖಂಡಿತವಾಗಿಯೂ ನಿಮ್ಮಿಂದ ಬೇರ್ಪಟ್ಟು ನಿರ್ಗಮಿಸ್ತಾ ಇಲ್ಲ, ಭಾರತದ ಸ್ವತಂತ್ರ ಅಸ್ತಿತ್ವಕ್ಕೆ ನಿಮ್ಮೆಲ್ಲರ ಶಕ್ತಿಯನ್ನು ಆವಾಹಿಸಿಕೊಂಡು ಭಾರತದಲ್ಲಿ ನಮ್ಮ ಹೋರಾಟವನ್ನ ಮುಂದುವರೆಸಲು ಹೋಗ್‌ತ್ತಿದ್ದೇನೆ. –ನಿಮ್ಮೆಲ್ಲರ ಪ್ರೀತಿ

ಆರ್ಶೀವಾದ ಈ ಗಾಂಧಿಯ ಮೇಲಿರಲಿ.
ನೆರದವರೆಲ್ಲರೂ ಗಾಂಧೀಜಿ ಕಿ ಜೈ ಎಂದು ಜೈಕಾರ ಹಾಕಿದರು.

ನೀವು ನನಗೆ ನೀಡಿರುವ ಅಮೂಲ್ಯ ಕಾಣಿಕೆಗಳು. ಇವು ಇಲ್ಲಿ
ನಾವು ಸ್ಥಾಪಿಸಿರುವ ಟ್ರಸ್ಟಿನ ಆಸ್ತಿಯಾಗಿರಲಿ, ನಾನು
ಇಲ್ಲದಿರುವಾಗಲೂ ಎಂದಿನ ನಮ್ಮ ಹೋರಾಟ
ಮುಂದುವರೆಸಲು ರುಸ್ತುಮ್‌ಜಿ, ಮನಸುಖಲಾಲಜಿ, ಸೇಠ
ಆದಮ್‌ಜಿ, ಮತ್ತೆ ನೀವೆಲ್ಲ ಇದ್ದೀರಿ, ಹಾಗೆ ದಾದಾ
ಅಬ್ದುಲ್ಲಾರಂತವರ ಬೆಂಬಲ ಮತ್ತೆ ಆಶೀರ್ವಾದ ಇರ್ತದೆ.
ಬಿಳಿಯರು ಎಲ್ಲ ಕೆಟ್ಟವರಲ್ಲ, ಕರಿಯರು ಎಲ್ಲ ಒಳ್ಳೆಯವರಲ್ಲ,
ಮಿ. ಅಲೆಗ್ಸಾಂಡರ್, ಲೇಡಿ ಅಲೆಗ್ಸಾಂಡರ್,
ಮಿ ಲಾಟನ್, ಮಿ. ಚೇಂಬರಲೇನ್,
ಮಿ. ಎಸ್ಕೋಂಬ ಹೀಗೆ ಅದೆಷ್ಟುಜನ ಬಿಳಿಯರು ನಮ್ಮನ್ನು
ಪ್ರೀತಿಸಿಲ್ಲ! ಅವರೆಲ್ಲರ ಪ್ರೀತಿಯ ಅಡಿಪಾಯದ ಮೇಲೇಯೇ
ನಮ್ಮ ಹೋರಾಟದ ಸೇತುವೆ ನಿರ್ಮಾಣವಾಗಲಿ

ಗಾಂಧೀಜಿ ಕಿ ಜೈ....
ನೆರದವರೆಲ್ಲರು ಜೈಕಾರ ಹಾಕಿದರು.

ಹೋದಂತೆನಿಸಿದರೂ ಹೋಗಿಬಿಡುವವನಲ್ಲ ಈ ಗಾಂಧಿ, ಸದಾ
ನಿಮ್ಮೊಂದಿಗೆ ಇರುವ ಭರವಸೆಯೊಂದಿಗೆ ನಿಮ್ಮೆಲ್ಲರ ಪ್ರೀತಿ
ಹೊತ್ತುಕೊಂಡು ಹೊಗ್‌ತಿದ್ದೇನೆ. ನಗುನಗುತ್ತ ನಮ್ಮನ್ನು
ಬೀಳ್ಕೊಡಿ, ನಮಗೆ ಸ್ವಾತಂತ್ರ್ಯ ಬೇಗ ಸಿಗಲಿ ಅಂತ ಆಶೀರ್ವಾದ
ಮಾಡಿ [ಮತ್ತೆ ಜಯಕಾರ...... ಮೇಳದ ಪ್ರವೇಶ]

ಮೇಳ ದಕ್ಷಿಣಾಫ್ರಿಕ ದೇಶಕ್ಹೋಗಿ ಸಡ್ಡು ಹೊಡದಾರ
ಪರಂಗೇರ ಮೂಗ ಹಿಡಿದು ಹಕ್ಕ ಬೇಡ್ಯಾರ
ಕುಟಿಲ ಕಾರಸ್ಥಾನಕ ಚಳ್ಳ ಹಣ್ಣ ತಿನಿಸ್ಯಾರ
ಹಿಂದುಸ್ತಾನದೊಳಗ ಚಳುವಳಿ ಮುಂದುವರಿಸ್ಯಾರ

ಗಾಂಧಿ ಅಜ್ಜ ನಮ್ಮ ಅಜ್ಜ ಹೆಂತಾ ಸರದಾರ ಯುಗಕೊಮ್ಮೆ
ಹುಟ್ಟಿ ಬರತಾರಿಂಥಾ ಮಹಾತ್ಮರ..
[ನಿರ್ಗಮಿಸುತ್ತಿರುವರಂತೆ ಮೆಲ್ಲಗೆ ಕತ್ತಲು]

ಲೇಖಕರ ಪರಿಚಯ



ಬಿ.ಆರ್. ಪೋಲೀಸ್‌ಪಾಟೀಲ

ವಿಜಯಪುರ ಜಿಲ್ಲೆಯ ತಾಳೀಕೋಟೆ ತಾಲ್ಲೂಕಿನ ಕೊಣ್ಣೂರಿನಲ್ಲಿ 1950, ಜೂನ್ 1ನೇ ತಾರೀಖಿನಂದು ಬಿ.ಆರ್. ಪೋಲೀಸ್‌ಪಾಟೀಲರು ಜನಿಸಿದರು. ಇಂಗ್ಲೀಷಿನಲ್ಲಿ ಎಂ.ಎ. ಪದವಿ ಪಡೆದು, ಉಪನ್ಯಾಸಕರಾಗಿ, ಪ್ರಾಚಾರ್ಯರಾಗಿ ಮೂರೂವರೆ ದಶಕ ಸೇವೆಸಲ್ಲಿಸಿದ್ದಾರೆ. ಇವರ ಆಸಕ್ತಿಗಳು, ಹವ್ಯಾಸಗಳಿಂದಾಗಿ ಹಲವು. ಕತೆ, ಕಾದಂಬರಿ, ನಾಟಕ, ಲಾವಣಿ, ತತ್ತ್ವಪದ, ಗಜಲ್, ಶಾಯರಿ, ವಚನ, ಚಿಂತನ, ಮಕ್ಕಳಸಾಹಿತ್ಯ ಹೀಗೆ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ನೂರಾರು ಕೃತಿ ರಚಿಸಿದ್ದಾರೆ. ಜಾನಪದ ಹಾಗೂ ಹವ್ಯಾಸಿ ರಂಗಭೂಮಿಯ ದೃಷ್ಟಾರರು. ನೂರು ನಾಟಕಗಳನ್ನು ರಚಿಸಿ ರಂಗ ಪ್ರಯೋಗಗಳನ್ನು ಮಾಡಿದ್ದಾರೆ. ಅರವತ್ತೆರಡು ನಾಟಕಗಳು ಬಾನುಲಿಯಲ್ಲಿ ಮತ್ತು ದೂರದರ್ಶನದಲ್ಲಿಯೂ ಪ್ರಸಾರವಾಗಿವೆ. ಹತ್ತಾರು ಬೀದಿ ನಾಟಕಗಳನ್ನು ರಚಿಸಿ ತಂಡ ಕಟ್ಟಿಕೊಂಡು ಸ್ವಂತ ಖರ್ಚಿನಲ್ಲಿ ರಾಜ್ಯಾದ್ಯಂತ ಸಾವಿರಾರು ಪ್ರಯೋಗಗಳನ್ನು ನೀಡಿ ಜನಜಾಗೃತಿ ಮೂಡಿಸುತ್ತಿದ್ದಾರೆ.

ನಶಿಸಿ ಹೋಗುತ್ತಿರುವ ಜನಪದ ಕಲೆಗಳಾದ ಲಾವಣಿ, ತತ್ವಪದಗಳನ್ನು ರಚಿಸಿ, ತಂಡ ಕಟ್ಟಿ ಪ್ರಯೋಗ ಮಾಡಿದ್ದಾರೆ ಹಾಗೂ ಸಂಶೋಧನಾತ್ಮಕ ಲೇಖನ ಬರೆದಿದ್ದಾರೆ. ದೊಡ್ಡಾಟ, ಶ್ರೀಕೃಷ್ಣಪಾರಿಜಾತ ಕೃತಿ ರಚನೆಮಾಡಿ, ತಂಡ ಕಟ್ಟಿ ಪ್ರಯೋಗಿಸುತ್ತಿದ್ದಾರೆ. ರಾಷ್ಟ್ರೀಯ, ಅಂತಾರಾಷ್ಟ್ರೀಯ ವಿಚಾರಗೋಷ್ಠಿಗಳಲ್ಲಿ ಕನ್ನಡ, ಇಂಗ್ಲೀಷ್ ಭಾಷೆಗಳಲ್ಲಿ ಪ್ರಬಂಧ ಮಂಡಿಸಿದ್ದಾರೆ. 1985ರಲ್ಲಿ ಅವರ ಮನೆ 'ವಾತ್ಸಲ್ಯ'ದ ಪ್ರವೇಶವನ್ನು ಕೃತಿ ಬಿಡುಗಡೆ ಹಾಗೂ ಕವಿಗೋಷ್ಠಿಯ ಮೂಲಕ ಮಾಡಿ ಅಂದಿನಿಂದ 'ವಾತ್ಸಲ್ಯ ವಿಚಾರ ವೇದಿಕೆ' ಎಂಬ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ವೇದಿಕೆ ಸ್ಥಾಪಿಸಿ ನಿರಂತರ 13 ವರ್ಷಗಳಿಂದ ಸಾಹಿತ್ಯ ಚಟುವಟಿಕೆಗಳನ್ನು ನಡೆಸುತ್ತಲೇ ಇದ್ದಾರೆ. ನಾಟಕಗಳನ್ನು ರಾಜ್ಯದ ಎಲ್ಲೆಡೆ ಪ್ರಯೋಗಿಸಿದ್ದಾರೆ. ಇವರಿಗೆ 2010ರ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯಲ್ಲದೆ, ರಾಷ್ಟ್ರ ಹಾಗೂ ರಾಜ್ಯ ಮಟ್ಟದ 50 ಪ್ರಶಸ್ತಿಗಳು ಪ್ರದಾನಮಾಡಲ್ಪಟ್ಟಿವೆ. ನಿತ್ಯ ನಿರಂತರ ಕ್ರಿಯಾಶೀಲರಾಗಿರುವ ಬಿ.ಆರ್. ಪೋಲೀಸ್‌ಪಾಟೀಲರ ಸೇವೆ ಅನುಕರಣೀಯವಾದುದು.

ಗಾಂಧೀಜಿ ಅವರ ಜೀವನ ಘಟನಾವಳಿಗಳು

ಪೋರಬಂದರದಲ್ಲಿ ಜನನ	2.10.1869
ಕಸ್ತೂರ್‌ಬಾರೊಂದಿಗೆ ವಿವಾಹ	1883
ಮೆಟ್ರಿಕ್ಯುಲೇಶನ್ ಉತ್ತೀರ್ಣರಾದದ್ದು	1887
ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಪ್ರಯಾಣ	1888
ಬ್ಯಾರಿಸ್ಟರರಾಗಿ ದಾಖಲಾತಿ	1891
ಮರಳಿ ಭಾರತಕ್ಕೆ ಬೊಂಬಾಯಿ,	
ರಾಜ್‌ಕೋಟೆಯಲ್ಲಿ ವಕೀಲಿ ವೃತ್ತಿ	1891
ದಕ್ಷಿಣ ಆಫ್ರಿಕಾಕ್ಕೆ ಹಡಗಿನಲ್ಲಿ ಪ್ರಯಾಣ	1893
ಭಾರತಕ್ಕೆ ಮರಳಿ ಬಂದು	
ಅದೇ ವರ್ಷ ಮರಳಿ ಆಫ್ರಿಕಾಗೆ ತೆರಳಿದರು	1896
ಬೋರ್ ಯುದ್ಧ ಮತ್ತು ಜೂಲು ದಂಗೆಯಲ್ಲಿ	
ಇಂಡಿಯನ್ ಅಂಬುಲೆನ್ಸ್ ಕೋರ್ ನೇತೃತ್ವ	1899
	ಮತ್ತು 1906
ಭಾರತಕ್ಕೆ ವಾಪಸ್ಸು	1901
ಭಾರತದಲ್ಲಿ ವ್ಯಾಪಕವಾದ ಪ್ರವಾಸ, ಕಲ್ಕತ್ತದಲ್ಲಿ	
ಭಾರತ ರಾಷ್ಟ್ರೀಯ ಕಾಂಗ್ರೆಸ್ ಸಭೆಯಲ್ಲಿ	
ಪಾಲ್ಗೊಂಡಿದ್ದು, ಬೊಂಬಾಯಿಲ್ಲಿ	
ಲಾಯರ್ ಆಫೀಸ್ ಪ್ರಾರಂಭ	1901
ಭಾರತೀಯರ ಕೋರಿಕೆಯಂತೆ	
ದಕ್ಷಿಣ ಆಫ್ರಿಕಾಕ್ಕೆ ಪ್ರಯಾಣ	1902
ಟ್ರಾನ್ಸ್‌ವಾಲ್ ಬ್ರಿಟಿಷ್	
ಇಂಡಿಯಾ ಅಸೋಸಿಯೇಷನ್	1903
ಇಂಡಿಯನ್ ಒಪಿನಿಯನ್ ಪತ್ರಿಕೆಯ ಪ್ರಾರಂಭ	1904
ಫೀನಿಕ್ಸ್ ಆಶ್ರಮ ಸ್ಥಾಪನೆ	1904

ಸೆಪ್ಟಂಬರ್ ವೀರಾಗಾಂನಲ್ಲಿ ಸಮುದ್ರ ಪ್ರಯಾಣಿಕರ ಶೋಷಣೆಯ ವಿರುದ್ಧ ಸತ್ಯಾಗ್ರಹ ಮಾಡುವ ಬೆದರಿಕೆ	1905
ಟ್ರಾನ್ಸ್‌ವಾಲ್‌ನ ಭಾರತೀಯ ವಲಸೆಗಾರರ ಮೇಲೆ ಪ್ರಯೋಗಿಸಲಾಗುವ "ಏಸಿಯಾಟಿಕ್ ಆರ್ಡಿನೆನ್ಸ್ ವಿರುದ್ಧ ಚಳುವಳಿ	1906
ಬ್ರಹ್ಮಚರ್ಯ ವ್ರತ ಸ್ವೀಕಾರ	1906
ಇಂಗ್ಲೆಂಡಿಗೆ ಪ್ರಯಾಣ	1906
ಜೂನ್, ಸತ್ಯಾಗ್ರಹ ಏಷಿಯನ್ನರ ಬಲತ್ಕಾರದ ನೋಂದಾವಣೆ (ಕರಾಳ ಕಾನೂನು) ವಿರುದ್ಧ ಸತ್ಯಾಗ್ರಹ	1907
ಸತ್ಯಾಗ್ರಹ ನಡೆಸಿದ್ದಕ್ಕೆ ದಕ್ಷಿಣ ಆಫ್ರಿಕಾದ ಜೋಹನ್ಸ್‌ಬರ್ಗ್‌ನಲ್ಲಿ ಪ್ರಥಮ ಜೈಲುವಾಸ	1908
ಇಂಗ್ಲೆಂಡಿಗೆ ಪ್ರಯಾಣ, ಭಾರತೀಯ ವಲಸೆಗಾರರ ಪರವಾದಗಳು, ಸ್ತ್ರೀ ಸ್ವಾತಂತ್ರ್ಯ ಹೋರಾಟ ಪರಿಶೀಲನೆ	1909
ಮೇ ಜೋಹಾನ್ಸ್‌ಬರ್ಗ್‌ನಲ್ಲಿ ಟಾಲ್‌ಸ್ಟಾಯ್ ಫಾರ್ಮ್ ಸ್ಥಾಪನೆ	1910
ದಕ್ಷಿಣ ಆಫ್ರಿಕಾದಲ್ಲಿ ಚಾರಿತ್ರಿಕ ಸತ್ಯಾಗ್ರಹ ಆರಂಭ	1913
ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಆಗಮನ	1914
ಮೇ ಅಹಮದಾಬಾದ್ ಬಳಿ ಸತ್ಯಾಗ್ರಹ ಆಶ್ರಮ ಸ್ಥಾಪನೆ	1915
ಸಬರಮತಿ ಆಶ್ರಮ ಸ್ಥಾಪನೆ	1917
ಫೆಬ್ರವರಿ ಅಹಮದಾಬಾದ್ ಮಿಲ್ ಕೂಲಿಗಾರರ ಪರ ಹೋರಾಟ, ಮೂರು ದಿನ ಉಪವಾಸ ಸತ್ಯಾಗ್ರಹ, ಭಾರತದಲ್ಲಿ ಇದೇ ಮೊದಲ ಉಪವಾಸ ಖೇಡಾದಲ್ಲಿ ಕರನಿರಾಕರಣೆ ಚಳುವಳಿ	1918
ಜಲಿಯನ್ ವಾಲಾಬಾಗ್ ಹತ್ಯಾಕಾಂಡ ವಿರೋಧಿಸಿ ಏಪ್ರಿಲ್ 13-14ರಂದು ಉಪವಾಸ	1919
ಯಂಗ್ ಇಂಡಿಯಾ ಮತ್ತು ನವಜೀವನ ಪತ್ರಿಕೆಗಳ ಆರಂಭ	1919

ಅಸಹಕಾರ ಚಳುವಳಿ, ಖಿಲಾಫತ್ ಚಳುವಳಿ	
ಅಖಿಲ ಭಾರತ ಹೋಂರೂಲ್ ಲೀಗ್ ಅಧ್ಯಕ್ಷತೆ	1920
ಖಾದಿಯ ಪಂಚೆ ಉಡುವ ನಿರ್ಧಾರ ಮತ್ತು	
ತುಂಡು ಉಡುಗೆ ಪ್ರಚಾರ ಆರಂಭ	1921
ಚೌರಿಚೌರಾ ಹತ್ಯಾಕಾಂಡ, ಅಸಹಕಾರ ಸತ್ಯಾಗ್ರಹ	
ನಿಲುಗಡೆ, ಬಾರ್ದೋಲಿಯಲ್ಲಿ ಐದು ದಿನದ	
ಉಪವಾಸ, ಯಂಗ್ ಇಂಡಿಯಾ	
ಲೇಖನಗಳಿಗಾಗಿ ರಾಜದ್ರೋಹದ ಆಪಾದನೆ	
ಮೇಲೆ ದಸ್ತಗಿರಿ ಭಾರತದಲ್ಲಿ ಪ್ರಥಮ ಜೈಲುವಾಸ	1922
ಫೆಬ್ರವರಿ ಯರವಾಡಾ ಜೈಲಿನಿಂದ ಬಿಡುಗಡೆ	1924
ಹಿಂದೂ ಮುಸ್ಲಿಂ ಏಕತೆಗಾಗಿ 21 ದಿನ ಉಪವಾಸ	1924
ಬೆಳಗಾವಿ ಕಾಂಗ್ರೆಸ್ ಅಧಿವೇಶನ	1924
ಚರಖಾ ಸಂಘದ ಸ್ಥಾಪನೆ	1925
ಬಾರ್ದೋಲಿ ಸತ್ಯಾಗ್ರಹ ಅನ್ಯಾಯದ ತೆರಿಗೆ ವಿರುದ್ಧ	1928
ಮೂರನೇ ಅಖಿಲ ಭಾರತ ಸತ್ಯಾಗ್ರಹ	
ಜನವರಿ 26 ರಾಷ್ಟ್ರದಿನವೆಂದು ಸೂಚನೆ	
ಉಪ್ಪಿನ ಸತ್ಯಾಗ್ರಹ ಮತ್ತು ದಂಡೀಯಾತ್ರೆ	1930
ಯೂರೋಪು ಸಂದರ್ಶನ ಮತ್ತು	
ದುಂಡು ಮೇಜಿನ ಪರಿಷತ್ತು ವಿಫಲ	1931
ಹರಿಜನರಿಗೆ ಪ್ರತ್ಯೇಕ ಚುನಾವಣೆಗಳನ್ನು	
ಏರ್ಪಡಿಸುವ ಬ್ರಿಟಿಷ್ ಯೋಜನೆಗಳನ್ನು	
ವಿರೋಧಿಸಿ ಉಪವಾಸ ಸತ್ಯಾಗ್ರಹ	
ಹರಿಜನ ವಾರ ಪತ್ರಿಕೆ ಆರಂಭ	
ಸೇವಾಗ್ರಾಮ ಆಶ್ರಮ ಸ್ಥಾಪನೆ	1933
ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆ, ಮೂರು ಸಲ	
ಗಾಂಧೀಜಿಯ ಕೊಲೆಯ ಪ್ರಯತ್ನಗಳು	
ಅಖಿಲ ಭಾರತ ಗ್ರಾಮೋದ್ಯೋಗ ಸಂಘ ಆರಂಭ	1934
ವಾರ್ಧಾ ಸಮೀಪ ಸೇವಾಗ್ರಾಮ ಆಶ್ರಮ ಆರಂಭ	1936
ನಯೀ ತಾಲೀಂ ಶಿಕ್ಷಣ ಪದ್ಧತಿ ಪ್ರಾರಂಭ	1937
"ಭಾರತ ಬಿಟ್ಟು ತೊಲಗಿ" ಚಳವಳಿ	1942
21 ದಿನಗಳ ಉಪವಾಸ ಸತ್ಯಾಗ್ರಹ ಆರಂಭ	1943

ಫೆ. 22 ಕಸ್ತೂರಬಾ ಮರಣ, 23ರಂದು	
ಅಗಾಖಾನ್ ಅರಮನೆ ಆವರಣದಲ್ಲಿ ದಹನ	1944
ಕೊನೆಯ ಬಾರಿಗೆ ಆಗಾಖಾನ್	
ಅರಮನೆಯಲ್ಲಿ ಸೆರೆವಾಸ	
ಕ್ಯಾಬಿನೆಟ್ ಮಿಷನ್, ಶಿಮ್ಲಾ ಸಮ್ಮೇಳನ	1945
ಕ್ಯಾಬಿನೆಟ್ ಅಂಗೀಕಾರ, ನೌಖಾಲಿ ಶಾಂತಿ	
ಪಾದಯಾತ್ರೆ	1946
ಭಾರತಕ್ಕೆ ಸ್ವಾತಂತ್ರ್ಯ ಮತ್ತು ದೇಶ ವಿಭಜನೆ	1947
ದೆಹಲಿಯಲ್ಲಿ ಕೋಮುವಾರು ಸೌಹಾರ್ದಕ್ಕಾಗಿ	
ಕೊನೆಯ ಉಪವಾಸ	1948
ಹಂತಕನ ಗುಂಡೇಟಿಗೆ ಬಲಿ	30–1–1948
ರಾಜ್‌ಘಾಟಲ್ಲಿ ದಹನ	31–1–1948

ಕಸ್ತೂರ್‌ಬಾ ಅವರ ಜೀವನ ಘಟನಾವಳಿಗಳು

ಪೋರಬಂದರದಲ್ಲಿ ಜನನ	11.04.1869
ಗಾಂಧಿ ಅವರೊಡನೆ ವಿವಾಹ	1888
ದಕ್ಷಿಣ ಆಫ್ರಿಕಾಕ್ಕೆ ಹಡಗಿನಲ್ಲಿ ಪ್ರಯಾಣ	1896
ಗಾಂಧಿ ಅವರ ಮೇಲೆ ಆಕ್ರಮಣ ಖಂಡನೆ	1897
ಜೋಹನ್ಸ್‌ಬರ್ಗ್‌ನಲ್ಲಿ ಪ್ಲೇಗ್ ಪೀಡಿತರ ಸೇವೆ	1904
ಜೋಹನ್ಸ್‌ಬರ್ಗ್‌ನಲ್ಲಿ ಭಾರತೀಯ ಮಹಿಳೆಯರಿಗೆ ಸಂದೇಶ	1909
ಗುಜರಾತಿನ ಕೊಚಬರ್ಾದಲ್ಲಿ ಆಶ್ರಮ ಸ್ಥಾಪನೆ	25.05.1915
ಗಾಂಧೀಜಿ ಅವರೊಡನೆ ಭಾರತದಾದ್ಯಂತ ಪ್ರವಾಸ	1916
ಗಾಂಧೀಜಿ ಅವರೊಡನೆ ಚಂಪಾರಣ್ಯ ಚಳುವಳಿಯಲ್ಲಿ ಭಾಗಿ	1917
ಸಾಬರಮತಿ ಆಶ್ರಮದ ನಿರ್ವಹಣೆಯ ಜವಾಬ್ದಾರೆ	1920
ಗಾಂಧೀಜಿ ಅವರೊಡನೆ ವಿದೇಶಿ ವಸ್ತ್ರಗಳ ನಾಶ	1921
ವಿದೇಶಿ ವಸ್ತ್ರ ಬಹಿಷ್ಕಾರ ಮತ್ತು ನೂಲು ನೇಯಲು ಕರೆ	23.03.1922
ಅಸಹಕಾರ ಚಳುವಳಿಯಲ್ಲಿ ಭಾಗಿ	1930
ಭಾರತೀಯ ಮಹಿಳೆಯರಿಂದ ಕಸ್ತೂರ್‌ಬಾಗೆ ಹಣ ನೀಡಿಕೆ	1931
ಅಸಹಕಾರ ಚಳುವಳಿಗಾಗಿ 6 ವಾರಗಳ ಸೆರೆಮನೆ ವಾಸ	1932
ಬ್ರಿಟಿಷರಿಂದ ಬಂಧನ ಮತ್ತೆ ಸೆರೆವಾಸ	1933
ಸಾಬರಮತಿ ಆಶ್ರಮ ಮುತ್ತಿಗೆ	1933
ಗಾಂಧಿಯವರೊಡನೆ ಪೂನಾದ ಮುನಿಸಿಪಲ್ ಹಾಲ್‌ಗೆ ಕಾರಿನಲ್ಲಿ ಪ್ರಯಾಣಿಸುತ್ತಿದ್ದಾಗ ನಾಡಬಾಂಬ್ ಎಸೆತ	1934

ಸೇವಾಗ್ರಾಮ ಆಶ್ರಮ ಸ್ಥಾಪನೆ	1936
ರಾಜ್‌ಕೊಟ್‌ನಲ್ಲಿ ಠಾಕೂರ ದಬ್ಬಾಳಿಕೆ ವಿರುದ್ಧ	
ಮಹಿಳಾ ಹೋರಾಟಗಾರರಿಗೆ ನೆರವು	1939
ಬಂಧನ, ಕತ್ತಲ ಜೈಲಿನಲ್ಲಿ ಸೆರೆಮನೆವಾಸ	03.02.1939
ಕಸ್ತೂರ್‌ಬಾ ಕುರಿತು ಹರಿಜನ ಪತ್ರಿಕೆಯಲ್ಲಿ	
ಗಾಂಧೀಜಿ ಅವರ ಲೇಖನ ಪ್ರಕಟ	06.02.1939
ಕಾಂಗ್ರೇಸ್ ಅಧಿವೇಶನಕ್ಕೆ ಗಾಂಧೀಜಿ	
ಅವರೊಡನೆ ಮುಂಬೈಗೆ ಪಯಣ	1942
ಶಿವಾಜಿ ಪಾರ್ಕ್‌ನಲ್ಲಿ ಬೃಹತ್ ಸಾರ್ವಜನಿಕ	
ಸಮಾವೇಶದಲ್ಲಿ ಮಾಡಿದ ಭಾಷಣಕ್ಕೆ ಬಂಧನ	09.08.1942
ಸೆರೆಮನೆಯಲ್ಲಿ 2 ಬಾರಿ ಹೃದಯಾಘಾತ	1944
ಸೆರೆಮನೆಯಲ್ಲಿ ತಮ್ಮ 74ನೇ ವಯಸ್ಸಿನಲ್ಲಿ ನಿಧನ	22.02.1944

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಪ್ರಕಟಣೆಗಳು

1.	ಆರೋಗ್ಯ ರಹಸ್ಯ	10–00
2.	ಕರ್ನಾಟಕದಲ್ಲಿ ಗಾಂಧೀ	5–00
3.	ರಾಮನಾಮ	6–00
4.	ಗಾಂಧೀ ಬಳಗದ ವಿದೇಶಿಯರು	40–00
5.	ಆರೋಗ್ಯ	8–00
6.	ಪ್ರಾರ್ಥನೆ	40–00
7.	ಸತ್ಯಾಗ್ರಹ	8–00
8.	ಮಹಿಳೆಯರಿಗಾಗಿ	8–00
9.	ಪಂಚಾಯತ್ ರಾಜ್	12–00
10.	ಆದರ್ಶಗಳು	12–00
11.	ನಮ್ಮ ಗಾಂಧೀ ತಾತ	22–00
12.	ದೇವನಗರಿಯಲ್ಲಿ ಗಾಂಧೀ ಧ್ವನಿ	2–00
13.	ನಮ್ಮ ಗಾಂಧೀ ತಾತ	15–00
14.	ಹೋರಾಟ ಶ್ರೀ	40–00
15.	ಮಹಾತ್ಮ ಗಾಂಧೀಜಿ ಅವರ ಜೀವನ ಮೈಲಿಗಲ್ಲುಗಳು	3–00
16.	ಗಾಂಧೀಜಿ ಜೀವನ ಚರಿತ್ರೆ	25–00
17.	ಕುವೆಂಪು ಕಂಡ ಗಾಂಧೀ	25–00
18.	ಉಪ್ಪಿನ ಸತ್ಯಾಗ್ರಹ	5–00
19.	ಹಿಂದ್ ಸ್ವರಾಜ್	50–00
20.	ಗಾಂಧೀ ಮತ್ತು ಆಧ್ಯಾತ್ಮಿಕ ಜೀವನ	25–00
21.	ನನ್ನ ಕನಸಿನ ಭಾರತ	30–00
22.	ಹಿಂದೂ ಧರ್ಮ	25–00
23.	ಮಹಿಳೆಯರು	63–00
24.	ಸ್ವಾತಂತ್ರ್ಯ	42–00
25.	ಅಸ್ಪೃಶ್ಯತೆ	45–00
26.	ಒಳ್ಳೆಯ ಜೀವನ	60–00
27.	ಗಾಂಧೀ ಮತ್ತು ಕರ್ನಾಟಕ	200–00
28.	ಸತ್ಯ	38–00

29.	ವಿದ್ಯಾರ್ಥಿಗಳಿಗಾಗಿ	30-00
30.	ಸರ್ವೋದಯ	30-00
31.	ಖಾದಿ ಗ್ರಾಮೋದ್ಯೋಗ	58-00
32.	ನನ್ನ ಬಾಲ್ಯದ ನೆನಪುಗಳು	52-00
33.	ಗ್ರಾಮರಾಜ್ಯ ಆಡಳಿತ	5-00
34.	ನನ್ನ ಕನಸಿನ ಸ್ವರಾಜ್ಯ	42-00
35.	ಹಾಸ್ಯ ಮತ್ತು ಗಾಂಧೀ	44-00
36.	ನನ್ನ ಆದರ್ಶಗ್ರಾಮ	5-00
37.	ಮಹಾತ್ಮ ಗಾಂಧೀ ವಿಚಾರಗಳು ಹಾಗೂ ವ್ಯವಸ್ಥಾಪನ ಪದ್ಧತಿ	48-00
38.	ಸತ್ಯಾಗ್ರಹಿ	40-00
39.	ಗ್ರಾಮದಾನ ಗ್ರಾಮ ಸ್ವರಾಜ್ಯ	25-00
40.	ಗಾಂಧೀಜಿಯವರ ಪ್ರಾತ: ಸಾಯಂ ಪ್ರಾರ್ಥನೆ ಮತ್ತು ಭಜನೆ	
41.	ಉಪ್ಪಿನ ಸತ್ಯಾಗ್ರಹ ಮತ್ತು ಮೈಲಾರ ಮಹಾದೇವ	5-00
42.	ಸತ್ಯಾಗ್ರಹ	5-00
43.	ಹಿಂದ್ ಸ್ವರಾಜ್	5-00
44.	ಆರೋಗ್ಯ	5-00
45.	ಮಹಾತ್ಮ ಗಾಂಧಿ ಪ್ರಸ್ತುತತೆ	10-00
46.	ಬಹುರೂಪಿ ಗಾಂಧಿ	35-00
47.	ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧಿ	30-00
48.	ಕೃತಯುಗಿ ವಿನೋಬಾ ಭಾವೆ	15-00
49.	ಮೋಹನ ತರಂಗ	40-00
50.	ನಮ್ಮ ಗಾಂಧಿ ತಾತ	22-00
51.	ಗೀತಾ ಪ್ರವಚನ	80-00
52.	ಜೆ.ಪಿ. ಜೀವನ ಹಾದಿ	45-00
53.	ಗಣ್ಯರು ಕಂಡಂತೆ ಗಾಂಧಿ	20.0
54.	ಗೀತಾಮಾತೆ	80.00
55.	ಲೋಕ ಚಿಂತಕರು	145.00
56.	ಕರ್ನಾಟಕದ ಕಸ್ತೂರ್‌ಬಾ ಯಶೋಧರಮ್ಮ ದಾಸಪ್ಪ	38.00
57.	ಮಹದೇವ ದೇಸಾಯಿ	63.00
58.	ಸಮಾಜವಾದ : ಗಾಂಧೀ ದೃಷ್ಟಿಕೋನ	15.00
59.	ಮಹಾತ್ಮ ಗಾಂಧಿ ಮತ್ತು ಆಧ್ಯಾತ್ಮಿಕ ರಾಜಕಾರಣ	28.00

60.	ಗಾಂಧೀ ಬಳಗದ ವಿದೇಶಿಯರು	89.00
61.	ಮಹಾತ್ಮ ಗಾಂಧೀ ಮತ್ತು ಸ್ವಚ್ಛ ಭಾರತ	33.00
62.	ಮಹಾತ್ಮ ಗಂಧೀಜಿ ಅವರ ಶೈಕ್ಷಣಿಕ ಸಿದ್ಧಾಂತ	80.00
63.	ಹುಕ್ಕೇರಿಕರ ರಾಮರಾಯರು	110.00
64.	ಮಹಿಳೆಯರು	63.00
65.	ನನ್ನ ಬಾಲ್ಯದ ನೆನಪುಗಳು	52.00
66.	ನಯೀ ತಾಲೀಂ	58.00
67.	ಚರಕ ಸಂಹಿತೆ	68.00
68.	ಸ್ವಚ್ಛ ಭಾರತಿ	82.00
69.	ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧಿ	66.00
70.	ಗಾಂಧಿಯೊಳಗಿನ ಪತ್ರಕರ್ತ ಮರು ವೀಕ್ಷಣೆ	68.00
71.	ಅಂದಿಗೂ-ಇಂದಿಗೂ ಪ್ರಸ್ತುತ ಗಾಂಧೀಜಿ	94.00
72.	ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿ	92.00
73.	ಆಧ್ಯಾತ್ಮಿಕ ಸುಸ್ಥಿರತೆ	72.00
74.	Nayi Talim	58.00
75.	Temple & Mosque	10-00
76.	Rastrapita Mahatma Gandhi	25-00
77.	Swarajya of My Dreams	5-00
78.	Gandhi My Grand Father	5-00
79.	Grand Pa Gandhi	5-00
80.	Relevance of Gandhi	20-00
81.	Vinoba Sage of the Age	20.00
82.	Kasturba	33.00
83.	Mahatma Gandhi and his Foreign Associates	87.00

ಕರ್ನಾಟಕದಲ್ಲಿ ಗಾಂಧೀಜಿ ಭೇಟಿ ನೀಡಿದ ಸ್ಥಳಗಳು

● ಬೆಂಗಳೂರು	ದಿ. 08-05-1915
● ಬೆಳಗಾವಿ	ದಿ. 27-04-1916 ರಿಂದ ದಿ. 01-05-1916 ರವರೆಗೆ
● ಬಿಜಾಪುರ (ವಿಜಯಪುರ)	ದಿ. 05-05-1918 ರಿಂದ ದಿ. 06-05-1918 ರವರೆಗೆ
● ಕಾಸರಗೋಡು	ದಿ. 19-08-1920
● ಮಂಗಳೂರು	ದಿ. 20-08-1920
● ಬೆಂಗಳೂರು	ದಿ. 21-08-1920
● ನಿಪ್ಪಾಣಿ, ಚಿಕ್ಕೋಡಿ, ಹುಕ್ಕೇರಿ ಸಂಕೇಶ್ವರ, ಬೆಳಗಾವಿ	ದಿ. 08-11-1920
● ಬೆಳಗಾವಿ ಶಹಾಪುರ, ಖಾನಾಪುರ, ನಂದಗಢ, ಹಳ್ಯಾಳ	ದಿ. 09-11-1920
● ಧಾರವಾಡ	ದಿ. 10-11-1920
● ಹುಬ್ಬಳ್ಳಿ, ಗದಗ	ದಿ. 11-11-1920
● ಸಾಂಗಲಿ	ದಿ. 12-11-1920
● ಬಾಗಲಕೋಟೆ	ದಿ. 27-05-1921
● ಬಿಜಾಪುರ (ವಿಜಯಪುರ), ಸೊಲ್ಲಾಪುರ	ದಿ. 28-05-1921
● ಬಳ್ಳಾರಿ	ದಿ. 30-09-1921
● ಬೆಳಗಾವಿ	ದಿ. 21-12-1924 ರಿಂದ ದಿ. 30-12-1924 ರವರೆಗೆ
● ಗುಲ್ಬರ್ಗಾ	ದಿ. 22-02-1927 ರಿಂದ ದಿ. 23-02-1927 ರವರೆಗೆ
● ನಿಪ್ಪಾಣಿ	ದಿ. 27-03-1927 ರಿಂದ ದಿ. 31-03-1927 ರವರೆಗೆ
● ಬೆಳಗಾವಿ	ದಿ. 01-04-1927 ದಿ. 18-04-1027 ರಿಂದ ದಿ. 19-04-1927 ರವರೆಗೆ
● ಬೆಂಗಳೂರು	ದಿ. 06-06-1927 ರಿಂದ ದಿ. 13-07-1927 ರವರೆಗೆ

• ತುಮಕೂರು	ದಿ. 14-07-1927
• ತುಮಕೂರು, ಮಧುಗಿರಿ	ದಿ. 15-07-1927
• ತುಮಕೂರು	ದಿ. 16-07-1927
• ಬೆಂಗಳೂರು	ದಿ. 17-07-1927
• ಬೆಂಗಳೂರು	ದಿ. 18-07-1927
• ಮೈಸೂರು	ದಿ.19-07-1927 ರಿಂದ ದಿ. 21-07-1927 ರವರೆಗೆ
• ಕೃಷ್ಣರಾಜಸಾಗರ, ಯಡತೊರೆ ಶ್ರೀರಂಗಪಟ್ಟಣ, ದರಿಯಾದೌಲತ್	ದಿ. 21-07-1927
• ಮೈಸೂರು	ದಿ. 23-07-1927
• ಬೆಂಗಳೂರು	ದಿ. 24-07-1927 ರಿಂದ ದಿ. 30-07-1927 ರವರೆಗೆ
• ಕ್ಲೊಸ್‌ಪೇಟೆ (ರಾಮನಗರ) ಕಾನಕಾನಹಳ್ಳಿ (ಕನಕಪುರ)	ದಿ. 31-07-1927
• ಬೆಂಗಳೂರು	ದಿ. 01-08-1927
• ಅರಸೀಕರೆ, ಹಾಸನ	ದಿ. 02-08-1927
• ಹಾಸನ	ದಿ. 03-08-1927
• ಹಾಸನ, ಹೊಳೆನರಸೀಪುರ	ದಿ. 04-08-1927
• ಬೆಂಗಳೂರು	ದಿ. 05-08-1927 ರಿಂದ ದಿ. 11-08-1927 ರವರೆಗೆ
• ದಾವಣಗೆರೆ	ದಿ. 12-08-1927
• ಹರಿಹರ, ಹೊನ್ನಾಳಿ, ಮಲೆಬೆನ್ನೂರು	ದಿ. 13-08-1927
• ಶಿವಮೊಗ್ಗ	ದಿ. 14-08-1927 ರಿಂದ ದಿ. 15-08-1927 ರವರೆಗೆ
• ಆಯ್ಯನೂರು, ಕುಂಸಿ, ಸಾಗರ, ಶಿವಮೊಗ್ಗ	ದಿ. 16-08-1927
• ಶಿವಮೊಗ್ಗ, ತೀರ್ಥಹಳ್ಳಿ ಮಂದಗದ್ದೆ, ರಾಜನೂರು	ದಿ. 17-08-1927
• ಭದ್ರಾವತಿ, ತರೀಕೆರೆ ಬೀರೂರು, ಕಡೂರು	ದಿ. 18-08-1927
• ಚಿಕ್ಕಮಗಳೂರು	ದಿ. 19-08-1927
• ಬೇಲೂರು, ಹಳೇಬೀಡು, ಅರಸೀಕೆರೆ	ದಿ. 20-08-1927
• ತಿಪಟೂರು	ದಿ. 21-08-1927
• ಬೆಂಗಳೂರು	ದಿ. 22-08-1927
• ಬೆಂಗಳೂರು	ದಿ. 23-08-1927

• ಹೊಸೂರು, ಸೂಳಗಿರಿ, ಕೃಷ್ಣಗಿರಿ	ದಿ. 24-08-1927
• ಬೆಂಗಳೂರು	ದಿ. 25-08-1927 ರಿಂದ ದಿ. 30-08-1927 ರವರೆಗೆ
• ಹಿಂದೂಪುರ, ವಿಧುರಾಶ್ವತ್ಥ, ಗೌರಿಬಿದನೂರು, ದೊಡ್ಡಬಳ್ಳಾಪುರ, ತುಮಕೂರು, ತ್ಯಾಮಗೊಂಡ್ಲು ನೆಲಮಂಗಲ, ಬೆಂಗಳೂರು, ಮೈಸೂರು	ದಿ. 04-01-1934
• ತಗಡೂರು, ಬದನವಾಳ ನಂಜನಗೂಡು, ಮೈಸೂರು	ದಿ. 05-01-1934
• ಮಂಡ್ಯ, ಚನ್ನಪಟ್ಟಣ, ರಾಮನಗರ ಕನಕಪುರ, ಬಿಡದಿ, ಕೆಂಗೇರಿ	ದಿ. 06-01-1934
• ಬೆಂಗಳೂರು	ದಿ. 07-01-1934 ರಿಂದ ದಿ. 09-01-1934 ರವರೆಗೆ
• ಪೊನ್ನಂಪೇಟೆ, ಹುದಿಕೇರಿ	ದಿ. 22-02-1934
• ವಿರಾಜಪೇಟೆ, ಬೆಳ್ಳೂರು ಸೋಮವಾರ ಪೇಟೆ, ಗುಂಡುಕಟ್ಟೆ	ದಿ. 23-02-1934
• ಮಡಿಕೇರಿ, ಸಂಪಾಜೆ, ಸುಳ್ಯ ಪುತ್ತೂರು, ಉಪ್ಪಿನಂಗಡಿ, ವಿಠಲಗಬ್ಬ, ಕಲ್ಲಡ್ಕ, ಪಾಣೆ, ಮಂಗಳೂರು, ಬಂಟ್ವಾಳ, ಮಂಗಳೂರು	ದಿ. 24-02-1934
• ಮಂಗಳೂರು, ಗುರುಪುರ, ಬಜ್ಪೆ ಯಕ್ಕೂರು, ಕಟೀಲು, ಕಿನ್ನಗೋಳಿ, ಮೂಲ್ಕಿ, ಪಡುಬಿದ್ರಿ, ಕಟಪಾಡಿ, ಗುರುಪುರ, ಉದ್ಯಾವರ, ಉಡುಪಿ, ಬ್ರಹ್ಮಾವರ, ಸಿದ್ದಾಪುರ	ದಿ. 25-02-1934
• ಕುಂದಾಪುರ	ದಿ. 26-02-1934
• ಕುಂದಾಪುರ, ಭಟ್ಕಳ, ಹೊನ್ನಾವರ, ಕಾರವಾರ	ದಿ. 27-02-1934
• ಕಾರವಾರ, ಕುಮುಟಾ, ಅಂಕೋಲ ಚಂದಿಯಾ, ಶಿರಸಿ	ದಿ. 28-02-1934
• ಶಿರಸಿ, ಸಿದ್ದಾಪುರ, ದಾಸನಕೊಪ್ಪ, ಇಸಲೂರು, ಏಕಾಂಬಿ, ಆಲೂರು, ಬ್ಯಾಡಗಿ, ಮೋಟೆಬೆನ್ನೂರು	ದಿ. 01-03-1934
• ಹಾವೇರಿ, ರಾಣೆಬೆನ್ನೂರು, ಹರಿಹರ ದಾವಣಗೆರೆ, ಹರಪನಹಳ್ಳಿ, ಕೊಟ್ಟೂರು ಕೂಡ್ಲಿಗೆ, ದುಗ್ಗಾವತಿ, ಕಣಿವೆಹಳ್ಳಿ, ಸೊಂಡೂರು	ದಿ. 02-03-1934
• ಸೊಂಡೂರು, ಬಳ್ಳಾರಿ, ಹೊಸಪೇಟೆ ಭಾನಾಪುರ, ಗದಗ, ಜಕ್ಕಲಿ, ಹುಬ್ಬಳ್ಳಿ	ದಿ. 03-03-1934

● ಹುಬ್ಬಳ್ಳಿ, ಧಾರವಾಡ, ಅಮ್ಮಿನಭಾವಿ ಹಿರೇಉಳ್ಳಗೇರಿ, ಬೈಲಹೊಂಗಲ ಉಪ್ಪಿನ, ಬೆಟಗೇರಿ, ಸೌಂದತ್ತಿ ಸಂಪಗಾಂವ್, ಹೊಸೂರು, ಬೆಳಗಾವಿ	ದಿ. 04-03-1934
● ಬೆಳಗಾವಿ	ದಿ. 05-03-1934
● ಬೆಳಗಾವಿ	ದಿ. 06-03-1934
● ಬೆಳಗಾವಿ, ಯಮಕನಮರಡಿ, ವಂಟಮರಿ ಹುಕ್ಕೇರಿ, ಗೋಕಾಕ, ಸಂಕೇಶ್ವರ ನವಲೀಹಾಳ, ಚಿಕ್ಕೋಡಿ, ಅಂಕಲಿ	ದಿ. 07-03-1934
● ಶೆಡಬಾಳ, ಬನಹಟ್ಟಿ, ಅಥಣಿ ಬಿಜಾಪುರ (ವಿಜಯಪುರ), ತಿಕೋಟ, ತೊರವಿ ಇಳಕಲ್	ದಿ. 08-03-1934
● ನಂದಿ ಬೆಟ್ಟ	10-05-1936 ರಿಂದ 30-05-1936 ರವರೆಗೆ
● ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ ಕೋಲಾರ, ಬಂಗಾರ ಪೇಟೆ, ಕೆ. ಜಿ. ಎಫ್	31-05-1936
● ಬೆಂಗಳೂರು	01-06-1936 ರಿಂದ 12-06-1936 ರವರೆಗೆ
● ಬೆಳಗಾವಿ ಜಿಲ್ಲೆಯ ಹುದಲಿ	16-04-1937 ರಿಂದ 21-04-1937ರವರೆಗೆ

ಗಾಂಧಿ ಅವರ ನೀತಿ ಮಾರ್ಗ ಸೂಚಿ

ಏಕಾದಶ ವ್ರತಗಳು

ಸತ್ಯ	**Truth**
ಅಹಿಂಸೆ	**Ahimsa or Love**
ಅಸ್ತೇಯ (ಕದಿಯದಿರುವುದು)	**Non-Stealing**
ಬ್ರಹ್ಮಚರ್ಯ	**Brahmacharya or Chastity**
ಅಸಂಗ್ರಹ (ಅಪರಿಗ್ರಹ)	**Non-Possession**
ಶರೀರ ಶ್ರಮ	**Physical Labour**
ಅಸ್ವಾದ (ನಾಲಿಗೆ ಚಪಲ)	**Control on the Palate**
ಸರ್ವತ್ರ ಭಯವರ್ಜನ (ಅಭಯ)	**Fearlessness**
ಸರ್ವಧರ್ಮ ಸಮಾನತ್ವ	**Equality of Religion**
ಸ್ವದೇಶಿ	**Swadeshi**
ಸ್ಪರ್ಶ ಭಾವನೆ (ಅಸ್ಪೃಶ್ಯತಾ ನಿವಾರಣೆ)	**Removal of Untouchability**

ಏಳು ಸಾಮಾಜಿಕ ಪಾತಕಗಳು Seven Social Sins

ತತ್ವರಹಿತ ರಾಜಕಾರಣ	**Politics without Principles**
ದುಡಿಮೆ ಇಲ್ಲದ ಸಂಪತ್ತು	**Wealth without Work**
ಆತ್ಮಸಾಕ್ಷಿ ಇಲ್ಲದ ಸಂತೋಷ	**Pleasure without Conscience**
ಚಾರಿತ್ರ್ಯವಿಲ್ಲದ ಶಿಕ್ಷಣ	**Education without Character**
ನೀತಿ ಇಲ್ಲದ ವ್ಯಾಪಾರ	**Commerce without Morality**
ಮಾನವೀಯತೆ ಇಲ್ಲದ ವಿಜ್ಞಾನ	**Science without Humanity**
ತ್ಯಾಗ ಇಲ್ಲದ ಪೂಜೆ	**Worship without Sacrifice**

– ಮಹಾತ್ಮ ಗಾಂಧೀಜಿ

ಹದಿನೆಂಟು ರಚನಾತ್ಮಕ ಕಾರ್ಯಗಳು
18 CONSTRUCTIVE PROGRAMMES

ಮತೀಯ ಐಕ್ಯತೆ	**Communal Unity**
ಅಸ್ಪೃಶ್ಯತಾ ನಿವಾರಣೆ	**Removal of Untouchability**
ಪಾನನಿರೋಧ	**Prohibition**
ಖಾದಿ	**Khadi**
ಇತರೆ ಗ್ರಾಮೋದ್ಯೋಗಗಳು	**Other village industries**
ಗ್ರಾಮ ನೈರ್ಮಲ್ಯ	**Village Sanitation**
ಮೂಲ ಶಿಕ್ಷಣ	**Basic Education**
ವಯಸ್ಕರ ಶಿಕ್ಷಣ	**Adult Education**
ಮಹಿಳಾ ಸಬಲೀಕರಣ	**Women Empowerment**
ಆರೋಗ್ಯ ಮತ್ತು ಶುಚಿತ್ವ ಶಿಕ್ಷಣ	**Hygiene & Health Education**
ಪ್ರಾದೇಶಿಕ ಭಾಷೆ	**Provincial Languages**
ರಾಷ್ಟ್ರಭಾಷೆ	**National Language**
ಆರ್ಥಿಕ ಸಮಾನತೆ	**Economic Equality**
ರೈತರ ಸಬಲೀಕರಣ	**Empowerment of Farmers**
ಕಾರ್ಮಿಕರ ಸಬಲೀಕರಣ	**Empowerment of Labours**
ಆದಿವಾಸಿ ಸಬಲೀಕರಣ	**Tribal Empowerment**
ಕುಷ್ಠರೋಗ ನಿರ್ಮೂಲನೆ	**Cure of Lepracy**
ವಿದ್ಯಾರ್ಥಿಗಳು	**Students**

ಪ್ರೊ. ಬಿ.ಆರ್ ಪೊಲೀಸ್‌ಪಾಟೀಲರು ಕನ್ನಡ ರಂಗಭೂಮಿಯ ಹಿರಿಯ ಪ್ರತಿಭೆ. ಕಾಲ ಕಾಲಕ್ಕೆ ಬದಲಾಗುತ್ತ ಹೋದ ರಂಗಭೂಮಿಯೊಂದಿಗೆ ಅವರು ಇದುವರೆಗೆ ನಿರಂತರವಾಗಿ ಬಂದಿದ್ದಾರೆ. ಹೊಸ ಹೊಸ ಪ್ರಯೋಗಗಳನ್ನು ನೀಡಿದ್ದಾರೆ. ಯಾವುದೇ ಒಂದು ಸಂಗತಿಯನ್ನು ರಂಗಪಠ್ಯ ಮತ್ತು ಪ್ರದರ್ಶನಗಳೆರಡರ ಸಾಧ್ಯತೆಗಳನ್ನು ಗಮನದಲ್ಲಿರಿಸಿಕೊಂಡು ಅವರು ತಮ್ಮ ಕೃತಿಗಳನ್ನು ರಚಿಸುತ್ತಾ ಬಂದಿದ್ದಾರೆ. ಐತಿಹಾಸಿಕ ಸಂಗತಿಗಳೊಂದಿಗೆ, ಸಮಕಾಲೀನ ಸಾಮಾಜಿಕ ವಾಸ್ತವತೆಗಳೊಂದಿಗೆ ಅವರು ಮುಖಾಮುಖಿಯಾದುದನ್ನು ನಾವು ಗಮನಿಸಬಹುದು. ರಂಗಭೂಮಿಯನ್ನು ಸಾಮಾಜಿಕ ಪರಿವರ್ತನೆಯ ವೇದಿಕೆಯಾಗಿ ಬಳಸಿಕೊಂಡವರಲ್ಲಿಯೂ ಬಿ.ಆರ್. ಪೊಲೀಸ್‌ಪಾಟೀಲರು ಮಹತ್ವದವರು. 'ನಾನಾನೆಂಬುದು ನಾನಲ್ಲ' ಎನ್ನುವ ಈ ನಾಟಕದಲ್ಲಿಯೂ ಕೂಡ ಗಾಂಧೀಜಿಯನ್ನು ನಮ್ಮ ಮುಂದೆ ನಿಲ್ಲಿಸುವುದರ ಮೂಲಕ ವರ್ತಮಾನದ ನಮ್ಮ ಬದುಕಿನ ಸಾಮಾಜಿಕ ತಾತ್ವಿಕತೆಗಳನ್ನು ಅವರು ಪ್ರಶ್ನಿಸುತ್ತಿದ್ದಾರೆ. ರಾಜಕೀಯ ಪರಿಶುದ್ಧತೆಯ ಕುರಿತು ಗಮನಸೆಳೆಯುತ್ತಿದ್ದಾರೆ. ಇಂಥ ಒಂದು ಅಪರೂಪದ ರಚನೆಯನ್ನು ಕೊಡಮಾಡಿರುವ ಪ್ರೊ. ಬಿ.ಆರ್. ಪೊಲೀಸ್‌ಪಾಟೀಲರನ್ನು ಹೃದಯ ಪೂರ್ವಕವಾಗಿ ಅಭಿನಂದಿಸುತ್ತೇನೆ. ಈ ಕೃತಿ ಸ್ವಾತಂತ್ರ್ಯೋತ್ಸವ – 75ರ ಸುಸಂಧರ್ಭದಲ್ಲಿ ಗಾಂಧಿ ಭವನದಿಂದ ಪ್ರಕಟವಾಗುತ್ತಿರುವುದು ಹೆಮ್ಮೆಯ ವಿಷಯವಾಗಿದೆ.

ಡಾ. ಬೇಲೂರು ರಘುನಂದನ
ಬೆಂಗಳೂರು

ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ, ಬೆಂಗಳೂರು – 560001